ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ (ರಿ)

Swamy Vivekananda Vidya Samsthe (R), Shikaripura

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ

**Kumadvathi College of Education**

ಅನುದಾನಿತ, ಕುವೆಂಪು ವಿಶ್ವವಿದ್ಯಾನಿಲಯಕ್ಕೆ ಶಾಶ್ವತ ಸಂಯೋಜಿತ, ಎನ್.ಸಿ.ಟಿ.ಇ. ಹಾಗೂ ಯು.ಜಿ.ಸಿ, ಅಧಿನಿಯಮ 2(f), ಸೆಕ್ಷನ್ 12(B) ಮನ್ನಣೆ ಪಡೆದಿದೆ ಮತ್ತು ನ್ಯಾಕ್‌ನಿಂದ B ಗ್ರೇಡ್ ಮಾನ್ಯತೆ ಹೊಂದಿದೆ.

Aided, Permanently Affiliated to Kuvempu University, Recognised by NCTE & UGC Act 2(f), Section 12(B) & NAAC Accredited with B Grade

ಶಿವಮೊಗ್ಗ ರಸ್ತೆ–Shivamogga Road ಶಿಕಾರಿಪುರ–Shikaripura – 577 427 ಶಿವಮೊಗ್ಗ ಜಿಲ್ಲೆ–Shivamogga Dist

☎: 08187 – 222383, 222 ಮಿಂಚಂಚೆ E-Mail:kumadvathibed@gmail.com




# Academic Activities Reports in Paper Media 2020-21 to 2016-17



**ಕನ್ನಡ ಪ್ರಭ 11-01-2021 ಸೋಮವಾರ ಪು.ಸಂ.02**

# ರಾಷ್ಟ್ರಗಳಿಗೆ ಸೇತುವೆಯಾಗಿದ್ದ ವಿವೇಕಾನಂದರು

## ಕುಮದ್ವತಿ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಆರ್.ಕೋಟೋಜಿರಾವ್ ಅಭಿಮತ



ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಾಚಾರ್ಯೆ ಜಯಶ್ರೀ ಮಾತನಾಡಿದರು.

• ಕನ್ನಡಪ್ರಭ ವಾರ್ತೆ ಶಿಕಾರಿಪುರ

ಭಾರತ ಮತ್ತು ಪಾಶ್ಚಾತ್ಯ ದೇಶಗಳ ಮಧ್ಯದ ಸೇತುವೆ ರೀತಿಯ ವ್ಯಕ್ತಿತ್ವವನ್ನು ಸ್ವಾಮಿ ವಿವೇಕಾನಂದರಲ್ಲಿ ಕಾಣಬಹುದಾಗಿದೆ ಎಂದು ಇಲ್ಲಿನ ಕುಮುದ್ವತಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕಪ್ರಾಧ್ಯಾಪಕಆರ್.ಕೋಟೋಜಿರಾವ್ ತಿಳಿಸಿದರು.

ಪಟ್ಟಣದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ವಾರ್ಷಿಕೋತ್ಸವಸಮಾರಂಭದಲ್ಲಿಸ್ವಾಮಿವಿವೇಕಾನಂದರ ಜೀವನ ಮತ್ತು ಯುವ ಜನತೆ ಎಂಬ ವಿಷಯದ ಕುರಿತು ಪ್ರಾಸ್ತಾವಿಕವಾಗಿ ಅವರು, ಭಾರತೀಯ ಪರಂಪರೆಯನ್ನು ಜಗತ್ತಿಗೆ ಸಾರಿದ ನೇತಾರ, ಯುವ ಜನರ ಆದರ್ಶರಾಗಿರುವ ಸ್ವಾಮಿ ವಿವೇಕಾನಂದರು ಚಿಕ್ಕ ವಯಸ್ಸಿನಲ್ಲೇ ಅಗಾಧವಾದ ಪಾಂಡಿತ್ಯ ಹೊಂದಿದ್ದರಲ್ಲದೆ ಆಳವಾದ ಅಧ್ಯಯನಶೀಲರಾಗಿ ಪುಸ್ತಕಗಳ ಮಾಹಿತಿ ಅವರ ಮಸ್ತಕದಲ್ಲಿ ಅಚ್ಚಳಿಯದೇ ಉಳಿಯುವಂತೆ ಗ್ರಹಿಸಿಕೊಂಡಿದ್ದರು. ಯಾರು ಯಾವುದೇ ಪ್ರಶ್ನೆ ಮಾಡಿದರೂ ಆಯಾ ಗ್ರಂಥಗಳಲ್ಲಿ ನಿರ್ದಿಷ್ಟ ಪುಟಗಳನ್ನು ನಮೂದಿಸುವುದರ ಮೂಲಕ ಉತ್ತರಿಸುತ್ತಿದ್ದರು. ಪ್ರಸ್ತುತದಲ್ಲಿ ವಿದ್ಯಾರ್ಥಿಗಳು ಪರೀಕ್ಷಾ ದೃಷ್ಟಿಯಿಂದ ಮಾತ್ರ ಅಧ್ಯಾಸ ಮಾಡುತ್ತಾರೆ. ಇಲ್ಲಿ ಸರಿಯಾದ ಅರ್ಥಗ್ರಹಿಕೆಯಿಲ್ಲದೇ, ಮಾಹಿತಿಯ ಅನ್ವಯವೂ ಇಲ್ಲದೇ ಕೌಶಲ್ಯಹೀನರಾಗುತ್ತಿದ್ದಾರೆ. ಈ ಅಂಶವನ್ನು ಗಮನಿಸಿದರೆ ಯುವಜನರು ವಿವೇಕಾನಂದರನ್ನು ಅನುಕರಣೆ ಮಾಡುವುದು ಅನಿವಾರ್ಯವೆನಿಸುತ್ತದೆ ಎಂದು ಹೇಳಿದರು.

ಮಹಾತ್ಮ ಗಾಂಧಿಯವರು ಹೇಳಿದ ಹಾಗೆ ಭಾರತವನ್ನು ತಿಳಿಯಬೇಕಾದರೆ ಸ್ವಾಮಿ ವಿವೇಕಾನಂದರ ಜೀವನವನ್ನು ತಿಳಿದರೆ ಸಾಕು ಇದೀ ಭಾರತದ ಪರಂಪರೆ ಅರ್ಥವಾಗುತ್ತದೆ. ಅನೇಕ ಟೀಕೆ, ಅವಮಾನಗಳನ್ನು ಅನುಭವಿಸಿಯೂ ಧೃತಿಗೆಡದೇ ಪಾಶ್ಚಾತ್ಯರ ಮನಗೆದ್ದು ಚಿಕಾಗೋ ವಿಶ್ವಧರ್ಮ ಸಮ್ಮೇಳನದಲ್ಲಿ ಭಾಗವಹಿಸಿ ಭಾರತೀಯ ಪರಂಪರೆಯನ್ನು ಎತ್ತಿಹಿಡಿಯುವ ಮೂಲಕ ಭಾರತ ಮತ್ತು ಪಾಶ್ಚಾತ್ಯ ದೇಶಗಳ ಸೇತುವೆ ರೀತಿ ವ್ಯಕ್ತಿತ್ವವಾಗಿ ಸ್ವಾಮಿ ವಿವೇಕಾನಂದರು ಹೊರಹೊಮ್ಮಿದರು. ಯುಗ ಯುಗಗಳವರೆಗೂ ವಿವೇಕಾನಂದರ ಬಗ್ಗೆ ತಿಳಿದುಕೊಳ್ಳುವುದು, ಆದರ್ಶಗಳನ್ನು ಅನುಸರಿಸುವುದು ಭಾರತೀಯರ ಆಶಯವಾಗಬೇಕು ಎಂದು ತಿಳಿಸಿದರು.

ಪ್ರಶಿಕ್ಷಣಾರ್ಥಿಗಳಿಗೆ ಬೀಳ್ಕೊಡುಗೆ ಸಮಾರಂಭದ ಅತಿಥಿಯಾಗಿ ಪಾಲ್ಗೊಂಡಿದ್ದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಆಡಳಿತ ಸಂಯೋಜನಾಧಿಕಾರಿ ಕುಬೇರಪ್ಪ.ಕೆ ಮಾತನಾಡಿ, ಭಾರತದ ಭವಿಷ್ಯ ಶಿಕ್ಷಕರ ಕೈಯಲ್ಲಿದೆ. ಈ ಶಿಕ್ಷಕರ ವೃತ್ತಿ ಬೇರೆ ವೃತ್ತಿಗಳಿಗಿಂತ ಹೆಚ್ಚು ಗೌರವವನ್ನು ಹೊಂದಿದೆ. ಆದಕ್ಕೆ ಪೂರಕವಾಗಿ ಭಾವಿ ಶಿಕ್ಷಕರಾದ ಪ್ರಶಿಕ್ಷಣಾರ್ಥಿಗಳು ಸೂಕ್ತ ಸಿದ್ಧತೆ ಮಾಡಿಕೊಳ್ಳಬೇಕು ಮತ್ತು ಬೋಧನಾ ಕೌಶಲ್ಯಗಳನ್ನು ರೂಢಿಸಿಕೊಳ್ಳಬೇಕು. ಭವಿಷ್ಯದಲ್ಲಿ ಹೆಚ್ಚು ಸ್ಪರ್ಧಾತ್ಮಕತೆಯುಂಟಾಗುತ್ತಿದ್ದು, ಹೆಚ್ಚಿನ ಅಭ್ಯಾಸವನ್ನು ಕೈಗೊಂಡು ಉತ್ತಮ ಜೀವನ ರೂಪಿಸಿಕೊಳ್ಳಬೇಕೆಂದು ಶುಭ ಕೋರಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಪ್ರಾಚಾರ್ಯರಾದ ಡಾ.ವಿ.ಆರ್.ಜಯಶ್ರೀ ವಹಿಸಿದ್ದರು.

ಭಾಷಾಸಂಘ, ವಿಜ್ಞಾನ ಸಂಘದ ಅಡಿಯಲ್ಲಿ ಹಮ್ಮಿಕೊಂಡಿದ್ದ ಸ್ಪರ್ಧಾ ಕಾರ್ಯಕ್ರಮಗಳಲ್ಲಿ ವಿಜೇತರಾದ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಎಲ್ಲ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಾಧ್ಯಾಪಕ ದೇವರಾಜಪ್ಪ ವಾರ್ಷಿಕ ವರದಿ ವಾಚನ ಮಾಡಿದರು. ಶಿಲ್ಪಾ ಮತ್ತು ಸಂಗಡಿಗರು ಪ್ರಾರ್ಥಿಸಿ, ದಿವ್ಯ ಸ್ವಾಗತಿಸಿ, ಕಾವ್ಯ ನಿರೂಪಿಸಿ, ಲಕ್ಷ್ಮಿ ವಂದಿಸಿದರು.

**ಉದಯವಾಣಿ 27-01-2021 ಬುಧವಾರ ಪು.ಸಂ.04**

# ಶಿಕ್ಷಕರಲ್ಲಿರಲಿ ಸಂದರ್ಶನ ಎದುರಿಸುವ ಕೌಶಲ

ಶಿಕಾರಿಪುರ: ಶಿಕ್ಷಕರಾಗುವವರು, ನಾಡು ಕಟ್ಟುವ ವಿದ್ಯಾರ್ಥಿಗಳನ್ನು ಸೃಷ್ಟಿಸುವವರು ಪ್ರಜ್ಞಾಪೂರ್ವಕವಾಗಿ ಪರಿಣಾಮಕಾರಿ ತರಬೇತಿಯೊಂದಿಗೆ ಸಂದರ್ಶನ ಎದುರಿಸುವ ಕೌಶಲ ಪಡೆಯುವುದು ಅನಿವಾರ್ಯ ಎಂದು ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ ಹೇಳಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಅಂಗ ಸಂಸ್ಥೆಯಾದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಏರ್ಪಡಿಸಿದ್ದ ಸಂದರ್ಶನ ಎದುರಿಸುವುದು ಹೇಗೆ? ಪ್ರಾತ್ಯಕ್ಷಿಕೆ ಮತ್ತು ಕ್ಯಾಂಪಸ್ ಸಂದರ್ಶನ ಕಾರ್ಯಕ್ರಮದಲ್ಲಿ ಮಾತನಾಡಿ, ಮೊದಲು ನಮ್ಮಲ್ಲಿ ಶಿಸ್ತು ಮತ್ತು ಅನುಶಾಸನಗಳ ಅಗತ್ಯವಿದೆ ಎಂದರು.

21ನೇ ಶತಮಾನದಲ್ಲಿ ನಾವಿನ್ಯಾಧಾರಿತ ಬೋಧನಾ ವಿಧಾನಗಳು, ಉಪಕ್ರಮಗಳು ವಿಭಿನ್ನವಾಗಿವೆ. ಅವು ವಿದ್ಯಾರ್ಥಿ ಕೇಂದ್ರಿತವಾಗಿವೆ. ಮಕ್ಕಳ ಮನೋಮಟ್ಟಕ್ಕೆ ಅನುಸರಿಸಿ ಬೋಧನೆ ಕೈಗೊಳ್ಳಬೇಕಾದರೆ ವಿಶೇಷ ತರಬೇತಿ ಅವಶ್ಯ. ನಮ್ಮ ಪ್ರತಿ ಹೆಜ್ಜೆ ಕೂಡ ಪ್ರಯತ್ನಶೀಲವಾಗಿರಬೇಕು. ಸತ್ವಯುತ ಬೋಧನೆಯನ್ನು ಸಮರ್ಥವಾಗಿ ಮಾಡಿದಾಗ ಅದು ವಿದ್ಯಾರ್ಥಿಗಳ ಮನದಲ್ಲಿ ಚಿರಸ್ಥಾಯಿಯಾಗಿ ನಿಲ್ಲಬಲ್ಲದು ಎಂದು ಹೇಳಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಆಡಳಿತ ಸಮನ್ವಯಾಧಿಕಾರಿ ಕೆ.ಕುಬೇರಪ್ಪ, ಕುಮುದ್ವತಿ ವಿಜ್ಞಾನ ಮತ್ತು ವಾಣಿಜ್ಯ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಡಾ. ಎಂ.ವೀರೇಂದ್ರ, ಮೈತ್ರಿ ಶಿಕ್ಷಣ ಸಂಸ್ಥೆಯ ಆಡಳಿತಾಧಿಕಾರಿ ಕೆ.ಆರ್.ದಯಾನಂದ, ಪ್ರಾಚಾರ್ಯೆ ಡಾ. ವಿ.ಆರ್.ಜಯಶ್ರೀ ಇತರರಿದ್ದರು.

# ಸಿಎಂ ಯಡಿಯೂರಪ್ಪ ಹುಟ್ಟುಹಬ್ಬ: ಉಚಿತ ಆರೋಗ್ಯ ತಪಾಸಣೆ ಶಿಬಿರ

## ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಆವರಣದಲ್ಲಿ ಕಾರ್ಯಕ್ರಮಕ್ಕೆ ಡಾ.ಚಂದ್ರಪ್ಪ ಚಾಲನೆ

• **ಕನ್ನಡಪ್ರಭವಾರ್ತೆ** ಶಿಕಾರಿಪುರ

ಸರ್ವರ ಆರೋಗ್ಯ ಕಾಪಾಡುವುದು ಆರೋಗ್ಯ ಇಲಾಖೆ ಸಂಕಲ್ಪವಾಗಿದ್ದು, ಪೂರಕವಾಗಿ ಸಾರ್ವಜನಿಕರು ಸ್ಪಂದಿಸಿ ಇಲಾಖೆ ಜತೆಗೆ ಸಹಕರಿಸುವಂತೆ ತಾಲೂಕು ವೈದ್ಯಾಧಿಕಾರಿ ಡಾ. ಚಂದ್ರಪ್ಪ ತಿಳಿಸಿದರು.

ಶನಿವಾರ ಮುಖ್ಯಮಂತ್ರಿ ಯಡಿಯೂರಪ್ಪ ಹುಟ್ಟುಹಬ್ಬ ಹಾಗೂ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ 25ನೇ ವರ್ಷದ ಬೆಳ್ಳಿ ಹಬ್ಬದ ಅಂಗವಾಗಿ ತಾಲೂಕು ಆರೋಗ್ಯ ಇಲಾಖೆ ವತಿಯಿಂದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಆವರಣದಲ್ಲಿ ಆಯೋಜಿಸಲಾಗಿದ್ದ ಉಚಿತ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು. ಮುಖ್ಯಮಂತ್ರಿ ಹುಟ್ಟುಹಬ್ಬದ ದಿನದಂದು ಉಚಿತವಾಗಿ ಆರೋಗ್ಯ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ ಹಮ್ಮಿಕೊಂಡಿರುವುದರಿಂದ ಜನರಿದ್ದಲ್ಲಿಯೇ ಬಂದು ಆರೋಗ್ಯ ತಪಾಸಣೆ ಮಾಡುವ ಸದಾವಕಾಶ ಇಲಾಖೆಗೆ ದೊರೆತಿದೆ ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್. ಗದಗ್ ಮಾತನಾಡಿ, ಯಡಿಯೂರಪ್ಪನವರ ಕನಸಿನ ಕೂಸಾದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ 25 ವರ್ಷ ಪೂರೈಸಿ ಬೆಳ್ಳಿಹಬ್ಬದ ಸಂದರ್ಭದಲ್ಲಿ ತಾಲೂಕಿನ ಭದ್ರಾಪುರ, ನಂದಿಹಳ್ಳಿ, ತರಲಘಟ್ಟ, ದೂಪದಹಳ್ಳಿ, ತಿಮ್ಮಾಪುರ ಮತ್ತು ತರಲಘಟ್ಟ ಕ್ಯಾಂಪ್ ಜನರಿಗೆ ಉಚಿತ ಆರೋಗ್ಯ ತಪಾಸಣೆ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಅರ್ಹ ಫಲಾನುಭವಿಗಳಿಗೆ ಆಯುಷ್ಮಾನ್ ಭಾರತ, ಆರೋಗ್ಯ ಕರ್ನಾಟಕ ಕಾರ್ಡ್ ಸಹಿತ 800ಕ್ಕೂ ಅಧಿಕ ಜನತೆಗೆ ರಕ್ತ ಗುಂಪು ಪರೀಕ್ಷೆ, ಎಚ್‌ಬಿ ಪರೀಕ್ಷೆ, ಇಸಿಜಿ, ಸಾಮಾನ್ಯ ಪರೀಕ್ಷೆ, ಚರ್ಮರೋಗ, ಸ್ತ್ರೀರೋಗ, ಕೀಲು ಮೂಳೆ ಪರೀಕ್ಷೆ, ದಂತ ಪರೀಕ್ಷೆ, ಮಕ್ಕಳ ಆರೋಗ್ಯ ತಪಾಸಣೆ ನಡೆಸಿ ಚಿಕಿತ್ಸೆ ಜತೆ ಉಚಿತ ಔಷಧ ವಿತರಿಸಲಾಯಿತು. ಉನ್ನತ ಚಿಕಿತ್ಸೆಗೆ ವೈದ್ಯರಿಂದ ಶಿಫಾರಸ್ಸುಗೊಂಡ ರೋಗಿಗಳನ್ನು ಪರಸ್ಥಳಕ್ಕೆ ಕಳುಹಿಸಲಾಯಿತು.

ಶಿಕ್ಷಣ ಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ಶರಾವತಿ ದಂತ ವೈದ್ಯಕೀಯ ಮಹಾವಿದ್ಯಾಲಯದ ಸಂಯೋಜಕ ಡಾ. ನಾಗೇಂದ್ರ ಶೆಟ್ಟಿ, ನಿರ್ದೇಶಕ ಡಾ. ಸ್ವರೂಪ್, ಸ್ತ್ರೀರೋಗ ತಜ್ಞೆ ಡಾ. ಗಂಗೀಬಾಯಿ, ಡಾ. ಚಂದ್ರಕಾಂತ್, ಬಿಎಚ್‌ಇಒ ವೈ.ಎಂ. ಪೂಜಾರ್, ಶಿವೇಶ್, ನಾಗರೀಕ ಸಹಾಯವಾಣಿ ಮುಖ್ಯಸ್ಥ ಮಂಜಪ್ಪ, ಸಂಸ್ಥೆಯ ಆಡಳಿತ ಸಂಯೋಜನಾಧಿಕಾರಿ ಕುಬೇರಪ್ಪ, ದಯಾನಂದ ಕೆ.ಆರ್., ಪ್ರಾಚಾರ್ಯ ಡಾ. ಜಿ.ಆರ್. ಹೆಗಡೆ, ಡಾ. ಜಯಶ್ರೀ, ಡಾ. ವೀರೇಂದ್ರ, ವಿದ್ಯಾಶಂಕರ್, ಬೋಧಕ ಬೋಧಕೇತರ ಸಿಬ್ಬಂದಿ, ಆರೋಗ್ಯ ಇಲಾಖೆ ಸಿಬ್ಬಂದಿ, ಪ್ರಶಿಕ್ಷಣಾರ್ಥಿಗಳು, ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ಶನಿವಾರ ಸಿಎಂ ಯಡಿಯೂರಪ್ಪ ಹುಟ್ಟುಹಬ್ಬ ಅಂಗವಾಗಿ ನಡೆದ ಆರೋಗ್ಯ ತಪಾಸಣೆ, ಚಿಕಿತ್ಸಾ ಶಿಬಿರದಲ್ಲಿ ತಾ. ಆರೋಗ್ಯಾಧಿಕಾರಿ ಡಾ. ಚಂದ್ರಪ್ಪ ಮತ್ತಿತರರು ಇದ್ದರು.

ಕನ್ನಡ ಪ್ರಭ 11-03-2021 ಗುರುವಾರ ಪು.ಸಂ.02

**ಶಿಕ್ಷಣ ಚಟುವಟಿಕೆ** ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸುಜ್ಞಾನ ವಾರ್ಷಿಕ ಸಂಚಿಕೆ ಬಿಡುಗಡೆ

# ಮಕ್ಕಳಲ್ಲಿ ಸೃಜನಶೀಲತೆ ಬೆಳೆಸಬೇಕು: ಡಾ. ಜಯಶ್ರೀ ಸಲಹೆ

• ಕನ್ನಡಪ್ರಭ ವಾರ್ತೆ [illegible]

[illegible]



[illegible]

[illegible]

ಪ್ರಜಾವಾಣಿ 03-03-2021 ಬುಧವಾರ ಪು.ಸಂ.03



ಶಿಕಾರಿಪುರ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಚೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜನ್ಮದಿನ ಹಾಗೂ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ 25ನೇ ವರ್ಷದ ಬೆಳ್ಳಿಹಬ್ಬ ಪ್ರಯುಕ್ತ ಉಚಿತ ಆರೋಗ್ಯ ತಪಾಸಣಾ ಶಿಬಿರ ನಡೆಯಿತು

# ‘ಆರೋಗ್ಯಕ್ಕೆ ಆದ್ಯತೆ ನೀಡಿ’

ಶಿಕಾರಿಪುರ: ಪ್ರತಿಯೊಬ್ಬರೂ ಸದೃಢ ಆರೋಗ್ಯ ಕಾಪಾಡಿಕೊಳ್ಳಲು ವೈದ್ಯರ ಸಲಹೆ ಪಡೆಯಬೇಕು ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ.ಚಂದ್ರಪ್ಪ ಸಲಹೆ ನೀಡಿದರು.

ಪಟ್ಟಣದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಚೆಗೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಜನ್ಮದಿನ ಹಾಗೂ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ 25ನೇ ವರ್ಷದ ಬೆಳ್ಳಿಹಬ್ಬ ಪ್ರಯುಕ್ತ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ಮನುಷ್ಯನ ಜೀವನದಲ್ಲಿ ಆರೋಗ್ಯ ಪ್ರಮುಖ ಪಾತ್ರ ವಹಿಸುತ್ತದೆ. ಕೊರೊನಾ ಕಾರಣ ಬಹುತೇಕರು ಆಸ್ಪತ್ರೆಗೆ ಬಂದು ಚಿಕಿತ್ಸೆ ಪಡೆಯಲು ಹಿಂಜರಿಯುತ್ತಿದ್ದರು. ಪ್ರಸ್ತುತ ಕೊರೊನಾ ನಿಯಂತ್ರಣದಲ್ಲಿದ್ದು, ಆಸ್ಪತ್ರೆಗೆ ಬಂದು ಆರೋಗ್ಯ ಸೇವೆಯನ್ನು ಸಾರ್ವಜನಿಕರು ಪಡೆದುಕೊಳ್ಳಬಹುದಾಗಿದೆ ಎಂದು ಸಲಹೆ ನೀಡಿದರು.

ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ, ‘ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಕನಸಿನ ಕೂಸಾದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ 25 ವರ್ಷಗಳನ್ನು ಪೂರೈಸಿ, ಬೆಳ್ಳಿಹಬ್ಬವನ್ನು ಆಚರಿಸಿಕೊಳ್ಳುತ್ತಿದೆ. ಈ ಸಂದರ್ಭದಲ್ಲಿ ತಾಲ್ಲೂಕಿನ ನಂದಿಹಳ್ಳಿ, ತರಲಘಟ್ಟ, ದೂಪದಹಳ್ಳಿ, ತಿಮ್ಲಾಪುರ ಮತ್ತು ತರಲಘಟ್ಟ ಕ್ಯಾಂಪ್ ಗ್ರಾಮಗಳಿಂದ ಬಂದಿದ್ದ ಜನಸಾಮಾನ್ಯರಿಗೆ ಉಚಿತವಾಗಿ ಆರೋಗ್ಯ ತಪಾಸಣೆಯನ್ನು ತಾಲ್ಲೂಕು ಆರೋಗ್ಯ ಇಲಾಖೆಯ ಸಹಯೋಗದಲ್ಲಿ ಕೈಗೊಂಡಿರುವುದು ಸಂತಸ ತಂದಿದೆ’ ಎಂದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ಶರಾವತಿ ದಂತ ವೈದ್ಯಕೀಯ ಮಹಾವಿದ್ಯಾಲಯ ಸಂಯೋಜಕ ಡಾ.ನಾಗೇಂದ್ರ ಶೆಟ್ಟಿ, ನಿರ್ದೇಶಕ ಡಾ.ಸ್ವರೂಪ್, ಸ್ತ್ರೀರೋಗ ತಜ್ಞೆ ಡಾ.ಗಂಗೀಬಾಯಿ, ಕೆ. ಕುಬೇರಪ್ಪ, ಡಾ.ಜಯಶ್ರೀ, ಡಾ.ಜಿ.ಆರ್. ಹೆಗಡೆ, ಡಾ. ವೀರೇಂದ್ರ, ವಿದ್ಯಾಶಂಕರ್, ಸಹಾಯಕ ಪ್ರಾಧ್ಯಾಪಕರಾದ ದೇವರಾಜ್, ಕೋಟೋಜಿರಾವ್, ಡಾ. ರವಿ ಉಪಸ್ಥಿತರಿದ್ದರು.

ಕನ್ನಡ ಪ್ರಭ 13-04-2021 ಮಂಗಳವಾರ ಪು.ಸಂ.02

# ಲಸಿಕೆ ಅಭಿಯಾನ: ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಸಾಥ್



ಕನ್ನಡ ಪ್ರಭ 03-10-2021 ಭಾನುವಾರ ಪು.ಸಂ.02

ಗಾಂಧೀ ಜಯಂತಿ ಕಾರ್ಯಕ್ರಮ — ಶಿಕಾರಿಪುರದಲ್ಲಿ ಫಿಟ್ ಇಂಡಿಯಾ ಫ್ರೀಡಂ ರನ್ 2.0, ಗಾಂಧೀ ಜಯಂತಿ ಕಾರ್ಯಕ್ರಮದಲ್ಲಿ ಸಂಸದ ರಾಘವೇಂದ್ರ

# ಗಾಂಧೀಜಿ ಆದರ್ಶಗಳನ್ನು ವಿದ್ಯಾರ್ಥಿಗಳು ಅಳವಡಿಸಿಕೊಳ್ಳಿ



ವಿಜಯವಾಣಿ 13–04–2021 ಮಂಗಳವಾರ ಪು.ಸಂ.05

# ವಿವೇಕಾನಂದ ವಿದ್ಯಾ ಸಂಸ್ಥೆಗೆ 25ನೇ ವರ್ಷದ ಸಂಭ್ರಮ




ಶಿಕಾರಿಪುರದ ತಾಲೂಕಿನ ಕವಲಿ ಗ್ರಾಮದಲ್ಲಿ ಕರೊನಾ ಲಸಿಕಾ ಅಭಿಯಾನ ಏರ್ಪಡಿಸಲಾಗಿತ್ತು. ಮಲ್ಲನಗೌಡ, ರಾ.ಮೂಕಪ್ಪ, ನಾಗರಾಜ್, ಜಾನಕಿ ಇತರರಿದ್ದರು.

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯು ರಜತಮಹೋತ್ಸವದ ಸಂಭ್ರಮದಲ್ಲಿದೆ. ಹಲವು ಸಾಮಾಜಿಕ ಕಾರ್ಯಗಳಿಂದ ಆಚರಣೆಯನ್ನು ಸಾರ್ಥಕ್ಯಗೊಳಿಸಲು ಮುಂದಾಗಿದೆ ಎಂದು ತಾಪಂ ಸದಸ್ಯ ಕವಲಿ ಸುಬ್ರಹ್ಮಣ್ಯ ಹೇಳಿದರು.

> • ಸಾಮಾಜಿಕ ಕಾರ್ಯಗಳ ಮೂಲಕ ರಜತಮಹೋತ್ಸವ ಆಚರಣೆ

ಕವಲಿ ಗ್ರಾಮದಲ್ಲಿ ಆರೋಗ್ಯ ಇಲಾಖೆ ಮತ್ತು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಸಹಯೋಗದಲ್ಲಿ ಏರ್ಪಡಿಸಿದ್ದ ಕರೊನಾ ಲಸಿಕಾ ಅಭಿಯಾನದಲ್ಲಿ ಮಾತನಾಡಿ, ಕರೊನಾ 2ನೇ ಅಲೆಗೆ ಜನ ತತ್ತರಿಸುತ್ತಿದ್ದಾರೆ. ಈ ಬಗ್ಗೆ ಅರಿವು ಮೂಡಿಸಲು ಮತ್ತು ಲಸಿಕೆ ಹಾಕಿಸಿಕೊಳ್ಳಲು ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈ ಮೂಲಕ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ರಜತಮಹೋತ್ಸವ ಆಚರಿಸಿಕೊಳ್ಳುತ್ತಿರುವುದು ಮಾದರಿ ಎಂದು ಶ್ಲಾಘಿಸಿದರು.

ಮೈತ್ರಿ ಶಾಲೆ ಆಡಳಿತಾಧಿಕಾರಿ ಆರ್.ಕೆ.ದಯಾನಂದ್ ಮಾತನಾಡಿ, ಸಿಎಂ ಬಿ.ಎಸ್.ಯಡಿಯೂರಪ್ಪ ಹಾಗೂ ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಅವರ ಆಶಯದಂತೆ ತಾಲೂಕಿನಲ್ಲಿ ಕರೊನಾ ಲಸಿಕಾ ಅಭಿಯಾನವನ್ನು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ, ಆರೋಗ್ಯ ಇಲಾಖೆ ಸಹಯೋಗದಲ್ಲಿ ಕೈಗೊಂಡಿದೆ ಎಂದರು.

ಹಾರೋಗೊಪ್ಪ, ಚಿಕ್ಕಜೋಗಿಹಳ್ಳಿ, ಕಪ್ಪನಹಳ್ಳಿ, ಮತ್ತಿಕೋಟೆ, ಮೂರುವಳ್ಳಿ, ಕಾಗಿನೆಲ್ಲಿ, ಹೊಸೂರು, ಚಿಕ್ಕಜಂಬೂರು, ಮಳವಳ್ಳಿ, ಸುಣ್ಣದಕೊಪ್ಪ, ಕೊಗನೂರು, ಹಾಗರುಂದ, ಹರಗಿ ಗ್ರಾಪಂ ವ್ಯಾಪ್ತಿಯ ಜನರು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಬಂದು ಲಸಿಕೆ ಹಾಕಿಸಿಕೊಂಡರು. ಜನರನ್ನು ಕರೆತರಲು ವಿದ್ಯಾಸಂಸ್ಥೆಯಿಂದ 12 ಬಸ್‌ಗಳನ್ನು ನಿಯೋಜಿಸಲಾಗಿದೆ ಎಂದು ತಿಳಿಸಿದರು. ಅಭಿಯಾನ ಏ.20ರವರೆಗೆ ನಡೆಯಲಿದೆ. ಮೊದಲ ದಿನ 1,550 ಮಂದಿ, 2ನೇ ದಿನ 1,468, 3ನೇ ದಿನ 1,404 ಜನರಿಗೆ ಲಸಿಕೆ ಹಾಕಲಾಗಿದೆ. ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಗೆ 25 ವರ್ಷ ತುಂಬಿದ ಪ್ರಯುಕ್ತ ಸಾಮಾಜಿಕ ಕಳಕಳಿಯ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸುರಕ್ಷತೆ ದೃಷ್ಟಿಯಿಂದ ಎಲ್ಲರೂ ಲಸಿಕೆ ಹಾಕಿಸಿಕೊಳ್ಳಬೇಕೆಂದು ಮನವಿ ಮಾಡಿದರು.

ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಮಲ್ಲನಗೌಡ, ಗ್ರಾಪಂ ಸದಸ್ಯ ರಾ.ಮೂಕಪ್ಪ, ಉಮೇಶ್, ಪಿಡಿಒ, ನಾಗರಾಜ್, ಆರೋಗ್ಯ ಇಲಾಖೆಯ ಮಧು, ಆಶಾ ಕಾರ್ಯಕರ್ತೆ ಜಾನಕಿ ಇದ್ದರು.

**ಕನ್ನಡ ಪ್ರಭ 15-04-2021 ಗುರುವಾರ ಪು.ಸಂ.04**

# ಕೋವಿಡ್ ಲಸಿಕೆ ಪಡೆದ ಸಂಸದ ರಾಘವೇಂದ್ರ

## ಮತದಾನ ಆಸಕ್ತಿಯಂತೆ ತೆರಳಿ ಲಸಿಕೆ ಪಡೆಯಬೇಕು | ಮಾರ್ಗಸೂಚಿ ಪಾಲನೆ ಎಲ್ಲರ ಕರ್ತವ್ಯ

ಶಿಕಾರಿಪುರ: ಪ್ರತಿಯೊಬ್ಬರೂ ಕೋವಿಡ್ ಲಸಿಕೆ ಕಡ್ಡಾಯವಾಗಿ ಹಾಕಿಸಿಕೊಂಡು ರೋಗಮುಕ್ತ ಸಮಾಜಕ್ಕೆ ಕೈಜೋಡಿಸುವಂತೆ ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ಬುಧವಾರ ಪಟ್ಟಣದ ಆಶ್ರಯ ಬಡಾವಣೆಯಲ್ಲಿನ ಸಾರ್ವಜನಿಕ ಆಸ್ಪತ್ರೆ ಉಪಕೇಂದ್ರದಲ್ಲಿ ಮೊದಲು ಲಸಿಕೆ ಪಡೆದು ಕೋವಿಡ್ ಲಸಿಕಾ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ರಾಜ್ಯದಲ್ಲಿ ಹೆಚ್ಚುತ್ತಿರುವ ಸೋಂಕು ಪ್ರಕರಣಗಳ ಬಗ್ಗೆ ಆತಂಕ ವ್ಯಕ್ತಪಡಿಸಿದರು.

ಕೋವಿಡ್ ಮಹಾಮಾರಿಯನ್ನು ತಡೆಗಟ್ಟಲು ಸಂಘಟಿತ ಒಗ್ಗಟ್ಟು ಮೂಲಕ ಮಾತ್ರ ಸಾಧ್ಯ. ಸಾಮಾಜಿಕ ಅಂತರ, ಸ್ಯಾನಿಟೈಸರ್, ಮಾಸ್ಕ್ ಕಟ್ಟುನಿಟ್ಟಾಗಿ ಪಾಲಿಸುವುದು ಪ್ರತಿಯೊಬ್ಬರ ಕರ್ತವ್ಯ ಎಂದು ತಿಳಿಸಿದರು. ಮತದಾನಕ್ಕೆ ತೋರುವ ಆಸಕ್ತಿಯಂತೆ ಪ್ರತಿಯೊಬ್ಬರೂ ಲಸಿಕಾ ಕೇಂದ್ರಕ್ಕೆ ತೆರಳಿ ಕೋವಿಡ್ ಲಸಿಕೆ ಪಡೆಯಬೇಕು. ಜಿಲ್ಲೆಗೆ 1.66 ಲಕ್ಷ ಡೋಸ್ ಕೋವಿಶೀಲ್ಡ್ ಲಸಿಕೆ ಸರಬರಾಜಾಗಿದ್ದು ಇದುವರೆಗೆ 1.53 ಲಕ್ಷ ಡೋಸ್ ವಿತರಿಸಲಾಗಿದೆ. ಕೋವ್ಯಾಕ್ಸಿನ್ 16,930 ಡೋಸ್ ಸರಬರಾಜಾಗಿದ್ದು 10,590 ಡೋಸ್ ವಿತರಿಸಲಾಗಿದೆ ಎಂದು ವಿವರಿಸಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾ.ರಾಜೇಶ್ ಸುರಗೀಹಳ್ಳಿ, ತಾಲೂಕು ವೈದ್ಯಾಧಿಕಾರಿ ಡಾ.ಚಂದ್ರಪ್ಪ, ಎಸ್.ಪಿ.ಸುರೇಶ್, ಪುರಸಭಾ ಸದಸ್ಯ ಪಾಲಾಕ್ಷಪ್ಪ, ರೂಪಕಲಾ ಹೆಗ್ಡೆ, ಉಮಾವತಿ, ಮುಖ್ಯಾಧಿಕಾರಿ ಸುರೇಶ್, ರಾಜಕುಮಾರ್, ಮೆಸ್ಕಾಂ ನಿರ್ದೇಶಕ ರುದ್ರೇಶ್, ಎಡಿಎ ಪರಶುರಾಮಪ್ಪ ಬೆಣ್ಣೆ, ಎಪಿಎಂಸಿ ನಿರ್ದೇಶಕ ಸುಧೀರ್, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಮುಖ್ಯಸ್ಥ ಶ್ರೀ ಗದಗ್, ಕುಬೇರಪ್ಪ, ದಯಾನಂದ್, ಡಾ. ಜಯಶ್ರೀ, ವಿದ್ಯಾಶಂಕರ್ ಮತ್ತಿತರರು ಹಾಜರಿದ್ದರು.



ಶಿಕಾರಿಪುರದ ಆಶ್ರಯ ಬಡಾವಣೆಯ ಲಸಿಕಾ ಕೇಂದ್ರದಲ್ಲಿ ಬುಧವಾರ ಸಂಸದ ಬಿ.ವೈ. ರಾಘವೇಂದ್ರ ಕೋವಿಡ್ ಲಸಿಕೆಯನ್ನು ಪಡೆದರು.

**ವಿಜಯವಾಣಿ 15-04-2021 ಗುರುವಾರ ಪು.ಸಂ.03**

# ಸುರಕ್ಷತಾ ಕ್ರಮ ಕಡ್ಡಾಯವಾಗಿ ಪಾಲಿಸಿ

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ದೇಶದಲ್ಲಿ ಕರೊನಾ ಎರಡನೇ ಅಲೆ ವೇಗವಾಗಿ ಹರಡುತ್ತಿದ್ದು ಸಾರ್ವಜನಿಕರು ಸುರಕ್ಷತೆಗಾಗಿ ಕರೊನಾ ನಿಯಂತ್ರಣ ಮಾರ್ಗಸೂಚಿ ಕಡ್ಡಾಯವಾಗಿ ಪಾಲಿಸಬೇಕು ಎಂದು ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಹೇಳಿದರು.

ಪಟ್ಟಣದ ಆಶ್ರಯ ಬಡಾವಣೆಯಲ್ಲಿ ಆರೋಗ್ಯ ಇಲಾಖೆ ಆಯೋಜಿಸಿದ್ದ ಕರೊನಾ ಲಸಿಕಾ ಉತ್ಸವದಲ್ಲಿ ಬುಧವಾರ ಲಸಿಕೆ ಹಾಕಿಸಿಕೊಂಡ ಬಳಿಕ ಮಾತನಾಡಿ, ಜಿಲ್ಲೆಗೆ 1.66 ಲಕ್ಷ ಕೋವಿಶೀಲ್ಡ್ ಲಸಿಕೆ ಬಂದಿದ್ದು ಈಗಾಗಲೇ 15,3350 ಲಸಿಕೆ ಜನರಿಗೆ ಹಾಕಲಾಗಿದೆ ಇನ್ನು 12,650 ಲಸಿಕೆ ಇದೆ. 16,930 ಕೋವ್ಯಾಕ್ಸಿನ್ ಲಸಿಕೆ ಜಿಲ್ಲೆಗೆ ಬಂದಿದ್ದು ಅದರಲ್ಲಿ 10,590 ಲಸಿಕೆ ನೀಡಲಾಗಿದ್ದು 6,340 ಡೋಸ್ ಲಸಿಕೆ ಉಳಿದಿದೆ ಎಂದು ಹೇಳಿದರು.

ಸ್ವಾಮಿ ವಿವೇಕಾನಂದ ಸಂಸ್ಥೆಯಿಂದ ಏ.9ರಿಂದ 20ರ ವರೆಗೆ ಆರೋಗ್ಯ ಇಲಾಖೆ ಸಹಯೋಗದಲ್ಲಿ ಲಸಿಕಾ ಅಭಿಯಾನ ಹಮ್ಮಿಕೊಳ್ಳಲಾಗಿದೆ. ಈಗಾಗಲೇ ಪ್ರತಿ ಪಂಚಾಯಿತಿ ಮತ್ತು ಪಿಎಚ್‌ಸಿ ಮಟ್ಟದಲ್ಲಿ 45ವರ್ಷ ಮೇಲ್ಪಟ್ಟ ನಾಗರಿಕರನ್ನು ಕರೆತಂದು ಲಸಿಕೆ ಹಾಕಿಸಲು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ 12 ಬಸ್ ಮತ್ತು ಪ್ರತಿಬಸ್‌ಗೆ ನಾಲ್ಕು ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ಹೇಳಿದರು.



ಶಿಕಾರಿಪುರದಲ್ಲಿ ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ಕರೊನಾ ಲಸಿಕೆ ಪಡೆದರು.

ಪ್ರತಿಯೊಬ್ಬರೂ ಕರೊನಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಿ, ಮಾಸ್ಕ್ ಧರಿಸದೇ ಹೊರ ಬರಬೇಡಿ. ವ್ಯಕ್ತಿಗತ ಅಂತರ ಕಾಯ್ದುಕೊಳ್ಳಿ. ದಿನದಿಂದ ದಿನಕ್ಕೆ ಸೋಂಕಿತರ ಸಂಖ್ಯೆ ಹೆಚ್ಚಾಗುತ್ತಿದೆ ಕರೊನಾ ನಮ್ಮ ಮನೆಯಂಗಳಕ್ಕೆ ಬಾರದಂತೆ ಜಾಗ್ರತೆ ವಹಿಸಬೇಕು. ಆರೋಗ್ಯ ಇಲಾಖೆ, ಆಶಾ, ಅಂಗನವಾಡಿ ಕಾರ್ಯಕರ್ತೆಯರು, ಪೌರ ಕಾರ್ಮಿಕರು ತಮ್ಮ ಜೀವದ ಹಂಗು ತೊರೆದು ಕೆಲಸ ಮಾಡುತ್ತಿದ್ದಾರೆ. ನಾವು ಅವರಿಗೆ ಸಹಕರಿಸಿ ಕರೊನಾ ಮಹಾಮಾರಿಯನ್ನು ಹೊಡೆದೋಡಿಸೋಣ ಎಂದರು.

ಮೆಸ್ಕಾಂ ನಿರ್ದೇಶಕ ರುದ್ರೇಶ್, ಜಿಪಂ ಸದಸ್ಯೆ ಮಮತಾ ಸಾಲಿ, ಪುರಸಭೆ ಸದಸ್ಯರಾದ ಉಮಾವತಿ, ಪಾಲಾಕ್ಷಪ್ಪ,

. ಸುವರ್ಣ ಪ್ರಭ 16-04-2021 ಶುಕ್ರವಾರ ಪು.ಸಂ.04

# ಸಂವಿಧಾನದ ಆಶಯ ಯಾರೂ ಪ್ರಶ್...
## ನಾಗರೀಕರಗೆ ನೀಡಿರುವ ಹಕ್ಕನ್ನು ಮೊಟಕುಗೊ...



ಸುವರ್ಣಪ್ರಭವಾರ್ತೆ

ಶಿಕಾರಿಪುರ(ಶಿವಮೊಗ್ಗ),ಏ.15: ಅಂಬೇಡ್ಕರ್ ಕೇವಲ ಒಬ್ಬ ವ್ಯಕ್ತಿ ಮಾತ್ರಅಲ್ಲ ಅವರು ಸಮಾನತೆಯ ಹರಿಕಾರರಾಗಿದ್ದರು. ಮಹಾನ್ ಭಾರತೀಯ ನ್ಯಾಯಶಾಸ್ತ್ರಜ್ಞ, ಅರ್ಥಶಾಸ್ತ್ರಜ್ಞ, ಶ್ರೇಷ್ಠರಾಜಕಾರಣಿ, ಸಾಮಾಜಿಕ ಸುಧಾರಕರಾಗಿ ದ್ದರು. ಅಲ್ಲದೇ, ದಲಿತ ಬೌದ್ಧ ಚಳವಳಿಯ ರೂವಾ ರಿಗಳಾಗಿದ್ದರು ಇವರ ಚಿಂತನೆಗಳು ಪ್ರಸ್ತುತ ದಿನ ಮಾನಗಳಿಗೂ ಕೂಡಾ ಚಿಂತನೆಗಳು ಅಗತ್ಯವಾಗಿವೆ ಸಂಸ್ಥೆಯ ಆಡಳಿತ ಸಮನ್ವ ಯಾಧಿ ಕಾರಿಗಳಾದ ಕುಬೇ ರಪ್ಪ ಎಂದು ಅಭಿಪ್ರಾಯ ಪಟ್ಟರು

ಪಟ್ಟಣದ ಸ್ವಾಮಿ ವಿವೇಕಾ ನಂದ ವಿದ್ಯಾಸಂಸ್ಥೆ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ, ಕುಮುದ್ವತಿ ಸಭಾಂಗಣದಲ್ಲಿ ಬುಧವಾರ ವಿವಿಧ ಅಂಗ ಸಂಸ್ಥೆಗಳ ಸಂಯುಕ್ತಾಶ್ರಯದಲ್ಲಿ 130ನೇ ಅಂಬೇಡ್ಕರ್ ಜಯಂತಿಯ ಕಾರ್ಯಕ್ರಮದಲ್ಲಿ ಮಾತ ನಾಡಿದ ಅವರು, ಸಂವಿಧಾನದ ಆಶಯವನ್ನು ... ಪ್ರಶ್ನೆ ಮಾಡಲು ಸ... ಆದರಡಿ ನಾಗರೀಕ... ರುವ ಹಕ್ಕನ್ನು ... ಗೊಳಿಸಲು ಸಾ... ಡಾ.ಬಿ.ಆರ್ ಅಂ... ಅವರ ಜನ್ಮದಿನ ...

# ಡಿಸಿಸಿ ಬ್ಯಾಂಕ್ ...
## ತಂತ್ರ ರಾಜಕೀ...

ಸುವರ್ಣಪ್ರಭವಾರ್ತೆ

ಶಿಕಾರಿಪುರ(ಶಿವಮೊಗ್ಗ),ಏ.15: ಡಿ.ಸಿ.ಸಿ ಬ್ಯಾಂಕ್ ಅಧ್ಯಕ್ಷರಾದ ಎಂ.ಬಿ. ಚನ್ನವೀರಪ್ಪ ಅವರ ಮೇಲೆ ಡಿಸಿಸಿ ಬ್ಯಾಂಕ್ ನಿರ್ದೇಶಕ ದುಗ್ಗಪ್ಪಗೌಡರ ಆರೋಪವು ರಾಜಕೀಯ ಪ್ರೇರಿತವಾದದ್ದು, ಇದು ಖಂಡನೀಯ ಎಂದು ಟಿಎಪಿಸಿಎಂಎಸ್‌ನ ಅಧ್ಯಕ್ಷ ಶಶಿಧರ್ ಚುರ್ಚಿಗುಂಡಿ ಆಗ್ರಹಿಸಿದರು.

ಪಟ್ಟಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದುಗ್ಗಪ್ಪ ಗೌಡರು ಹಿರಿಯ ನಿರ್ದೇಶಕರಾಗಿದ್ದು, ಅವರು ಮೂರು ಬಾರಿ ನಿರ್ದೇಶಕರಾಗಿ ಸೇವೆ ಸಲ್ಲಿಸಿದ ಅನುಭವ ಅವರಿಗೆ ಇದ್ದು, ಚನ್ನವೀರಪ್ಪನವರು 23 ಜನ ಡಿಸಿಸಿ ಸಿಬ್ಬಂದಿಗಳ ವರ್ಗಾವಣೆ ಆಡಳಿತ ಸುಧಾರಣೆಗಾಗಿ ಹಾಗೂ ಚುರುಕು ಮುಟ್ಟಿಸಲು ಸಿಬ್ಬಂದಿಗಳ ವರ್ಗಾವಣೆ ಮಾಡಿದ್ದಾರೆ ಎಂದು ರಾಜ್ಯ ಕೀಯ ಪ್ರೇರಿತ ...



ತಿಂಗಳು ಕಳೆದಿ... ಕ್ಷೇತ್ರದಲ್ಲಿ ಅನು... ಅವರು ಡಿಸಿ... ಭವಿಷ್ಯ ಭದ್ರತೆಯ... ನಿಟ್ಟಿನಲ್ಲಿ ಆಡಳಿ... ಕೆಲವು ಮಾಪಾ... ದ್ದಾರೆ. ಶೇರುದಾ... ಸಿಟ್ ದಾರರಿಗೆ ...

ಶಿಕಾರಿಪುರ. ... ದೇವಂಗಿ ... ಹಂತ, ... ತಾಲ್ಲೂಕುಗಳ ಪಂಚಾಯತಿ ... ಡಾಲರ್ಸ್ ಕಾಲ...

**ವಿಜಯವಾಣಿ 12–08–2021 ಗುರುವಾರ ಪು.ಸಂ.06**

ಶಿಕ್ಷಣ ನೀತಿ ಬೋಧನೆಗೆ ಪೂರಕ | ಬಿ.ವೈ.ರಾಘವೇಂದ್ರ ಅಭಿಮತ

# ಶೈಕ್ಷಣಿಕ ಕ್ಷೇತ್ರದಲ್ಲಿ ಹೊಸ ಮನ್ವಂತರ

ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ರಾಷ್ಟ್ರದ ಅಭಿವೃದ್ಧಿಯಲ್ಲಿ ಶಿಕ್ಷಣದ ಪಾತ್ರ ಪ್ರಮುಖ. ಶಿಕ್ಷಣ ಕ್ಷೇತ್ರದಲ್ಲಿ ಹೊಸ ಮನ್ವಂತರ ಆರಂಭವಾಗಿದ್ದು ಹೊಸ ಶಿಕ್ಷಣ ನೀತಿ ಪಥದಲ್ಲಿ ಹೆಚ್ಚಿನ ಮಾಹಿತಿಗಳು, ಪ್ರಾಕಾರಗಳು ಬೋಧನೆಗೆ ಪೂರಕವಾಗಲಿವೆ ಎಂದು ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಹೇಳಿದರು.



ಪಟ್ಟಣದ ಕುಮುದ್ವತಿ ಮಹಾವಿದ್ಯಾಲಯದಲ್ಲಿ ತಾಲೂಕಿನ ಎಲ್ಲ ಪ್ರಾಥಮಿಕ ಶಾಲಾ ಮುಖ್ಯ ಶಿಕ್ಷಕರಿಗೆ ಏರ್ಪಡಿಸಿದ್ದ ರಾಷ್ಟ್ರೀಯ ಶಿಕ್ಷಣ ನೀತಿ ಕುರಿತು ಒಂದು ದಿನದ ಕಾರ್ಯಾ ಗಾರದಲ್ಲಿ ಮಾತನಾಡಿ, ನಾವೆಲ್ಲರೂ ಇಂದಿನ ಶೈಕ್ಷಣಿಕ ಬದಲಾವಣೆ ವೇಗಕ್ಕೆ ಹೊಂದಿಕೊಳ್ಳಬೇಕು ಮತ್ತು ಶಿಕ್ಷಣದ ಹೊಸ ಹೊಸ ಆಯಾಮಗಳ ಅನುಭವ ನಮಗಾಗಬೇಕು ಎಂದರು.

ಶಿಕ್ಷಣ ಕ್ಷೇತ್ರದಲ್ಲಿ ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿ ಮೂಲಕ ಆಮೂಲಾಗ್ರ ಬದಲಾವಣೆ ತರುತ್ತಿದೆ. ತಾಲೂಕಿನಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಅನುಷ್ಠಾನಗೊಳಿಸಬೇಕು. ಇದರಲ್ಲಿ ಆನ್‌ಲೈನ್ ಮೂಲಕ ಡಿಜಿಟಲ್ ಸೇವೆಗೆ ಮುಂದಾಗಬೇಕಿದೆ. ಇಂದಿನ ಮಕ್ಕಳು ಸಾಮಾಜಿಕ ಜಾಲತಾಣಗಳ ಮೂಲಕ ಜ್ಞಾನ ವೃದ್ಧಿಸಿಕೊಳ್ಳುತ್ತಿದ್ದಾರೆ. ಶಿಕ್ಷಕರು ಆನ್‌ಲೈನ್ ತಂತ್ರಜ್ಞಾನಕ್ಕೆ ಆದ್ಯತೆ ನೀಡಬೇಕೆಂದರು. ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಬಿಇಒ ಜಿ.ಎಸ್.ಶಶಿಧರ್, 96 ಪುಟಗಳ ಕನ್ನಡ ಆವೃತ್ತಿ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಎಲ್ಲ ಶಿಕ್ಷಕರು ಕಡ್ಡಾಯವಾಗಿ ಓದಬೇಕು. ಆ.15ರಿಂದ 2022ರ ಆ.15ರವರೆಗೆ ಒಂದು ವರ್ಷದಲ್ಲಿ ಪ್ರಗತಿ ತೋರಿಸಬೇಕಿದೆ ಎಂದರು.

ಸಂಸ್ಥೆ ಅಧ್ಯಕ್ಷ ಎಂ.ಬಿ.ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷ ಮಧುಕೇಶವ್, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಚನ್ನೇಶಪ್ಪ, ಸಂಸ್ಥೆಯ ಆಡಳಿತಾಧಿಕಾರಿ ಎಸ್.ಎಸ್.ಗದಗ್, ಬಿಇಡಿ ಕಾಲೇಜು ಪ್ರಾಚಾರ್ಯೆ ಜಯಶ್ರೀ ಇದ್ದರು. ಉಪನ್ಯಾಸಕ ದೇವರಾಜ ಸ್ವಾಗತಿಸಿದರು. ವೀರೇಂದ್ರ ವಾಲಿ ನಿರೂಪಿಸಿದರು

> ದೇಶಾದ್ಯಂತ ಪ್ರಧಾನಿ ಮೋದಿ ನೇತೃತ್ವದಲ್ಲಿ ಎಲ್ಲ ಕ್ಷೇತ್ರಗಳಲ್ಲೂ ಡಿಜಿಟಲ್ ತಂತ್ರಜ್ಞಾನ ಅಳವಡಿಸಿಕೊಳ್ಳಲಾಗಿದೆ. ಅಂಗನವಾಡಿಯಿಂದಲೂ ಉಚಿತ ಶಿಕ್ಷಣ ನೀಡುವ ಯೋಜನೆ ಇದೆ. ಕುಮುದ್ವತಿ ಮಹಾವಿದ್ಯಾಲಯದಲ್ಲಿ ಶಿಕಾರಿಪುರ ತಾಲೂಕಿನ ಎಲ್ಲ ಪ್ರಾಥಮಿಕ ಶಾಲಾ ಮುಖ್ಯಶಿಕ್ಷಕರಿಗೆ ರಾಷ್ಟ್ರೀಯ ಶಿಕ್ಷಣ ನೀತಿ ಬಗ್ಗೆ ಒಂದು ದಿನದ ಕಾರ್ಯಾಗಾರ ಹಮ್ಮಿಕೊಳ್ಳಲಾಗಿದೆ.
> | ಬಿ.ವೈ.ರಾಘವೇಂದ್ರ ಲೋಕಸಭಾ ಸದಸ್ಯ

**ವಿಜಯವಾಣಿ 06–09–2021 ಸೋಮವಾರ ಪು.ಸಂ.02**

## ಜ್ಞಾನದ ಬೆಳೆ ತೆಗೆಯುವವರೇ ಶಿಕ್ಷಕರು

ಶಿಕಾರಿಪುರ: ಶಿಕ್ಷಕ ವೃತ್ತಿ ಸಮಾಜದ ಎಲ್ಲ ವೃತ್ತಿಗಳಿಗಿಂತ ಅತ್ಯಂತ ಶ್ರೇಷ್ಠ. ಖಾಲಿ ಎದೆಯೊಳಗೆ ಅಕ್ಷರದ ಬೀಜ ಬಿತ್ತಿ ಜ್ಞಾನದ ಬೆಳೆ ತೆಗೆಯುವ ಕಾಯಕ ಮಾಡುವವರೇ ಶಿಕ್ಷಕರು ಎಂದು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಶೈಕ್ಷಣಿಕ ಮಾರ್ಗದರ್ಶಕ ಪ್ರೊ. ಎಸ್.ಎಸ್.ಗದಗ್ ಹೇಳಿದರು. ಶಿಕ್ಷಕರ ದಿನಾಚರಣೆ ಅಂಗವಾಗಿ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ಡಾ. ರಾಧಾಕೃಷ್ಣನ್ ಜನ್ಮೋತ್ಸವದಲ್ಲಿ ಮಾತನಾಡಿ, ಗುರು ಪರಂಪರೆ ನಮ್ಮ ಮಣ್ಣಿನಲ್ಲಿ ಹಾಸುಹೊಕ್ಕಾಗಿದೆ. ಈ ನೆಲದಲ್ಲಿ ವಿಶೇಷವಾಗಿ ಗುರುಗಳಿಗೆ ಉನ್ನತ ಸ್ಥಾನವಿದೆ ಎಂದರು. ಯುವಪೀಳಿಗೆಯ ಭವಿಷ್ಯ ಬರೆಯುವ ಶಿಕ್ಷಕರೂ ಅಧ್ಯಯನಶೀಲರಾಗಿರಬೇಕು. ಸಚ್ಚಾರಿತ್ರ್ಯ ಉಳ್ಳವರಾಗಿರಬೇಕೆಂದು ಸಮಾಜ ನಿರೀಕ್ಷಿಸುತ್ತದೆ. ಆ ನಿರೀಕ್ಷೆ ಮೀರಿ ಬೆಳೆಯಬೇಕು. ಶಿಕ್ಷಕನಿಗೆ ವೃತ್ತಿ ಜತೆಗೆ ಸಾಮಾಜಿಕ ಕಳಕಳಿ ಕೂಡ ಮುಖ್ಯ ಎಂದು ಹೇಳಿದರು. ಡಾ. ವೀರೇಂದ್ರ ಕುಮಾರ್ ವಾಲಿ, ಡಾ. ಎಂ.ಯದುಕುಮಾರ್, ಡಾ. ಎಚ್.ರವಿ, ಎಸ್. ನಾಗೇಂದ್ರ, ಅನಿಲ್‌ಕುಮಾರ್ ಇದ್ದರು.



ಶಿಕಾರಿಪುರದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ಡಾ. ರಾಧಾಕೃಷ್ಣನ್ ಜನ್ಮೋತ್ಸವದಲ್ಲಿ ಪಾಲ್ಗೊಂಡಿದ್ದ ಶಿಕ್ಷಕ ಸಮೂಹ. ಪ್ರೊ. ಗದಗ್, ಎಂ.ಯದುಕುಮಾರ್, ಡಾ.ವೀರೇಂದ್ರ ಕುಮಾರ್ ವಾಲಿ, ಡಾ. ಎಚ್.ರವಿ, ಎಸ್.ನಾಗೇಂದ್ರ, ಅನಿಲ್‌ಕುಮಾರ್ ಇತರರಿದ್ದರು.

ವಿಜಯ ಕರ್ನಾಟಕ 03-10-2021 ಭಾನುವಾರ ಪು.ಸಂ.06



ಶಿಕಾರಿಪುರದಲ್ಲಿ ಶನಿವಾರ ನಡೆದ ಫಿಟ್ ಇಂಡಿಯಾ ಫ್ರೀಡಂ ರನ್ 2.0 ಕಾರ್ಯಕ್ರಮಕ್ಕೆ ಸಂಸದ ಬಿ.ವೈ.ರಾಘವೇಂದ್ರ ಚಾಲನೆ ನೀಡಿದರು.

# ಮೊಬೈಲ್ ಬಿಡಿ, ಆರೋಗ್ಯದತ್ತ ಲಕ್ಷ್ಯ ಕೊಡಿ

**ವಿಕ ಸುದ್ದಿಲೋಕ** ಶಿಕಾರಿಪುರ

ವಿದ್ಯಾರ್ಥಿಗಳು ಮೊಬೈಲ್ ಇಂಟರ್‌ನೆಟ್ ಗೀಳಿಗೆ ಅಂಟಿಕೊಂಡಿದ್ದು ಆರೋಗ್ಯದ ಕಡೆ ಗಮನ ನೀಡುತ್ತಿಲ್ಲ. ಪ್ರತಿಯೊಬ್ಬರೂ ಆರೋಗ್ಯ ಕಾಪಾಡಿಕೊಳ್ಳುವುದಕ್ಕೆ ಆದ್ಯತೆ ನೀಡಬೇಕು ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

**ಸಂಸದ ಬಿ.ವೈ. ರಾಘವೇಂದ್ರ ಸಲಹೆ**

ಪಟ್ಟಣದಲ್ಲಿ ಶನಿವಾರ ಸಾರ್ವಜನಿಕ ಶಿಕ್ಷಣ ಇಲಾಖೆ, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಪಟ್ಟಣದ ಎಲ್ಲ ಶಿಕ್ಷಣ ಸಂಸ್ಥೆಗಳ ಸಹಯೋಗದಲ್ಲಿ 75ನೇ ಸ್ವಾತಂತ್ರ್ಯ ಮಹೋತ್ಸವ ಅಂಗವಾಗಿ ನಡೆದ ಫಿಟ್ ಇಂಡಿಯಾ ಫ್ರೀಡಂ ರನ್ 2.0 ಮತ್ತು ಗಾಂಧಿ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ನಿರಂತರ ಓಟದಿಂದ ದೇಹ ಸದೃಢವಾಗಿ ಇಟ್ಟುಕೊಳ್ಳಬೇಕು ಎಂದರು.

ಸ್ವಚ್ಛ ಭಾರತ್ 2.0ಕ್ಕೆ ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ. ದೇಶದ ಪ್ರತಿಹಳ್ಳಿಗೂ ಸ್ವಚ್ಛ ಭಾರತ ಕಾರ್ಯಕ್ರಮ ತಲುಪಬೇಕು. ನಮ್ಮ ಊರು ಪರಿಸರ ಸ್ವಚ್ಛವಾಗಿ ಇಟ್ಟುಕೊಂಡರೆ ಆರೋಗ್ಯವಂತ ಗ್ರಾಮ, ಸಮುದಾಯ ನಿರ್ಮಾಣಗೊಳ್ಳುತ್ತದೆ ಎಂದರು.

ಏಕಲವ್ಯ ಪ್ರಶಸ್ತಿ ವಿಜೇತ ಸುಬೇದಾರ್ ಕಾಶೀನಾಥ್ ಮಾತನಾಡಿದರು. ಕಾರ್ಯಕ್ರಮದ ಅಂಗವಾಗಿ ನೂರಾರು ವಿದ್ಯಾರ್ಥಿಗಳು ಮ್ಯಾರಥಾನ್‌ನಲ್ಲಿ ಪಾಲ್ಗೊಂಡಿದ್ದರು. ಪಟ್ಟಣದ ರಂಗಮಂದಿರದಲ್ಲಿ ಸಮಾರೋಪ ನಡೆಯಿತು. ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡಿದ ಹಲವು ಪ್ರಮುಖರ ವೇಷಭೂಷಣ ತೊಟ್ಟ ಮಕ್ಕಳು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು. ಎಂಎಡಿಬಿ ಅಧ್ಯಕ್ಷ ಕೆ.ಎಸ್.ಗುರುಮೂರ್ತಿ, ಪುರಸಭೆ ಅಧ್ಯಕ್ಷೆ ಲಕ್ಷ್ಮಿ ಮಹಾಲಿಂಗಪ್ಪ, ತಹಸೀಲ್ದಾರ್ ಕವಿರಾಜ್, ಕ್ಷೇತ್ರಶಿಕ್ಷಣಾಧಿಕಾರಿ ಶಶಿಧರ ಇತರರಿದ್ದರು.

ವಿಜಯವಾಣಿ 04-10-2021 ಸೋಮವಾರ ಪು.ಸಂ.06

# ಭಾರತದ ಭಾಗ್ಯದಾತ ಮಹಾತ್ಮ ಗಾಂಧೀಜಿ

## ಸಮಷ್ಟಿ ಹಿತ ಬಯಸಿದ್ದ ರಾಷ್ಟ್ರಪಿತ | ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಅಭಿಮತ

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ಮಹಾತ್ಮ ಗಾಂಧೀಜಿ ಸಮಷ್ಟಿಯ ಹಿತ ಬಯಸಿದವರು. ಅವರು ಸ್ವತಂತ್ರ ಭಾರತದ ಭಾಗ್ಯದಾತ. ನಮ್ಮ ಪ್ರತಿ ಹೆಜ್ಜೆಗಳಲ್ಲಿಯೂ ಅವರ ಆದರ್ಶಗಳು ಪ್ರೇರಕವಾಗಬೇಕು ಎಂದು ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಹೇಳಿದರು.

- ಗಾಂಧೀಜಿ ಆದರ್ಶ ನಮಗೆ ಪ್ರೇರಣೆಯಾಗಲಿ
- ಶಾಂತಿ, ಸಹಬಾಳ್ವೆ ನಮ್ಮ ಆದ್ಯತೆಯಾಗಲಿ

ಪಟ್ಟಣದಲ್ಲಿ ಸ್ವಾತಂತ್ರ್ಯ ಅಮೃತ ಮಹೋತ್ಸವದ ಅಂಗವಾಗಿ ಶನಿವಾರ ಆಯೋಜಿಸಿದ್ದ ಫಿಟ್ ಇಂಡಿಯಾ ಫ್ರೀಡಂ ರನ್ ಮತ್ತು ಗಾಂಧಿ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿ, ಅಂದು ಮಹಾತ್ಮ ಗಾಂಧೀಜಿ ಅವರ ಸ್ವಾತಂತ್ರ್ಯ ಹೋರಾಟ ಭಾರತವನ್ನು ದಾಸ್ಯ ಮುಕ್ತಗೊಳಿಸಬೇಕು ಎಂಬ ಸದಾಶಯದಿಂದ ನಡೆದಿತ್ತು. ಆದರೆ ಇಂದು ನಾವು ಜಗತ್ತಿನಲ್ಲಿ ಭಾರತ ಹಿರಿಯಣ್ಣನಾಗಿ ಪ್ರಕಾಶಿಸಬೇಕು ಎಂಬ ಆಶಯದ ನೆರಳಿನಲ್ಲಿ ಕೆಲಸ ಮಾಡಬೇಕು ಎಂದು ಹೇಳಿದರು.

ಗ್ರಾಮ ರಾಜ್ಯದಿಂದ ರಾಮರಾಜ್ಯ ಎಂಬ ರಾಷ್ಟ್ರಪಿತರ ಕಲ್ಪನೆ ಸಾಕಾರವಾಗುತ್ತಿದೆ. ಪ್ರತಿ ಹಳ್ಳಿ ಈ ದೇಶದ ಹೆಮ್ಮೆ. ಹಳ್ಳಿಗಳ ಉದ್ಧಾರವಾಗಬೇಕು. ಸಹಬಾಳ್ವೆ, ಶಾಂತಿ, ಸಂಯಮ, ದೇಶಪ್ರೇಮ ನಮ್ಮ ಮೊದಲ ಆದ್ಯತೆಯಾಗಬೇಕು. ಇಂದಿನ [illegible] ನಮ್ಮ ದೇಶ ಭಾರತದ ಅಭಿವೃದ್ಧಿಯ ದ್ಯೋತಕವಾಗಿದೆ. ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತಕ್ಕೆ ಅತ್ಯುನ್ನತವಾದ ಸ್ಥಾನವಿದೆ. ಹಿರಿಯರು ನಮಗೆ ತಂದುಕೊಟ್ಟ ಸ್ವಾತಂತ್ರ್ಯವನ್ನು ಸಮರ್ಥವಾಗಿ ನಾವು ಬಳಸಿಕೊಂಡು ಎಲ್ಲ ಕ್ಷೇತ್ರದಲ್ಲಿ ನಾವು ಮುಂಚೂಣಿಯಲ್ಲಿದ್ದೇವೆ. ಗಾಂಧೀಜಿಯವರ ಅಹಿಂಸಾ ಹೋರಾಟ ಪ್ರಸ್ತುತ ಕಾಲಘಟ್ಟದಲ್ಲಿ ಅತ್ಯಂತ ಶ್ರೇಷ್ಠವೆನಿಸಿದೆ. ವಿಶ್ವ ಹಾಗೂ ವಿಶ್ವಶಾಂತಿ ಮನೋಭಾವನೆ ದೊಡ್ಡದಾಗಬೇಕು. ಭಾರತ ತನ್ನ ಆಧ್ಯಾತ್ಮಿಕ ಶಕ್ತಿಯ ಬಲದಿಂದ ಶ್ರೇಷ್ಠತೆ ಪಡೆದಿದೆ ಎಂದು ಹೇಳಿದರು.

ಪುರಸಭೆ ಅಧ್ಯಕ್ಷೆ ಲಕ್ಷ್ಮೀ ಮಹಾಲಿಂಗಪ್ಪ, ಸ್ಥಾಯಿ ಸಮಿತಿಯ ಅಧ್ಯಕ್ಷ ರೇಣುಕಸ್ವಾಮಿ, ತಹಸೀಲ್ದಾರ್ ಎಂ.ಪಿ.ಕವಿರಾಜ್, ಡಾ. ಪರಮೇಶ್, ಬಿಇಒ ಬಿ.ಎಸ್.ಶೇಖರ್, ರಾಷ್ಟ್ರೀಯ ಜುಡೋ ಕೋಚ್ ಕಾಶಿನಾಥ್ ನಾಯ್ಕ ಇತರರಿದ್ದರು.



ಶಿಕಾರಿಪುರದಲ್ಲಿ ಫಿಟ್ ಇಂಡಿಯಾ ಫ್ರೀಡಂ ರನ್ ಪಥಸಂಚಲನಕ್ಕೆ ಬಿ.ವೈ. ರಾಘವೇಂದ್ರ ಚಾಲನೆ ನೀಡಿದರು. ಲಕ್ಷ್ಮೀ ಮಹಾಲಿಂಗಪ್ಪ, ಎಂ.ಪಿ.ಕವಿರಾಜ್, ಕಾಶಿನಾಥ ನಾಯ್ಕ ಇತರರಿದ್ದರು.

## ದುಶ್ಚಟಮುಕ್ತ ಸಮಾಜ ನಿರ್ಮಾಣಕ್ಕೆ ಪ್ರಯತ್ನ

ಭದ್ರಾವತಿ: ಮದ್ಯಪಾನದಂತಹ ದುಶ್ಚಟಗಳಿಂದ ಸಮಾಜವನ್ನು ಮುಕ್ತಗೊಳಿಸಲು ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಸಂಸ್ಥೆ ಹಲವು ಸೇವಾ ಕಾರ್ಯಗಳನ್ನು ಮಾಡುತ್ತಿರುವುದು ನಿಜಕ್ಕೂ ಶ್ಲಾಘನೀಯ ಎಂದು ಶಾಸಕ ಬಿ.ಕೆ.ಸಂಗಮೇಶ್ವರ್ ಹೇಳಿದರು.

ಶನಿವಾರ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಮತ್ತು ಅಖಿಲ ಕರ್ನಾಟಕ ಜಿಲ್ಲಾ ಜನಜಾಗೃತಿ ವೇದಿಕೆ ಹಳೇನಗರದ ಅಕ್ಕಮಹಾದೇವಿ ಸಮುದಾಯ ಭವನದಲ್ಲಿ ಗಾಂಧಿಜಯಂತಿ ಪ್ರಯುಕ್ತ ಏರ್ಪಡಿಸಿದ್ದ ನವಜೀವನೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದರು. ದೇಶಕ್ಕೆ ಪ್ರಧಾನಿಯಾಗಿ ಉತ್ತಮ ಸೇವೆ ಸಲ್ಲಿಸಿದ ಲಾಲ್ ಬಹಾದ್ದೂರ್ ಶಾಸ್ತ್ರಿ ಹಾಗೂ ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅವರ ಆದರ್ಶಗಳನ್ನು ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡು ಮಕ್ಕಳಿಗೆ ಅವರ ಜೀವನ ಚರಿತ್ರೆ ತಿಳಿಸಿ ಉತ್ತಮ ಪ್ರಜೆಗಳನ್ನಾಗಿ ರೂಪಿಸುವ ಕಾರ್ಯವನ್ನು ಮಾಡಬೇಕಿದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯ ಆರ್.ಕರುಣಾಮೂರ್ತಿ ಮಾತನಾಡಿ, ಗಾಂಧೀಜಿ ಕಂಡ ಕನಸನ್ನು ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಟ್ರಸ್ಟ್ ಸಾಕಾರಗೊಳಿಸುತ್ತಿದೆ ಎಂದರು.

ಯೋಜನಾಧಿಕಾರಿ ಪ್ರಕಾಶ್, ಜಿಲ್ಲಾ ಜನಜಾಗೃತಿ ವೇದಿಕೆ ಅಧ್ಯಕ್ಷ ಡಿ. ಆನಂದಕುಮಾರ್, ನಿರ್ದೇಶಕರಾದ ಬಿ. ಗೀತಾ, ಪಾಲಾಕ್ಷಪ್ಪ, ಜಯರಾಮ್ ಗೊಂದಿ, ಅಕ್ಕಮಹಾದೇವಿ ಬಳಗದ ಅಧ್ಯಕ್ಷೆ ಸುವರ್ಣಮ್ಮ ಹಿರೇಮಠ್, ನಾಗರತ್ನ ಅನಸ್ತ ರಾವ್ ಮನೆ, ಸುರೇಶ್‌ಕುಮಾರ್ ಇದ್ದರು.



ಭದ್ರಾವತಿಯಲ್ಲಿ ಏರ್ಪಡಿಸಿದ್ದ ನವಜೀವನೋತ್ಸವ ಕಾರ್ಯಕ್ರಮವನ್ನು ಬಿ.ಕೆ. ಸಂಗಮೇಶ್ವರ್ ಉದ್ಘಾಟಿಸಿದರು. ಡಿ. ಆನಂದಕುಮಾರ್, ಕರುಣಾಮೂರ್ತಿ, ಬಿ. ಗೀತಾ, ಸುವರ್ಣಮ್ಮ ಹಿರೇಮಠ್ ಇದ್ದರು.

**ವಿಜಯ ಕರ್ನಾಟಕ 14-11-2021 ಭಾನುವಾರ ಪು.ಸಂ.11**

# 'ಸಾಧನಾ ಸಮೀಕ್ಷೆಯಿಂದ ಶಿಕ್ಷಣದ ಬೇರು ಇನ್ನಷ್ಟು ಗಟ್ಟಿ'

■ **ವಿಕ ಸುದ್ದಿಲೋಕ** ಶಿಕಾರಿಪುರ

ವಿದ್ಯಾರ್ಥಿಗಳ ಸಾಧನೆ ಸಮೀಕ್ಷೆಗೆ ಒಳಪಡಿಸುವ ರಾಷ್ಟ್ರೀಯ ಸಾಧನಾ ಸಮೀಕ್ಷೆ ಶಿಕ್ಷಣದ ಬೇರನ್ನು ಇನ್ನಷ್ಟು ಗಟ್ಟಿಗೊಳಿಸುವ ಉದ್ದೇಶ ಹೊಂದಿದೆ ಎಂದು ಡಯಟ್ ಪ್ರಾಚಾರ್ಯ ಬಿ.ಆರ್.ಬಸವರಾಜಪ್ಪ ಹೇಳಿದರು.

ಪಟ್ಟಣದ ಕುಮುದ್ವತಿ ಬಿಇಡಿ ಕಾಲೇಜಿನಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಸಾಧನಾ ಸಮೀಕ್ಷೆಯ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಕುಮುದ್ವತಿ ಬಿಇಡಿ ಪ್ರಾಚಾರ್ಯ ಶಿವಕುಮಾರ್ ಮಾತನಾಡಿ, ಸರಕಾರಿ, ಅನುದಾನಿತ ಶಾಲೆಗಳ ಶಿಕ್ಷಣ ವ್ಯವಸ್ಥೆಯ ಆರೋಗ್ಯ ಅರ್ಥ ಮಾಡಿಕೊಳ್ಳುವ ಗುರಿ ಹೊಂದಿರುವ ಭಾರತದ ಎಲ್ಲ ಜಿಲ್ಲೆಗಳ



ಶಿಕಾರಿಪುರದಲ್ಲಿ ಮಂಗಳವಾರ ನಡೆದ ರಾಷ್ಟ್ರೀಯ ಸಾಧನಾ ಸಮೀಕ್ಷೆ ಕಾರ್ಯಾಗಾರಕ್ಕೆ ಡಯಟ್ ಪ್ರಾಚಾರ್ಯ ಬಿ.ಆರ್. ಬಸವರಾಜಪ್ಪ ಉದ್ಘಾಟಿಸಿದರು.

ಶಾಲೆಗಳ ಪ್ರತಿನಿಧಿ ಮಾದರಿಯಾದ ಎನ್‌ಎಎಸ್ ಸಾಧನೆ ಸಮೀಕ್ಷೆ ಕಾರ್ಯ ನಡೆಸುತ್ತಿದೆ. ಕಲಿಕೆ ಸುಧಾರಣೆ ನೀತಿ, ಯೋಜನೆ, ಶಿಕ್ಷಣ ಮಧ್ಯಸ್ಥಿಕೆ ರೂಪಿಸಲು ಸಮೀಕ್ಷೆ ಅನುಕೂಲ ಆಗಲಿದೆ ಎಂದು ಹೇಳಿದರು. ಸೊರಬ, ಶಿಕಾರಿಪುರ ವ್ಯಾಪ್ತಿ ಸಿ.ಆರ್.ಪಿ., ಬಿ.ಆರ್.ಪಿಗಳಿಗೆ ಸಾಧನಾ ಸಮೀಕ್ಷೆಗೆ ಸಂಬಂಧಿಸಿದಂತೆ ಮೌಲ್ಯ ಮಾಪನ ಕುರಿತು ತಿಳಿಸಲಾಯಿತು. ಬಿಇಒ ಜಿ.ಎನ್.ಶಶಿಧರ್, ಕುಮುದ್ವತಿ ಪದವಿ ಕಾಲೇಜು ಪ್ರಾಚಾರ್ಯ ಜಿ.ಆರ್.ಹೆಗಡೆ, ಶಿಕ್ಷಣ ಇಲಾಖೆಯ ನಂಜರಾಜ, ಶಶಿಕಲಾ, ಉಪನ್ಯಾಸಕರಾದ ಎಂ.ಯದು ಕುಮಾರ್, ವೈ.ದೇವರಾಜ್, ವಿರೇಂದ್ರಕುಮಾರ ವಾಲಿ ಪ್ರಶಿಕ್ಷಣಾರ್ಥಿಗಳು ಇದ್ದರು.

**ವಿಜಯ ಕರ್ನಾಟಕ 03-12-2021 ಶುಕ್ರವಾರ ಪು.ಸಂ.08**

# 'ಸ್ಪರ್ಧಾ ಮನೋಭಾವ ಬೆಳೆಯಲಿ'



ಶಿಕಾರಿಪುರದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ, ದಶಪ್ರಜ್ಞೆ ಕಾರ್ಯಕ್ರಮದಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

■ **ವಿಕ ಸುದ್ದಿಲೋಕ** ಶಿಕಾರಿಪುರ

ವಿದ್ಯಾರ್ಥಿಗಳಲ್ಲಿ ಸ್ಪರ್ಧಾತ್ಮಕ ಮನೋಭಾವ ಬೆಳೆಸಬೇಕು. ಮಕ್ಕಳಲ್ಲಿ ಅಂಕ ಪಡೆಯುವ, ಬಹುಮಾನ ಪಡೆಯುವ ಮನೋಭಾವ ಬೆಳೆಸುವ ಬದಲು ಮಗು ಎಲ್ಲರೊಂದಿಗೆ ಬೆರೆಯುವಂತೆ ಮಾಡುವುದು ಮುಖ್ಯ ಎಂದು ಕುಮುದ್ವತಿ ಪಿಯು ಕಾಲೇಜು ಪ್ರಾಚಾರ್ಯ ಡಾ.ವಿರೇಂದ್ರ ಹೇಳಿದರು.

ಪಟ್ಟಣದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ, ಐಕ್ಯೂಎಸಿ, ಭಾಷಾ ಸಂಘ ಮಂಗಳವಾರ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ, ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ತಾಲೂಕು ಮಟ್ಟದ ದಶಪ್ರಜ್ಞೆ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು. ಎಲ್ಲರೂ ಅಂಕ ಗಳಿಕೆಗೆ ಆದ್ಯತೆ ನೀಡುತ್ತಿರುವ ಆಧುನಿಕ ಶಿಕ್ಷಣ ಮಕ್ಕಳಲ್ಲಿ ಒತ್ತಡಕ್ಕೆ ಕಾರಣವಾಗುತ್ತಿದೆ. ತನ್ನಲ್ಲಿನ ಅಭಿಪ್ರಾಯ ಎಲ್ಲರೊಂದಿಗೆ ಹಂಚಿಕೊಳ್ಳುವ, [illegible] ತೊಡಗಿಸಿಕೊಳ್ಳುವ ವಿದ್ಯಾರ್ಥಿಯಾಗಿ ಹೊರಹೊಮ್ಮುವುದಕ್ಕೆ ಶಿಕ್ಷಣ ಕಾರಣವಾಗಬೇಕು ಎಂದರು.

ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಜಿ.ಎಸ್.ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಸ್ಪರ್ಧಾತ್ಮಕ ಕಾರ್ಯಕ್ರಮದಲ್ಲಿ ತಾಲೂಕಿನ ಹಲವು ಪ್ರೌಢಶಾಲೆ ವಿದ್ಯಾರ್ಥಿಗಳು, ಸಹ ಶಿಕ್ಷಕರು ಪಾಲ್ಗೊಂಡಿದ್ದರು, ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು. ಉಪನ್ಯಾಸಕರಾದ ವಿರೇಂದ್ರಕುಮಾರ ವಾಲಿ, ಕಿರಣ್‌ಕುಮಾರ್, ಎಚ್.ರವಿ, ಶಿಕ್ಷಕರಾದ ಕರಿಬಸಪ್ಪ, ವಿದ್ಯಾರ್ಥಿಗಳು ಶಿಕ್ಷಕರು ಇದ್ದರು.

ಕನ್ನಡ ಪ್ರಭ 26-01-2022 ಶುಕ್ರವಾರ ಪು.ಸಂ.06

ಆಶಾದಾಯಕ ವಿಚಾರ | ಶಿಕ್ಷಕಸ್ನೇಹಿ ಮೊಬೈಲ್ ಆ್ಯಪ್‌ಗಳ ಪರಿಚಯಾತ್ಮಕ ಕಾರ್ಯಾಗಾರದಲ್ಲಿ ಡಾ.ಶಿವಕುಮಾರ್

# ಶಿಕ್ಷಣ ಕ್ಷೇತ್ರದಲ್ಲಿ ಆತಂಕ ಕಳೆಯುತ್ತಿರುವ ಆ್ಯಪ್‌ಗಳು

• **ಕನ್ನಡಪ್ರಭ ವಾರ್ತೆ** ಶಿಕಾರಿಪುರ

ಬದಲಾಗುತ್ತಿರುವ ಶಿಕ್ಷಣ ಕ್ಷೇತ್ರದಲ್ಲಿ ಶಿಕ್ಷಕರೂ ತಮ್ಮ ಬೋಧನಾಶೈಲಿ ಹಾಗೂ ವಿಧಾನಗಳಲ್ಲಿ ಮಾರ್ಪಾಡುಗಳನ್ನು ತಂದು ಬೋಧಿಸುವ ಸಂದರ್ಭಗಳು ಎದುರಾಗಿವೆ ಎಂದು ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಿ.ಎಸ್. ಶಿವಕುಮಾರ್ ಹೇಳಿದರು.

ಗುರುವಾರ ಕಾಲೇಜಿನ ಸಭಾಂಗಣದಲ್ಲಿ ಐಕ್ಯೂಎಸಿ ಹಾಗೂ ಛಾಯಾ ಸಂಘದ ವತಿಯಿಂದ ಪ್ರಶಿಕ್ಷಣಾರ್ಥಿಗಳಿಗೆ ನಡೆದ ಶಿಕ್ಷಕ ಸ್ನೇಹಿ ಮೊಬೈಲ್ ಆಪ್‌ಗಳ ಪರಿಚಯಾತ್ಮಕ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಿಕ್ಷಣ ಕ್ಷೇತ್ರದಲ್ಲಿ ವ್ಯಾಪಕ ಬದಲಾವಣೆ ಆಗುತ್ತಿದೆ. ಕೇವಲ ಪುಸ್ತಕ, ಪೆನ್ನು, ಕಪ್ಪುಹಲಗೆ ಮೂಲಕ ಮಕ್ಕಳಿಗೆ ಪಾಠ ಹೇಳಿಕೊಡುವ ಕಾಲ ಬದಲಾಗಿದೆ. ಆಧುನಿಕತೆಯ ಎಲ್ಲ ಹೊಸ ವಿಧಾನಗಳನ್ನು ಬಳಸಿಕೊಳ್ಳುವ ಮೂಲಕ ನಿತ್ಯ ಶಿಕ್ಷಣ ಕ್ಷೇತ್ರದಲ್ಲಿ ನಡೆಯುತ್ತಿರುವ ಹೊಸ ಆವಿಷ್ಕಾರ ತಂತ್ರಜ್ಞಾನವನ್ನು ಅರಿತು ಮಕ್ಕಳಿಗೆ ಪಾಠ ಹೇಳಿಕೊಡಬೇಕಾಗಿದೆ ಎಂದರು.

ಕೋವಿಡ್ ಪರಿಣಾಮದಿಂದಾಗಿ ಶಿಕ್ಷಣ ಕ್ಷೇತ್ರ ಬದಲಾಗುತ್ತಿದೆ ಎಂಬ ಆತಂಕ ಎಲ್ಲರನ್ನೂ ಕಾಡುತ್ತಿದೆ. ಆದರೆ ತನ್ನ ವ್ಯಾಪ್ತಿಯನ್ನು ವಿಸ್ತರಿಸಿಕೊಳ್ಳುತ್ತಿದೆ ಎಂದು ತಿಳಿಸಿದ ಅವರು ಕಲಿಕೆಗೆ ಪೂರಕವಾಗಿ ಹೊಸ ಹೊಸ ಮೊಬೈಲ್ ಆಪ್‌ಗಳನ್ನು ಬಳಸಿ, ಕಲಿಕೆಯನ್ನು ಕಲಿಸುವ ಹಾಗೂ ಸದೃಢಗೊಳಿಸುತ್ತಿರುವ ನಿದರ್ಶನಗಳು ಸಾಕ್ಷಿಯಾಗಿದೆ. ಈ ನಿಟ್ಟಿನಲ್ಲಿ ಕುಮದ್ವತಿ ಶಿಕ್ಷಣ



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ ಶಿಕ್ಷಕರ ಸ್ನೇಹಿ ಮೊಬೈಲ್ ಆಪ್‌ಗಳ ಪರಿಚಯಾತ್ಮಕ ಕಾರ್ಯಾಗಾರವನ್ನು ಪ್ರಾಚಾರ್ಯ ಡಾ.ಶಿವಕುಮಾರ್ ಉದ್ಘಾಟಿಸಿದರು.

ಮಹಾವಿದ್ಯಾಲಯವು ವಿದ್ಯಾರ್ಥಿ ಸ್ನೇಹಿ ಆಪ್‌ಗಳ ಬಳಕೆಯ ಮೂಲಕ ಬೋಧನೆ ಮತ್ತು ಕಲಿಕೆಯನ್ನು ಉತ್ಕೃಷ್ಟಗೊಳಿಸುವ ಜವಾಬ್ದಾರಿಯೊಂದಿಗೆ ಪ್ರಶಿಕ್ಷಣಾರ್ಥಿಗಳಿಗಾಗಿ ಝೂಮ್, ಟೆಸ್ಟ್‌ಮೋಜ್, ಗೂಗಲ್ ಕ್ಲಾಸ್‌ರೂಂ, ಗೂಗಲ್ ಫಾರಂ, ಡಬ್ಲ್ಯುಪಿ.ಎಸ್, ಗೂಗಲ್ ಮೀಟ್, ವಿಡಿಯೋ ಕ್ರಿಯೇಷನ್ ಇತ್ಯಾದಿ ವಿದ್ಯಾರ್ಥಿ ಸ್ನೇಹಿ ಆಪ್‌ಗಳ ಪರಿಚಯ ಹಾಗೂ ತರಬೇತಿಯನ್ನು ಹಮ್ಮಿಕೊಂಡಿದೆ. ಈ ಕಾರ್ಯಕ್ರಮವು ಅತ್ಯುತ್ತಮವಾಗಿ ಮೂಡಿ ಬರಲಿ ಎಂದು ಆಶಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಎಲ್ಲಾ ಬೋಧಕ ಮತ್ತು ಬೋಧಕೇತರ ವರ್ಗದವರು ಹಾಗೂ ಪ್ರಶಿಕ್ಷಣಾರ್ಥಿಗಳು ಪಾಲ್ಗೊಂಡಿದ್ದರು. ಪ್ರಶಿಕ್ಷಣಾರ್ಥಿ ಶ್ವೇತಾ ಪಿ.ಎಚ್ ಪ್ರಾರ್ಥಿಸಿ, ಡಾ. ಕಿರಣ್ ಕುಮಾರ ಸ್ವಾಗತಿಸಿದರು. ಡಾ. ವೀರೇಂದ್ರಕುಮಾರ್ ಪಾಲಿ ನಿರೂಪಿಸಿ ಡಾ. ರವಿ ವಂದಿಸಿದರು.

ಕನ್ನಡ ಪ್ರಭ 24-02-2022 ಗುರುವಾರ ಪು.ಸಂ.02


ಶೈಕ್ಷಣಿಕ ಸೇವೆ | ಕುಮದ್ವತಿ ಕಾಲೇಜಿನಲ್ಲಿ ಎನ್ನೆಸ್ಸೆಸ್ ವಾರ್ಷಿಕ ವಿಶೇಷ ಶಿಬಿರ ಕಾರ್ಯಕ್ರಮ ಉದ್ಘಾಟಿಸಿ ಸಂಸದ ರಾಘವೇಂದ್ರ ಸಲಹೆ

# ಯುವಜನರು ದೇಶಕ್ಕೆ ಕೊಡುಗೆ ಅರಿತು ಬದುಕಬೇಕು

• **ಕನ್ನಡಪ್ರಭ ವಾರ್ತೆ** ಶಿಕಾರಿಪುರ

ಯುವಜನರು ದೇಶಕ್ಕೆ ಕೊಡುಗೆ ನೀಡುವ ಬಗ್ಗೆ ಅರಿತು ಬದುಕನ್ನು ರೂಪಿಸಿಕೊಳ್ಳಬೇಕು. ಆಗ ಎಲ್ಲ ಕ್ಷೇತ್ರದಲ್ಲಿ ಮಹತ್ವದ ಬದಲಾವಣೆ ಆಗುವುದು ನಿಶ್ಚಿತ ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ತಾಲೂಕಿನಲ್ಲಿ ಮಂಗಳವಾರ [illegible] ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆ ವಾರ್ಷಿಕ ವಿಶೇಷ ಶಿಬಿರ 2021-2022 ಸ್ವಚ್ಛ ಭಾರತ, ಸ್ವಸ್ಥ ಭಾರತ [illegible] ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.



ಶಿಕಾರಿಪುರ ತಾಲೂಕಿನ [illegible] ಮಂಗಳವಾರದಂದು ಆರಂಭವಾದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ವಾರ್ಷಿಕ ವಿಶೇಷ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ಸಂಸದ ಬಿ.ವೈ. ರಾಘವೇಂದ್ರ ಉದ್ಘಾಟಿಸಿದರು.

ಭಾರತ ದೇಶ ಸ್ವಾತಂತ್ರ್ಯ ಬಳಿಕ [illegible] ಈ ನಿಟ್ಟಿನಲ್ಲಿ [illegible] ಪ್ರತಿ ಕ್ಷೇತ್ರದಲ್ಲಿ [illegible] ಪ್ರತಿಯೊಬ್ಬ ವಿದ್ಯಾರ್ಥಿ [illegible] ಪೂರಕವಾಗಿ ಯುವಕರಿಗೆ [illegible] ಅವಕಾಶವಾಗಿದೆ. ಈ ಬಾರಿ ಕೇಂದ್ರದ ಬಜೆಟ್‌ನಲ್ಲಿ ಡಿಜಿಟಲ್ [illegible] ತಂತ್ರಜ್ಞಾನ ದೇಶದ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ನಿರ್ವಹಿಸುತ್ತಿದೆ ಎಂದು ತಿಳಿಸಿದರು.

ಗ್ರಾಮೀಣ ಜನತೆಯ [illegible] ಮಹತ್ವದ ಬದಲಾವಣೆಗೆ 'ಗ್ರಾಮ ಒನ್' ಕೇಂದ್ರದ ಮೂಲಕ ಗ್ರಾಮ ಪಂಚಾಯಿತಿಯಲ್ಲಿಯೇ ಗ್ರಾಮೀಣ ಜನತೆಗೆ ಬಹುತೇಕ ಸೇವೆ ದೊರೆಯಲಿದೆ. ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿ [illegible] ಸೇವೆಯನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ [illegible] ಪ್ರತಿಯೊಬ್ಬರೂ ಶ್ರದ್ಧೆಯಿಂದ ಪಾಲ್ಗೊಂಡು ಶಿಬಿರದ ಮೂಲಕ ಜನರ ಸೇವಾ ಅನುಭವವನ್ನು ದೇಶದ [illegible] ಬಳಸುವಂತೆ ತಿಳಿಸಿದರು.

ಗ್ರಾಮ ವಿಕಾಸನದ ವಿದ್ಯಾಸಂಸ್ಥೆ ನಿರ್ದೇಶಕ [illegible] ರಾಘವೇಂದ್ರ ಮಾತನಾಡಿದರು. [illegible] ಎನ್‌ಎಸ್‌ಎಸ್ ಸಂಯೋಜಕ ಡಾ. [illegible], ಸಂಸ್ಥೆಯ ಅಧ್ಯಕ್ಷ ಎಂ.ಬಿ. ಶಿವಕುಮಾರ್, ಶೈಕ್ಷಣಿಕ ಸಲಹೆಗಾರ [illegible], ಪ್ರಾಚಾರ್ಯ ಡಾ. ಜಿ.ಎಸ್. ಶಿವಕುಮಾರ್, ಡಾ. ಶಿವಕುಮಾರ್, [illegible] ಗ್ರಾಮ ಅಧ್ಯಕ್ಷ [illegible] ಮತ್ತಿತರರು ಉಪಸ್ಥಿತರಿದ್ದರು.

**ಪ್ರಜಾವಾಣಿ 01-03-2022 ಮಂಗಳವಾರ ಪು.ಸಂ.02**

ಎನ್‌ಎಸ್‌ಎಸ್ ಶಿಬಿರ ಉದ್ಘಾಟಿಸಿದ ಸಂಸದ ರಾಘವೇಂದ್ರ

# ಸ್ವಾರ್ಥ ಬಿಟ್ಟು, ದೇಶಕ್ಕೆ ಕೊಡುಗೆ ನೀಡಿ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ಯುವ ಸಮುದಾಯ ಸ್ವಾರ್ಥಕ್ಕಾಗಿ ಜೀವನ ನಡೆಸದೆ ದೇಶಕ್ಕೆ ಉನ್ನತ ಕೊಡುಗೆ ನೀಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಸಂಸದ ಬಿ.ವೈ. ರಾಘವೇಂದ್ರ ಸಲಹೆ ನೀಡಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯವು ತಿಮ್ಲಾಪುರ ಗ್ರಾಮದಲ್ಲಿ ಈಚೆಗೆ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಬಿಇಡಿ ಪದವಿ ಪಡೆದ ನಂತರ ಶಿಕ್ಷಕರಾಗುವ ನೀವು ಮಕ್ಕಳ ವ್ಯಕ್ತಿತ್ವ ಅಭಿವೃದ್ಧಿಗೆ ಶ್ರಮಿಸಬೇಕು. ತಂತ್ರಜ್ಞಾನ ಯುಗಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಬೆಳೆಸುವ ಜವಾಬ್ದಾರಿ ನಿಮ್ಮ ಮೇಲಿದೆ. ಆಗಮಾತ್ರ ಸ್ಪರ್ಧಾ ಜಗತ್ತಿನಲ್ಲಿ ಅವರು ಸಾಧನೆಗೈಯಲು ಸಾಧ್ಯವಾಗಲಿದೆ. ಈ ಮೂಲಕ ಪೋಷಕರು ಹಾಗೂ ಸಮಾಜದ ಋಣ ತೀರಿಸಬಹುದಾಗಿದೆ. ವಿದ್ಯಾರ್ಥಿಗಳು ಓದಿನ ಜತೆ ಸಮಾಜದ ಏಳಿಗೆಗಾಗಿ ಸೇವೆ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು' ಎಂದು ರಾಘವೇಂದ್ರ ಅವರು ಹೇಳಿದರು.



ಶಿಕಾರಿಪುರ ಸಮೀಪದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಈಚೆಗೆ ತಿಮ್ಲಾಪುರ ಗ್ರಾಮದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಸಂಸದ ಬಿ.ವೈ. ರಾಘವೇಂದ್ರ ಉದ್ಘಾಟಿಸಿ ಮಾತನಾಡಿದರು.

ಕುವೆಂಪು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ಪರಿಸರ ನಾಗರಾಜ್, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ನಿರ್ದೇಶಕಿ ಕೆಜ್ಜನಿ ರಾಘವೇಂದ್ರ, ಶೈಕ್ಷಣಿಕ ಮಾರ್ಗದರ್ಶಕ ಪ್ರೊ.ಎಸ್.ಎಸ್. ಗದಗ, ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಬಿ.ಎಸ್. ಶಿವಕುಮಾರ್, ಕುಮುದ್ವತಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಜಿ. ಆರ್. ಹೆಗಡೆ, ತರಲಘಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜಪ್ಪ ಅವರೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

**ವಿಜಯ ಕರ್ನಾಟಕ 24-04-2022 ಶುಕ್ರವಾರ ಪು.ಸಂ.02**

# ತಿಮ್ಲಾಪುರದಲ್ಲಿ ಜಲಶಕ್ತಿ ಅಭಿಯಾನ

■ ವಿಕ ಸುದ್ದಿಲೋಕ ಶಿವಮೊಗ್ಗ

ಶಿಕಾರಿಪುರದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಿಂದ ವಿಶ್ವ ಭೂಮಿ ದಿನಾಚರಣೆ ಅಂಗವಾಗಿ ಜಲಶಕ್ತಿ ಅಭಿಯಾನ ಕುರಿತು ತಿಮ್ಲಾಪುರ ಗ್ರಾಮದಲ್ಲಿ ಇತ್ತೀಚೆಗೆ ಜಾಗೃತಿ ಜಾಥಾ ನಡೆಸಲಾಯಿತು.

ನೀರಿನ ಸಂರಕ್ಷಣೆ ಕುರಿತು ಘೋಷಣೆಗಳನ್ನು ಕೂಗುತ್ತಾ ಗ್ರಾಮಸ್ಥರಲ್ಲಿ ಅರಿವು ಮೂಡಿಸಲಾಯಿತು. ಈ ಸಂದರ್ಭ ನೀರು ಪೋಲಾಗುತ್ತಿರುವುದನ್ನು ಗುರುತಿಸಿ ಅದನ್ನು ತಡೆಗಟ್ಟುವ ಕುರಿತು ಗ್ರಾಮಸ್ಥರಲ್ಲಿ ಅರಿವು ಮೂಡಿಸಲಾಯಿತು.

ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಆಡಳಿತ ಸಮನ್ವಯಾಧಿಕಾರಿ ಕೆ. ಕುಬೇರಪ್ಪ, ನೀರಿನ ಸದ್ಬಳಕೆ, ಅದರ ಮಹತ್ವ ಮತ್ತು ಮುಂದಿನ ಪೀಳಿಗೆಗೆ ನೀರಾಗಿ ನಮ್ಮ ಕೊಡುಗೆಗಳ ಬಗ್ಗೆ ಮಾಹಿತಿ ನೀಡಿದರು. ಸರಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ. ಗಜಾನನ ಜೋಶಿ, ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಬಿ.ಎಸ್. ಡಾ.ಶಿವಕುಮಾರ್, ಬೋಧಕ, ಬೋಧಕೇತರ ಸಿಬ್ಬಂದಿ ಮತ್ತು ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



ಶಿಕಾರಿಪುರದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಿಂದ ವಿಶ್ವ ಭೂಮಿ ದಿನಾಚರಣೆ ಅಂಗವಾಗಿ ಜಲಶಕ್ತಿ ಅಭಿಯಾನ ಕುರಿತು ತಿಮ್ಲಾಪುರ ಗ್ರಾಮದಲ್ಲಿ ಇತ್ತೀಚೆಗೆ ಜಾಗೃತಿ ಜಾಥಾ ನಡೆಸಲಾಯಿತು.

ವಾಯ್ಸ್ ಆಫ್ ಶಿವಮೊಗ್ಗ 26-04-2022 ಮಂಗಳವಾರ ಪು.ಸಂ.02

# ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ವಿಶ್ವ ಪುಸ್ತಕ ದಿನಾಚರಣೆ



ಶಿಕಾರಿಪುರ : ಇಲ್ಲಿನ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಗ್ರಂಥಾಲಯ ಸಲಹಾ ಸಮಿತಿ ವತಿಯಿಂದ ವಿಶ್ವ ಪುಸ್ತಕ ದಿನಾಚರಣೆಯನ್ನು ಹಮ್ಮಿಕೊಳ್ಳಲಾಗಿತ್ತು.

ಈ ಪುಸ್ತಕ ದಿನಾಚರಣೆಯ ಅಂಗವಾಗಿ ಪ್ರಾಧ್ಯಾಪಕರು ಪ್ರಶಿಕ್ಷಣಾರ್ಥಿಗಳು ಸಂಗ್ರಹಿಸಿದ ಪುಸ್ತಕಗಳನ್ನು ಪ್ರದರ್ಶನ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಪ್ರಾಚಾರ್ಯ ಡಾ. ಶಿವಕುಮಾರ್ ಜಿ.ಎಸ್. ಅವರು ಪುಸ್ತಕ ಪ್ರದರ್ಶನವನ್ನು ಉದ್ಘಾಟನೆ ಮಾಡಿ ಮಾತನಾಡುತ್ತಾ ಪುಸ್ತಕಗಳು ಮನುಷ್ಯನ ಇತಿಹಾಸವನ್ನು ತಿಳಿಸುತ್ತವೆ. ವಿವಿಧ ರೀತಿಯ ಪುಸ್ತಕಗಳು ಹಲವಾರು ಜ್ಞಾನವನ್ನು ನೀಡುವುದಲ್ಲದೆ ಮನುಷ್ಯನ ವ್ಯಕ್ತಿತ್ವವನ್ನು ಹೆಚ್ಚಿಸುತ್ತವೆ.

ಜಗತ್ತಿನಲ್ಲಿ ವಿವಿಧ ಸಾಧನೆಗಳನ್ನು ಮಾಡಿರುವ ಅನೇಕ ಮಹನೀಯರು ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸವನ್ನು ಬೆಳೆಸಿಕೊಂಡಿದ್ದರು. ಡಾ. ಬಿ.ಆರ್ ಅಂಬೇಡ್ಕರ್ ಅವರು ಹೇಳಿರುವಂತೆ "ಯಾರು ಇತಿಹಾಸವನ್ನು ಮರೆತಿರುವರೋ ಅವರು ಮತ್ತೊಂದು ಇತಿಹಾಸವನ್ನು ಸೃಷ್ಟಿಸಲಾರರು". ಹಾಗಾಗಿ ಜೀವನದಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ಸಾಧನೆಯನ್ನು ಮಾಡಬೇಕಾದರೆ ಪುಸ್ತಕಗಳು ದಾರಿದೀಪವಾಗಿ ಪರಿಣಮಿಸುತ್ತವೆ ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಕಾಲೇಜಿನ ಬೋಧಕ ಸಿಬ್ಬಂದಿ ಬೋಧಕೇತರ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಈ ಪುಸ್ತಕ ಪ್ರದರ್ಶನ ಕಾರ್ಯಕ್ರಮಕ್ಕೆ ಕುಮದ್ವತಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರು ಅಧ್ಯಾಪಕವರ್ಗ ಹಾಗೂ ವಿದ್ಯಾರ್ಥಿಗಳು ಆಗಮಿಸಿ ಪುಸ್ತಕಗಳನ್ನು ಅವಲೋಕನ ಮಾಡುವುದರ ಮೂಲಕ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

ವಿಜಯ ಕರ್ನಾಟಕ 28-04-2022 ಗುರುವಾರ ಪು.ಸಂ.06

# ಪುಸ್ತಕಗಳು ಸಾಧನೆಗೆ ದಾರಿದೀಪ

**ವಿಕ ಸುದ್ದಿಲೋಕ** ಶಿವಮೊಗ್ಗ

ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಗ್ರಂಥಾಲಯ ಸಲಹಾ ಸಮಿತಿ ವತಿಯಿಂದ ವಿಶ್ವ ಪುಸ್ತಕ ದಿನಾಚರಣೆ ನಡೆಯಿತು. ದಿನಾಚರಣೆ ಅಂಗವಾಗಿ ಪ್ರಾಧ್ಯಾಪಕರು, ಪ್ರಶಿಕ್ಷಣಾರ್ಥಿಗಳು ಸಂಗ್ರಹಿಸಿದ ಪುಸ್ತಕಗಳ ಪ್ರದರ್ಶನ ಆಯೋಜಿಸಲಾಗಿತ್ತು.

ಪ್ರದರ್ಶನ ಉದ್ಘಾಟಿಸಿದ ಪ್ರಾಚಾರ್ಯ ಡಾ. ಜಿ.ಎಸ್.ಶಿವಕುಮಾರ್ ಮಾತನಾಡಿ, ಪುಸ್ತಕಗಳು ಮನುಷ್ಯನ ಇತಿಹಾಸವನ್ನು ತಿಳಿಸುತ್ತವೆ. ವಿವಿಧ ರೀತಿಯ ಪುಸ್ತಕಗಳು ಹಲವಾರು ಜ್ಞಾನವನ್ನು ನೀಡುವುದಲ್ಲದೆ ಮನುಷ್ಯನ ವ್ಯಕ್ತಿತ್ವವನ್ನು ಹೆಚ್ಚಿಸುತ್ತವೆ. ಜಗತ್ತಿನಲ್ಲಿ ಸಾಧನೆ ಮಾಡಿರುವ ಅನೇಕ ಮಹನೀಯರು ಉತ್ತಮ ಪುಸ್ತಕಗಳನ್ನು ಓದುವ ಹವ್ಯಾಸ ಬೆಳೆಸಿಕೊಂಡಿದ್ದರು. ಜೀವನದಲ್ಲಿ ಯಾವುದಾದರೂ ಕ್ಷೇತ್ರದಲ್ಲಿ ಸಾಧನೆ ಮಾಡಬೇಕಾದರೆ ಪುಸ್ತಕಗಳು ದಾರಿದೀಪವಾಗಿ ಪರಿಣಮಿಸುತ್ತವೆ ಎಂದು ಹೇಳಿದರು.

ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಗ್ರಂಥಾಲಯ ಸಲಹಾ ಸಮಿತಿ ವತಿಯಿಂದ ವಿಶ್ವ ಪುಸ್ತಕ ದಿನಾಚರಣೆ ನಡೆಯಿತು.

ಕನ್ನಡ ಪ್ರಭ 18-05-2022 ಬುಧವಾರ ಪು.ಸಂ.02

# ಗೌರವದಿಂದ ಬದುಕಲು ಸಂಘಟನೆಯಲ್ಲಿ ತೊಡಗಬೇಕು: ತೇಜಸ್ವಿನಿ ರಾಘವೇಂದ್ರ

## ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ವಿದ್ಯಾರ್ಥಿ ಸಂಘ ಉದ್ಘಾಟನೆ

• **ಕನ್ನಡಪ್ರಭ ವಾರ್ತೆ**, ಶಿಕಾರಿಪುರ

ಮನುಷ್ಯ ಸಂಘ ಜೀವಿ, ಸಮಾಜದಲ್ಲಿ ನಾಯಕನಾಗಿ ಹೊಮ್ಮುವ ಮೂಲಕ ಗೌರವದಿಂದ ಬದುಕಲು ಸಂಘಟನೆಯಲ್ಲಿ ತೊಡಗಿಸಿಕೊಳ್ಳಬೇಕಾಗಿದೆ ಎಂದು ಸ್ಥಳೀಯ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ ಹೇಳಿದರು.

ಪಟ್ಟಣದಲ್ಲಿ ಮಂಗಳವಾರ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ 2021-2022ನೇ ಸಾಲಿನ ವಿದ್ಯಾರ್ಥಿ ಸಂಘವನ್ನು ಉದ್ಘಾಟಿಸಿ ಮಾತನಾಡಿದರು.

ಮನುಷ್ಯ ಸಂಘಜೀವಿ. ಸಂಘಟನೆಯಲ್ಲಿ ತೊಡಗಿಸಿಕೊಳ್ಳುವ ಮನೋಭಾವವನ್ನು ಬಾಲ್ಯದಿಂದಲೇ ಬೆಳೆಸಿಕೊಳ್ಳಬೇಕು. ಇದರಿಂದ ಭವಿಷ್ಯದಲ್ಲಿ ನಾಯಕನಾಗಿ ಹೊರಹೊಮ್ಮುವ ಜತೆಗೆ ಗೌರವಯುತವಾಗಿ ಬದುಕಲು ಸಂಘಟನೆಗಳು ಸಹಕಾರಿಯಾಗಲಿವೆ.

ವಿದ್ಯಾರ್ಥಿಗಳು ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಸೃಜನಾತ್ಮಕ ಮತ್ತು ಕ್ರಿಯಾಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬೇಕು. ಶಿಕ್ಷಕ ಮತ್ತು ವಿದ್ಯಾರ್ಥಿಗಳಿಬ್ಬರು ಮಾನಸಿಕ ಒತ್ತಡದಿಂದ ಬಳಲುತ್ತಿದ್ದಾರೆ. ಇಂತಹ ಸಮಸ್ಯೆಗಳಿಂದ ಹೊರಬಂದು ಸ್ವಸ್ಥ ಸಮಾಜವನ್ನು ಕಟ್ಟುವಲ್ಲಿ ಸಮರ್ಥರಾಗುವ ರೀತಿ ಸಿದ್ಧರಾಗಬೇಕು. ಈ ದಿಸೆಯಲ್ಲಿ ಇಂತಹ ಕಾರ್ಯಕ್ರಮಗಳು ಪ್ರೇರೇಪಿಸಲಿ ಎಂದು ಹಾರೈಸಿದರು. ಅಧ್ಯಕ್ಷತೆಯನ್ನು ಸಂಸ್ಥೆ ಶೈಕ್ಷಣಿಕ ಆಡಳಿತ ಸಮನ್ವಯಾಧಿಕಾರಿ ಪ್ರೊ. ಎಸ್.ಎಸ್. ಗದಗ್ ವಹಿಸಿ ಮಾತನಾಡಿದರು. ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಜಿ.ಆರ್. ಹೆಗಡೆ ಮತ್ತಿತರರು ಉಪಸ್ಥಿತರಿದ್ದರು. ರೇಣುಕಾ ಸಂಗಡಿಗರು ಪ್ರಾರ್ಥಿಸಿ, ಲವ ಎಂ.ಕೆ. ಸ್ವಾಗತಿಸಿದರು. ರಮ್ಯಾ ಹಾಗೂ ಶ್ರೇಯಾ ನಿರೂಪಿಸಿ, ಕಾವ್ಯ ಉಪ್ಪಾರ ವಂದಿಸಿದರು.



ಶಿಕಾರಿಪುರ ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯಲ್ಲಿ ನೂತನ ವಿದ್ಯಾರ್ಥಿ ಸಂಘವನ್ನು ಮಂಗಳವಾರ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ ಉದ್ಘಾಟಿಸಿದರು.

ವಿಜಯವಾಣಿ 08-06-2022

ಬುಧವಾರ ಪು.ಸಂ.04

# ನಿಷ್ಕಾಳಜಿಯಿಂದ ಪರಿಸರಕ್ಕೆ ಧಕ್ಕೆ

ಶಿಕಾರಿಪುರ: ಪರಿಸರದ ಮೇಲಿನ ದೌರ್ಜನ್ಯ ಮತ್ತು ನಿಷ್ಕಾಳಜಿಯಿಂದಾಗಿ ದಿನದಿಂದ ದಿನಕ್ಕೆ ಪರಿಸರ ಹಾಳಾಗುತ್ತಿದೆ ಎಂದು ಡಿವಿಎಸ್ ಕಾಲೇಜಿನ ನಿವೃತ್ತ ಪ್ರಾಚಾರ್ಯ ಪ್ರೊ. ಬಿ.ಎಂ.ಕುಮಾರಸ್ವಾಮಿ ಹೇಳಿದರು. ಸೋಮವಾರ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪರಿಸರ ದಿನಾಚರಣೆಯನ್ನು ಸಸಿ ನೆಡುವ ಮೂಲಕ ಉದ್ಘಾಟಿಸಿ ಮಾತನಾಡಿ, ಪರಿಸರವನ್ನು ಬಲಿಕೆಕ್ಕೆ ಮಾರುತ್ತಿದ್ದೇವೆ. ಪಂಚಭೂತಗಳನ್ನು ನಾವೇ ನಿರ್ನಾಮ ಮಾಡುತ್ತಿದ್ದೇವೆ. ಪ್ರಕೃತಿ ವೃಕ್ಷಯಗಳಿಂದ ವಿಕೋಪಗಳಾಗಿ ಭೂಮಿ ನಲುಗಿ ಹೋಗುತ್ತಿದೆ. ಮೊದಲು ಪರಿಸರ ಉಳಿಸಲು ಮುಂದಾಗಬೇಕು. ಅಭಿವೃದ್ಧಿ ಭರದಿಂದ ಪರಿಸರ ಕಾಳಜಿ ಕಡಿಮೆಯಾಗಿದೆ. ಕೈಗಾರಿಕಾ ಕ್ರಾಂತಿ ಕೂಡ ಪರಿಸರ ಹಾಳಾಗಲು ಮುನ್ನುಡಿ ಬರೆದಿದೆ. ಪರಿಸರ ಉಳಿಸಲು ಯುವಕರು ಮತ್ತು ವಿದ್ಯಾರ್ಥಿಗಳನ್ನು ಅಣಿಗೊಳಿಸಬೇಕು ಎಂದು ಸಲಹೆ ನೀಡಿದರು. ಕುಮದ್ವತಿ ಮಹಾವಿದ್ಯಾಲಯ ಪ್ರಾಚಾರ್ಯ ಡಾ. ಜಿ.ಎಸ್.ಶಿವಕುಮಾರ್, ಪ್ರೊ. ಎಸ್.ಎಸ್.ಗದಗ್ ಇತರರಿದ್ದರು.



ಶಿಕಾರಿಪುರದ ಕುಮದ್ವತಿ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ಪರಿಸರ ದಿನಾಚರಣೆಯನ್ನು ಪ್ರೊ. ಬಿ.ಎಂ.ಕುಮಾರಸ್ವಾಮಿ ಸಸಿ ನೆಡುವ ಮೂಲಕ ಉದ್ಘಾಟಿಸಿದರು. ಡಾ. ಜಿ.ಎಸ್.ಶಿವಕುಮಾರ್, ಪ್ರೊ. ಎಸ್.ಎಸ್.ಗದಗ್ ಇತರರಿದ್ದರು.

ವಿಜಯವಾಣಿ 14-06-2022

ಮಂಗಳವಾರ ಪು.ಸಂ.02

# ಸಣ್ಣ ವಯಸ್ಸಲ್ಲೇ ಕೆಲಸಕ್ಕೆ ದೂಡಬೇಡಿ

ಶಿಕಾರಿಪುರ: ಬಾಲ ಕಾರ್ಮಿಕ ಪದ್ಧತಿ ಈ ದೇಶಕ್ಕೆ ಅಂಟಿದ ಅನಿಷ್ಟ. ಅದನ್ನು ನಾವು ಬೇರು ಸಹಿತ ಕಿತ್ತೊಗೆಯಬೇಕು ಎಂದು ಸಮಾಜ ವಿಜ್ಞಾನ ಸಂಘದ ಮುಖ್ಯಸ್ಥ, ಪ್ರಾಧ್ಯಾಪಕ ವೈ.ದೇವರಾಜ್ ಹೇಳಿದರು. ಸೋಮವಾರ ಶಿವಪ್ಪಪುರ ಗ್ರಾಮದಲ್ಲಿ ಶ್ರೀ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ಐಕ್ಯುಎಸಿ, ಸಮಾಜ ವಿಜ್ಞಾನ ಸಂಘ ಬಾಲಕಾರ್ಮಿಕ ವಿರೋಧಿ ದಿನದ ಅಂಗವಾಗಿ ಆಯೋಜಿಸಿದ್ದ ಜಾಗೃತಿ ಜಾಥಾದಲ್ಲಿ ಮಾತನಾಡಿ, ಮಕ್ಕಳನ್ನು ಬಾಲ್ಯಾವಸ್ಥೆಯಲ್ಲಿ ಕಾರ್ಮಿಕರನ್ನಾಗಿ ಮಾಡಬಾರದು. ಅವರಿಗೆ ಶಿಕ್ಷಣ ಕೊಡಿಸಿ, ನಾಡಿನ ಸತ್ಪ್ರಜೆಗಳನ್ನಾಗಿ ಮಾಡಬೇಕು. ವಿದ್ಯೆ ನಮಗೆ ಲಕ್ಷಣ. ಮಕ್ಕಳನ್ನು ಯಾವುದೇ ಕಾರಣಕ್ಕೂ ವಿದ್ಯಾಹೀನರನ್ನಾಗಿ ಮಾಡಬಾರದು. ಅವರನ್ನು ದುಡಿಸಿಕೊಳ್ಳುವುದು ಅಕ್ಷರಶಃ ತಪ್ಪು ಎಂದರು. ಚಿಕ್ಕಂದಿನಿಂದಲೇ ಕಾರ್ಮಿಕರಾಗಿ ಕೆಲಸ ಮಾಡತೊಡಗಿದರೆ ದುಶ್ಚಟಗಳಿಗೆ ಬಲಿಯಾಗಿ ಅವರ ಜೀವನವೇ ಹಾಳಾಗುತ್ತದೆ. ನಮ್ಮ ಮಕ್ಕಳಿಗೆ ಮೊದಲು ಶಿಕ್ಷಣ, ನಂತರ ಉದ್ಯೋಗ ಎಂಬ ಮಂತ್ರ ಹೇಳಿಕೊಡಬೇಕು. ಮಕ್ಕಳು ಸಮಾಜದಲ್ಲಿ ತಲೆ ಎತ್ತಿ ನಿಲ್ಲುವಂತಾಗಬೇಕು ಎಂದರು. ವಿದ್ಯಾರ್ಥಿಗಳು ಬಾಲಕಾರ್ಮಿಕ ಪದ್ಧತಿ ವಿರೋಧಿಸಿ ಘೋಷಣೆಗಳ ಕೂಗುವ ಮೂಲಕ ಜಾಗೃತಿ ಮೂಡಿಸಿದರು. ನಗರದ ಪ್ರಮುಖ ರಸ್ತೆಗಳಲ್ಲಿ ಜಾಥಾ ಸಂಚರಿಸಿತು. ಸಮಾಜ ವಿಜ್ಞಾನ ಸಂಘದ ಮುಖ್ಯಸ್ಥೆ ಡಾ.ವಾಣಿ, ಕಾಲೇಜು ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.



ಶಿಕಾರಿಪುರದಲ್ಲಿ ಬಾಲ ಕಾರ್ಮಿಕ ಪದ್ಧತಿ ವಿರೋಧಿಸಿ ವಿದ್ಯಾರ್ಥಿಗಳು ಪಥಸಂಚಲನ ನಡೆಸಿ ಜಾಗೃತಿ ಮೂಡಿಸಿದರು.

ವಿಜಯ ಕರ್ನಾಟಕ 19-06-2022 ಭಾನುವಾರ ಪು.ಸಂ.02

# ಬಾಲ ಕಾರ್ಮಿಕರಿಗೆ ಶಿಕ್ಷಣ ಸಮುದಾಯದ ಕರ್ತವ್ಯ

**ವಿಕ ಸುದ್ದಿಲೋಕ** ಶಿಕಾರಿಪುರ

ಹೋಟೆಲ್, ಕಾರ್ಖಾನೆ ಇತ್ಯಾದಿ ಸ್ಥಳದಲ್ಲಿ ಕೆಲಸ ನಿರ್ವಹಿಸುವ ಬಾಲಕಾರ್ಮಿಕರಿಗೆ ಶಿಕ್ಷಣ ಕೊಡಿಸುವುದು ಸಮುದಾಯದ ಎಲ್ಲರ ಕರ್ತವ್ಯ. ಅವರಿಗೆ ಉಚಿತ ಶಿಕ್ಷಣ ನೀಡುವುದಕ್ಕೂ ಸರಕಾರ ಯೋಜನೆ ರೂಪಿಸಿದ್ದು, ಅದರ ಸದ್ಬಳಕೆ ಮಾಡಿಕೊಳ್ಳಬೇಕು ಎಂದು ಸಹಾಯಕ ಪ್ರಾಧ್ಯಾಪಕ ವೈ.ದೇವರಾಜ್ ಹೇಳಿದರು.

ತಾಲೂಕಿನ ತಿಮ್ಲಾಪುರ ಗ್ರಾಮದಲ್ಲಿ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ್ದ ಬಾಲಕಾರ್ಮಿಕ ವಿರೋಧಿ ಜಾಥಾಕ್ಕೆ ಚಾಲನೆ ನೀಡಿ ಅವರು ಮಾತನಾಡಿ, ಶಿಕ್ಷಣ ಕಡ್ಡಾಯಗೊಳಿಸಿ ಸರಕಾರ ಆದೇಶ ನೀಡಿದೆ. ಉಚಿತ ಬಟ್ಟೆ, ಪುಸ್ತಕ, ಬಿಸಿಯೂಟ, ಉತ್ತಮ ಕಲಿಕೆ ನೀಡುತ್ತಿದೆ. ಮಕ್ಕಳನ್ನು ಕೆಲಸಕ್ಕೆ ಕಳುಹಿಸುವ ಪೋಷಕರ ಜತೆ ಮಾತುಕತೆ ನಡೆಸಿ ಮನವೊಲಿಸಬೇಕು ಎಂದರು.

ಐಕ್ಯೂಎಸಿ, ಸಮಾಜ ವಿಜ್ಞಾನ ಸಂಘ ಕಾರ್ಯಕ್ರಮಕ್ಕೆ ಸಹಯೋಗ ನೀಡಿದ್ದವು. ಗ್ರಾಮದಲ್ಲಿ ಶಾಲೆ ಬಿಟ್ಟ ಮಕ್ಕಳ ಗಣತಿ ಮಾಡಿ ಪೋಷಕರ ಮನವೊಲಿಸುವ ಕೆಲಸ ಮಾಡಲಾಯಿತು. ಸಮಾಜ ವಿಜ್ಞಾನ ಸಂಘದ ಡಾ. ವಾಣಿ ನಾಯಕ, ಕಾಲೇಜಿನ ಎಲ್ಲ ಸಹಾಯಕ ಪ್ರಾಧ್ಯಾಪಕರು, ಬೋಧಕೇತರ ವರ್ಗದವರು ಇದ್ದರು.



ಶಿಕಾರಿಪುರ ತಾಲೂಕು ತಿಮ್ಲಾಪುರದಲ್ಲಿ ನಡೆದ ಬಾಲಕಾರ್ಮಿಕ ವಿರೋಧಿ ಜಾಥಾದಲ್ಲಿ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿಗಳು ಜಾಗೃತಿ ಜಾಥಾ ನಡೆಸಿದರು.

ವಿಜಯ ಕರ್ನಾಟಕ 19-06-2022 ಭಾನುವಾರ ಪು.ಸಂ.02



ಕುವೆಂಪು ವಿವಿಯ 2019-2020ನೇ ಸಾಲಿನ ಬಿ.ಇಡಿ ಪದವಿ ಪರೀಕ್ಷೆಯಲ್ಲಿ ಶೇ.94.25 ಅಂಕದೊಂದಿಗೆ ಪ್ರಥಮ ರ್‍ಯಾಂಕ್ ಗಳಿಸಿದ ಶಿಕಾರಿಪುರದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಆಯೇಷಾ ಫರೀನ್ ಶೇಕ್ ಅವರು ವಿವಿ ಘಟಿಕೋತ್ಸವದಲ್ಲಿ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರಿಂದ ಚಿನ್ನದ ಪದಕ ಸ್ವೀಕರಿಸಿದರು. ಇವರನ್ನು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಆಡಳಿತ ಮಂಡಳಿ ಹಾಗೂ ಕಾಲೇಜು ಬೋಧಕ ವರ್ಗ, ಸಿಬ್ಬಂದಿ ಅಭಿನಂದಿಸಿದ್ದಾರೆ.

ಎನ್‌ಎಸ್‌ಎಸ್ ಶಿಬಿರ ಉದ್ಘಾಟಿಸಿದ ಸಂಸದ ರಾಘವೇಂದ್ರ

# ಸ್ವಾರ್ಥ ಬಿಟ್ಟು, ದೇಶಕ್ಕೆ ಕೊಡುಗೆ ನೀಡಿ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ಯುವ ಸಮುದಾಯ ಸ್ವಾರ್ಥಕ್ಕಾಗಿ ಜೀವನ ನಡೆಸದೆ ದೇಶಕ್ಕೆ ಉನ್ನತ ಕೊಡುಗೆ ನೀಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು ಎಂದು ಸಂಸದ ಬಿ.ವೈ. ರಾಘವೇಂದ್ರ ಸಲಹೆ ನೀಡಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯವು ತಿಮ್ಲಾಪುರ ಗ್ರಾಮದಲ್ಲಿ ಈಚೆಗೆ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಬಿಇಡಿ ಪದವಿ ಪಡೆದ ನಂತರ ಶಿಕ್ಷಕರಾಗುವ ನೀವು ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಶ್ರಮಿಸಬೇಕು. ತಂತ್ರಜ್ಞಾನ ಯುಗಕ್ಕೆ ತಕ್ಕಂತೆ ವಿದ್ಯಾರ್ಥಿಗಳನ್ನು ಬೆಳೆಸುವ ಜವಾಬ್ದಾರಿ ನಿಮ್ಮ ಮೇಲಿದೆ. ಆಗಮಾತ್ರ ಸ್ಪರ್ಧಾ ಜಗತ್ತಿನಲ್ಲಿ ಅವರು ಸಾಧನೆಗೈಯಲು ಸಾಧ್ಯವಾಗಲಿದೆ. ಈ ಮೂಲಕ ಪೋಷಕರು ಹಾಗೂ ಸಮಾಜದ ಋಣ ತೀರಿಸಬಹುದಾಗಿದೆ. ವಿದ್ಯಾರ್ಥಿಗಳು ಓದಿನ ಜತೆ ಸಮಾಜದ ಏಳಿಗೆಗಾಗಿ ಸೇವೆ ಮಾಡುವ ಮನೋಭಾವವನ್ನು ಬೆಳೆಸಿಕೊಳ್ಳಬೇಕು' ಎಂದು ರಾಘವೇಂದ್ರ ಅವರು ಹೇಳಿದರು.



ಶಿಕಾರಿಪುರ ಸಮೀಪದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಈಚೆಗೆ ತಿಮ್ಲಾಪುರ ಗ್ರಾಮದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರವನ್ನು ಸಂಸದ ಬಿ.ವೈ. ರಾಘವೇಂದ್ರ ಉದ್ಘಾಟಿಸಿ ಮಾತನಾಡಿದರು.

ಕುವೆಂಪು ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆ ಸಂಯೋಜನಾಧಿಕಾರಿ ಪರಿಸರ ನಾಗರಾಜ್, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಮಾರ್ಗದರ್ಶಕ ಪ್ರೊ.ಎಸ್.ಎಸ್. ಗದಗ, ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ಜಿ.ಎಸ್. ಶಿವಕುಮಾರ್, ಕುಮುದ್ವತಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಜಿ. ಆರ್. ಹೆಗಡೆ, ತರಲಘಟ್ಟ ಗ್ರಾಮ ಪಂಚಾಯಿತಿ ಅಧ್ಯಕ್ಷ ಬಸವರಾಜಪ್ಪ ಅವರೂ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

Davangere

ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್

# ವಿನಯತೆಯಿಂದ ಅಸಾಧ್ಯವೂ ಸಾಧ್ಯ



**ಶಿಕಾರಿಪುರ:** ವಿಧೇಯತೆ, ವಿನಯತೆಯಿಂದ ಅಸಾಧ್ಯ ವಾದುದನ್ನು ಸಾಧಿಸಬಹುದು ಎಂಬುದನ್ನು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಶಿಬಿರಾರ್ಥಿಗಳು ಪಡೆಯಲು ಸಾಧ್ಯ ಎಂದು ಇಲ್ಲಿನ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್ ತಿಳಿಸಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ತಾಲೂಕಿನ ತರಲಘಟ್ಟ ಗ್ರಾಮದಲ್ಲಿ ಬಿಇಡಿ ಪ್ರಶಿಕ್ಷಣಾರ್ಥಿಗಳಿಗೆ ನಡೆದ ರಾಷ್ಟ್ರೀಯ ಸೇವಾ ಯೋಜನಾ ವಾರ್ಷಿಕ ವಿಶೇಷ ಶಿಬಿರದ ಸಮಾರೋಪದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆಯ ಆರಂಭದಿಂದ ಅಂತ್ಯದವರೆಗೆ ನಿತ್ಯ ಶಿಬಿರಾರ್ಥಿಗಳಿಗೆ ಹೊಸ ಹೊಸ ಅನುಭವವಾಗಲಿದೆ. ಶಿಬಿರದಲ್ಲಿನ ಪ್ರತಿಯೊಂದು ಚಟುವಟಿಕೆಗಳು ವ್ಯಕ್ತಿತ್ವ ವಿಕಸನಕ್ಕೆ ಅತ್ಯಂತ ಪ್ರಾಮುಖ್ಯವಾಗಿದೆ. ವಿಧೇಯತೆ, ವಿನಯತೆ ಯಿಂದ ಮನುಷ್ಯ ಬದುಕಿನಲ್ಲಿ ಅಸಾಧ್ಯವಾದುದನ್ನು ಸಾಧಿಸಬಹುದು ಎಂಬ ಮನೋಸ್ಥೈರ್ಯವನ್ನು ಶಿಬಿರ ಮೂಡಿಸುತ್ತದೆ ಎಂದರು.

ನಿತ್ಯ ನಿರ್ವಹಿಸುವ ಕೆಲಸದಲ್ಲಿ ಶ್ರದ್ಧೆ, ಏಕಾಗ್ರತೆ, ಕಾಯಕ ಪರಿಕಲ್ಪನೆ, ನನ್ನ ಮತ್ತು ನಮ್ಮ ಸಮಾಜವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಕೆಲಸದಲ್ಲಿ ಕೀಳರಿಮೆಯನ್ನು ತೋರದೆ ಹಿಡಿದ ಕೆಲಸವನ್ನು ಪೂರ್ಣಗೊಳಿಸಬೇಕು. ಪೋಷಕರಿಗೆ ಗೌರವ ನೀಡಿ, ಶಿಕ್ಷಣ ಪ್ರವೃತ್ತಿಗೆ ಆದ್ಯತೆ, ಸಮಯ ಪ್ರಜ್ಞೆ, ಎಲ್ಲವೂ ಶ್ರಮ ಗೌರವವನ್ನು ಹೆಚ್ಚಿಸುವುದು ಮತ್ತಿತರ ಮೌಲ್ಯಗಳನ್ನು ಶಿಬಿರದಲ್ಲಿ ಅರಿತುಕೊಳ್ಳಲು ಸಾಧ್ಯ ಎಂದರು.

ಶಿಬಿರದಿಂದ ಪಡೆದ ಹೊಸ ರೀತಿಯ ಅನುಭವ ಬದುಕಿನ ಮೌಲ್ಯಯುತ ಪಾಠ ಕೇವಲ ಶಿಬಿರಕ್ಕೆ ಮಾತ್ರ ಸೀಮಿತವಾಗದೆ ಜೀವನದಲ್ಲಿ ಅಳವಡಿಸಿಕೊಂಡಾಗ ನಿಶ್ಚಿತವಾಗಿ ಯಶಸ್ಸು ಗಳಿಸಲು ಸಾಧ್ಯ ಎಂದು ತಿಳಿಸಿದರು.

ಬಾಪೂಜಿ ಪ್ರೌಢಶಾಲೆ ಮುಖ್ಯೋಪಾಧ್ಯಾಯ ಕೆ. ರಾಘವೇಂದ್ರ ಮಾತನಾಡಿ, ರಾಷ್ಟ್ರೀಯ ಸ್ವಯಂ ಸೇವಾ ಯೋಜನೆಯಲ್ಲಿ ನಾಯಕತ್ವ ಗ್ರಾಮೀಣ ಬದುಕಿನ ಜೀವನ ವಿಧಾನ, ಪರಸ್ಪರ ಗೌರವ ನೀಡುವುದು, ಪರಿಸರಕ್ಕೆ ತೋರುವ ನಿಸ್ವಾರ್ಥ ಸೇವೆ ಮುಂತಾದ ಗುಣಗಳನ್ನು ಶಿಬಿರದಿಂದ ಮಾತ್ರ ಅರಿತುಕೊಳ್ಳಲು ಸಾಧ್ಯ. ಪರಿಸರದೊಂದಿಗೆ ಹೊಂದಿಕೊಳ್ಳುವ ಹಾಗೂ ಶ್ರಮ ಗೌರವವನ್ನು ಹೆಚ್ಚಿಸುವುದರೊಂದಿಗೆ ಪ್ರತಿಯೊಬ್ಬರೂ ಮುಖ್ಯ ಎಂಬ ಮನೋಭಾವವನ್ನು ಈ ರೀತಿ ಶಿಬಿರಗಳು ಮೂಡಿಸುತ್ತವೆ ಎಂದು ಹೇಳಿದರು.

ಶಿಬಿರದ ವರದಿಯನ್ನು ಕಾಲೇಜಿನ ದೈಹಿಕ ನಿರ್ದೇಶಕ ಹಾಗೂ ಶಿಬಿರದ ನಿರ್ದೇಶಕ ರವಿಕುಮಾರ ಎನ್.ಜಿ ವಾಚಿಸಿದರು.

ಕಳೆದ ಎರಡು ವರ್ಷದಿಂದ ಸತತ ಎನ್‌ಎಸ್‌ಎಸ್ ಶಿಬಿರದಲ್ಲಿ ಪಾಲ್ಗೊಂಡಿದ್ದ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿ ಪ್ರೋತ್ಸಾಹಿಸಲಾಯಿತು. ವೇದಿಕೆಯಲ್ಲಿ ಪ್ರಾಚಾರ್ಯ ಡಾ. ಎಂ. ವೀರೇಂದ್ರ, ಜಿ.ಎಸ್. ಶಿವಕುಮಾರ ಇದ್ದರು.

ವಿಶ್ವವಾಣಿ ದಿನಾಂಕ : 03–03–2022 ಗುರುವಾರ ಪು.ಸಂ–02

ವಿಶ್ವವಾಣಿ

# ವಿನಯತೆಯಿಂದ ಅಸಾಧ್ಯವಾದುದನ್ನು ಸಾಧಿಸಬಹುದು

**ಶಿಕಾರಿಪುರ:** ವಿಧೇಯತೆ ವಿನಯತೆಯಿಂದ ಅಸಾಧ್ಯವಾದುದನ್ನು ಸಾಧಿಸಬಹುದು ಎಂಬುದನ್ನು ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರದಲ್ಲಿ ಶಿಬಿರಾರ್ಥಿಗಳು ಪಡೆಯಲು ಸಾಧ್ಯ ಎಂದು ಇಲ್ಲಿನ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ.,ಎಸ್ ಎಸ್ ಗದಗ್ ತಿಳಿಸಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ತಾಲೂಕಿನ ತರಲಘಟ್ಟ ಗ್ರಾಮದಲ್ಲಿ ಬಿಇಡಿ ಪ್ರಶಿಕ್ಷಣಾರ್ಥಿಗಳಿಗೆ ನಡೆದ ರಾಷ್ಟ್ರೀಯ ಸೇವಾ ಯೋಜನಾ ವಾರ್ಷಿಕ ವಿಶೇಷ ಶಿಬಿರದ ಸಮಾರೋಪದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ರಾಷ್ಟ್ರೀಯ ಸೇವಾ ಯೋಜನೆಯ ಆರಂಭದಿಂದ ಅಂತ್ಯದವರೆಗೆ ನಿತ್ಯ ಶಿಬಿರಾರ್ಥಿಗಳಿಗೆ ಹೊಸ ಹೊಸ ಅನುಭವವಾಗಲಿದ್ದು, ಶಿಬಿರದಲ್ಲಿನ ಪ್ರತಿಯೊಂದು ಚಟುವಟಿಕೆಗಳು ವ್ಯಕ್ತಿತ್ವ ವಿಕಸನಕ್ಕೆ ಅತ್ಯಂತ ಪ್ರಾಮುಖ್ಯವಾಗಿದೆ ಎಂದ ಅವರು ವಿಧೇಯತೆ, ವಿನಯತೆಯಿಂದ ಮನುಷ್ಯ ಬದುಕಿನಲ್ಲಿ ಆಸಾಧ್ಯವಾದುದನ್ನು ಸಾಧಿಸಬಹುದು ಎಂಬ ಮನೋಸ್ಥೈರ್ಯವನ್ನು ಶಿಬಿರ ಮೂಡಿಸುತ್ತದೆ.ನಿತ್ಯ ನಿರ್ವಹಿಸುವ ಕೆಲಸದಲ್ಲಿ ಶ್ರದ್ಧೆ,ಪರಿಪಕ್ವತೆ,ಕಾಯಕ ಪರಿಕಲ್ಪನೆ,ನನ್ನ ಮತ್ತು ನಮ್ಮ ಸಮಾಜವನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು.ಕೆಲಸದಲ್ಲಿ ಕೀಳರಿಮೆಯನ್ನು ತೋರದೆ, ಹಿಡಿದ ಕೆಲಸವನ್ನು ಪೂರ್ಣಗೊಳಿಸುವುದು ಪೋಷಕರಿಗೆ ಗೌರವ ನೀಡುವುದು, ಶಿಕ್ಷಕ ಪ್ರವೃತ್ತಿಗೆ ಆದ್ಯತೆ ನೀಡುವುದು, ಸಮಯ ಪ್ರಜ್ಞೆ, ಶ್ರಮ ಗೌರವವನ್ನು ಹೆಚ್ಚಿಸುವುದು ಮತ್ತಿತರ ಮೌಲ್ಯಗಳನ್ನು ಶಿಬಿರದಲ್ಲಿ ಅರಿತುಕೊಳ್ಳಲು ಸಾಧ್ಯ. ಶಿಬಿರದಿಂದ ಪಡೆದ ಹೊಸ ರೀತಿಯ ಅನುಭವ ಬದುಕಿನ ಮೌಲ್ಯಯುತ ಪಾಠ ಕೇವಲ ಶಿಬಿರಕ್ಕೆ ಮಾತ್ರ ಸೀಮಿತವಾಗದೆ ಜೀವನದಲ್ಲಿ ಅಳವಡಿಸಿಕೊಂಡಾಗ ನಿಶ್ಚಿತವಾಗಿ ಯಶಸ್ಸುಗಳಿಸಲು ಸಾಧ್ಯ ಎಂದು ತಿಳಿಸಿದರು.

ಮುಖ್ಯ ಅತಿಥಿ ಸ್ಥಳೀಯ ಬಾಪೂಜಿ ಪ್ರೌಢ ಶಾಲೆ ಮುಖ್ಯೋಪಾಧ್ಯಾಯ ಕೆ.ರಾಘವೇಂದ್ರ ಮಾತನಾಡಿ,ರಾಷ್ಟ್ರೀಯ ಸ್ವಯಂ ಸೇವಾ ಯೋಜನೆಯಲ್ಲಿ ನಾಯಕತ್ವ, ಗ್ರಾಮೀಣ ಬದುಕಿನ ಜೀವನ ವಿಧಾನ, ಪರಸ್ಪರ ಗೌರವ ನೀಡುವುದು, ಪರಿಸರಕ್ಕೆ ತೋರುವ ನಿಸ್ವಾರ್ಥ ಸೇವೆ ಮುಂತಾದ ಗುಣಗಳನ್ನು ಶಿಬಿರದಿಂದ ಮಾತ್ರ ಅರಿತುಕೊಳ್ಳಲು ಸಾಧ್ಯ.. ಪರಿಸರದೊಂದಿಗೆ ಹೊಂದಿಕೊಳ್ಳುವ ಹಾಗೂ ಶ್ರಮ ಗೌರವವನ್ನು ಹೆಚ್ಚಿಸುವುದರೊಂದಿಗೆ ಪ್ರತಿಯೊಬ್ಬರು ಮುಖ್ಯ ಎಂಬ ಮನೋಭಾವನ್ನು ಈ ರೀತಿ ಶಿಬಿರಗಳು ಮೂಡಿಸುತ್ತದೆ ಎಂದು ಹೇಳಿದರು.



ಶಿಕಾರಿಪುರದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಬಿಇಡಿ ಪ್ರಶಿಕ್ಷಣಾರ್ಥಿಗಳಿಗೆ ನಡೆದ ಎನ್‌ಎಸ್‌ಎಸ್ ಶಿಬಿರದ ಸಮಾರೋಪದಲ್ಲಿ ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್ ಗದಗ್ ಮಾತನಾಡಿದರು.

ಶಿಬಿರದ ವರದಿಯನ್ನು ಕಾಲೇಜಿನ ದೈಹಿಕ ನಿರ್ದೇಶಕ ಹಾಗು ಶಿಬಿರದ ನಿರ್ದೇಶಕ ರವಿಕುಮಾರ ಎನ್.ಜಿ ವಾಚಿಸಿದರು.

ಕಳೆದ ಎರಡು ವರ್ಷದಿಂದ ಸತತ ಎನ್. ಎಸ್. ಎಸ್. ಶಿಬಿರದಲ್ಲಿ ಪಾಲ್ಗೊಂಡಿದ್ದ ಪ್ರಶಿಕ್ಷಣಾರ್ಥಿಗಳಿಗೆ ಪ್ರಮಾಣ ಪತ್ರವನ್ನು ನೀಡಿ ಪ್ರೋತ್ಸಾಹಿಸಲಾಯಿತು.ವೇದಿಕೆಯಲ್ಲಿ ಪ್ರಾಚಾರ್ಯ ಡಾ.ವೀರೇಂದ್ರ, ಎಂ, ಶಿವಕುಮಾರ ಜಿ.ಎಸ್ ಸಹಿತ ಕಾಲೇಜಿನ ಬೋಧಕ ಬೋಧಕೇತರ ವರ್ಗದವರು ಉಪಸ್ಥಿತರಿದ್ದರು.

ಉಷಾ ಪ್ರಾರ್ಥಿಸಿ,ಶಾಂಭವಿ ಸ್ವಾಗತಿಸಿ, ವಿದ್ಯಾಶ್ರೀ ಹಾಗೂ ನಯನ ನಿರೂಪಿಸಿ,ಡಾ. ವಾಣಿನಾಯಕಿ ವಂದಿಸಿದರು.

# Paper Reports
# 2019-2020

ಪ್ರಜಾವಾಣಿ ದಿನಾಂಕ : 15–01–2020 ಬುಧವಾರ ಪುಟ–03



ಸ್ವಾಮಿ ವಿವೇಕಾನಂದರ 158ನೇ ಜಯಂತಿ ಹಾಗೂ ಕುವೆಂಪು ಅವರ ಜನ್ಮದಿನದ ಪ್ರಯುಕ್ತ ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಚೆಗೆ ವಿವಿಧ ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸ್ವರಚಿತ ಕವನ ಸ್ಪರ್ಧೆ ಆಯೋಜಿಸಲಾಗಿತ್ತು

## ಸಮಾಜಕ್ಕೆ ನೆರವಾಗುವಂತೆ ಬದುಕಿ: ಸುರೇಶ್ ಕುಮಾರ್

ಶಿಕಾರಿಪುರ: 'ಸಮಾಜಕ್ಕೆ ಶಾಪವಾಗದೇ, ಸಮಾಜಕ್ಕೆ ನೆರವಾಗುವ ರೀತಿ ಜೀವನ ನಡೆಸಬೇಕು' ಎಂದು ಪ್ರಾಥಮಿಕ ಹಾಗೂ ಪ್ರೌಢಶಿಕ್ಷಣ ಸಚಿವ ಎಸ್.ಸುರೇಶ್ ಕುಮಾರ್ ಹೇಳಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಶನಿವಾರ ನಡೆದ ಸ್ವಾಮಿ ವಿವೇಕಾನಂದರ 158ನೇ ಜನ್ಮ ದಿನಾಚರಣೆ, ವಿವೇಕಾಂಜಲಿ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭದಲ್ಲಿ ಮಾತನಾಡಿದರು.

'ಪ್ರತಿ ಕ್ಷಣ ಸಮಾಜಕ್ಕಾಗಿ, ಸಮಾಜದ ಹಿತಕ್ಕಾಗಿ ಬದುಕಬೇಕು' ಎಂದರು.

ಶಿವಮೊಗ್ಗ ರಾಮಕೃಷ್ಣ ಆಶ್ರಮದ ಸ್ವಾಮಿ ವಿನಯಾನಂದ ಸರಸ್ವತಿ, 'ಸ್ವಾಮಿ ವಿವೇಕಾನಂದರು ಇಡೀ ಮಾನವ ಕುಲಕ್ಕೆ ಸೇರಿದವರು' ಎಂದು ಹೇಳಿದರು.

ಸಂಸದ ಬಿ.ವೈ.ರಾಘವೇಂದ್ರ, 'ವಿವೇಕಾನಂದರ ತತ್ವ, ಆದರ್ಶಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದರು.

ಕಾಲೇಜು ಶಿಕ್ಷಣ ಇಲಾಖೆ ಉಪ ನಿರ್ದೇಶಕ ರಮೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾಮಹೇಶ್, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ದತ್ತಾತ್ರಿ ಇದ್ದರು.

ಪ್ರಜಾವಾಣಿ ದಿನಾಂಕ : 19–01–2020 ಭಾನುವಾರ ಪುಟ–02



ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸ್ವಾಮಿವಿವೇಕಾನಂದರ 158ನೇ ಜನ್ಮ ದಿನಾಚರಣೆ, ವಿವೇಕಾಂಜಲಿ ಸ್ಮರಣ ಸಂಚಿಕೆ ಬಿಡುಗಡೆ ಸಮಾರಂಭವನ್ನು ಸಚಿವ ಎಸ್ ಸುರೇಶ್‌ಕುಮಾರ್ ಉದ್ಘಾಟಿಸಿದರು

ವಿಜಯ ಕರ್ನಾಟಕ ದಿನಾಂಕ : 19-01-2020 ಭಾನುವಾರ ಪುಟ-04

# ಸಮಾಜಕ್ಕೆ ನೆರವಾಗುವುದು ನಿಜವಾದ ದೇಶಭಕ್ತಿ

**ಶಿಕಾರಿಪುರ:** ಭಾರತ, ಪಾಕಿಸ್ತಾನ ಕ್ರಿಕೇಟ್ ಸಂದರ್ಭ ನಮ್ಮ ದೇಶದ ಪರ ಘೋಷಣೆ ಕೂಗುವ ದೇಶಭಕ್ತಿಗಿಂತಲೂ ಸಮಾಜಕ್ಕೆ ನೆರವಾಗುವ ರೀತಿಯಲ್ಲಿ ಬದುವುದು ನಿಜವಾದ ದೇಶಭಕ್ತಿ ಎಂದು ಶಿಕ್ಷಣ ಸಚಿವ ಸುರೇಶ್‌ಕುಮಾರ್ ಹೇಳಿದರು.

**ಶಿಕಾರಿಪುರದಲ್ಲಿ ಸ್ವಾಮಿ ವಿವೇಕಾನಂದ ಜಯಂತಿ, ಸಚಿವ ಸುರೇಶ್ ಕುಮಾರ್ ಭಾಗಿ**

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶನಿವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಉತ್ತಮನಾಗು, ಉಪಕಾರಿಯಾಗು ಎನ್ನುವ ವಿವೇಕಾನಂದ ವಾಣಿಯನ್ನು ಪ್ರತಿಯೊಬ್ಬರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅದು ಅವರಿಗೆ ಸಲ್ಲಿಸುವ ದೊಡ್ಡ ಗೌರವ. ವಿವೇಕಾನಂದ, ಭಗತ್‌ಸಿಂಗ್ ಸೇರಿದಂತೆ ಹಲವರು ಕಾಲಾತೀತರು. ಅವರ ಬದುಕಿನ ಕುರಿತು ಓದಿ ತಿಳಿದುಕೊಳ್ಳಬೇಕು. ಆಗ ಬದುಕಿನ ಸಾರ್ಥಕತೆ ಎಂದರೇನು ಎಂದು ತಿಳಿಯುತ್ತದೆ ಎಂದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ವಿಶ್ವದಲ್ಲಿ ಭಾರತ ಹಾವಾಡಿಗರ ದೇಶ ಎಂದು ಅವಹೇಳನಕ್ಕೆ ಗುರಿಯಾಗಿದ್ದ, ನಮ್ಮ ಕೀಳರಿಮೆ ಕುರಿತು ಮಾತನಾಡುತ್ತಿದ್ದ ಕಾಲಘಟ್ಟದಲ್ಲಿ ಇಲ್ಲಿನ ಆಧ್ಯಾತ್ಮ ಶಕ್ತಿ ಕುರಿತು ಜಗತ್ತಿಗೆ ಪರಿಚಯಿಸಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ. ನೀವು ಶ್ರೀಮಂತರಾಗಿ ಸಮಾಜವನ್ನೂ ಶ್ರೀಮಂತಗೊಳಿಸುವ ಕೆಲಸದ ಕಡೆ ವಿದ್ಯಾರ್ಥಿಗಳು ಗಮನ ನೀಡಬೇಕು ಎಂದರು.

ಕಾರ್ಯಕ್ರಮದಲ್ಲಿ ವಿವೇಕಾಂಜಲಿ ಸಂಚಿಕೆ ಬಿಡುಗಡೆ ಮಾಡಲಾಯಿತು. ಶಿವಮೊಗ್ಗ ರಾಮಕೃಷ್ಣಾಶ್ರಮದ ವಿನಯಾನಂದ ಸರಸ್ವತಿ ಸಾನ್ನಿಧ್ಯ ವಹಿಸಿದ್ದರು. ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಸಂಸ್ಥೆ ಆಡಳಿತ ಸಲಹೆಗಾರ ಪ್ರೊ.ಎಸ್.ಎಸ್.ಗದಗ್, ಡಿಡಿಪಿಐ ರಮೇಶ್, ಕ್ಷೇತ್ರ ಶಿಕ್ಷಣಾಧಿಕಾರಿ ಉಮಾಮಹೇಶ್, ಬಿಎಡ್ ಕಾಲೇಜು ಪ್ರಾಂಶುಪಾಲೆ ಡಾ. ಜಯಶ್ರೀ, ಪಿಯು ಪ್ರಾಚಾರ್ಯ ಡಾ. ವೀರೇಂದ್ರ, ಪದವಿ ಕಾಲೇಜು ಪ್ರಾಚಾರ್ಯ ಪರಶುರಾಮ್, ಮೈತ್ರಿ ಆಡಳಿತಾಧಿಕಾರಿ ದಯಾನಂದ್, ಎಟಿಡಿಸಿ ವಿದ್ಯಾಶಂಕರ್, ಕುಬೇರಪ್ಪ ಮತ್ತಿತರರು ಇದ್ದರು.



ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮಕ್ಕೆ ಶಿಕ್ಷಣ ಸಚಿವ ಸುರೇಶ್‌ಕುಮಾರ್ ಚಾಲನೆ ನೀಡಿದರು. ಸ್ವಾಮಿ ವಿನಯಾನಂದ ಸರಸ್ವತಿ ಇತರರು ಇದ್ದರು.

**ನೀರಿನ ಕೃತಕ ಉತ್ಪಾದನೆ ಸಾಧ್ಯವಿಲ್ಲ, ಜಲಮೂಲ ಸಂರಕ್ಷಣೆ, ನೀರಿನ ಅಪವ್ಯಯ ತಡೆಗಟ್ಟುವುದು ವಿದ್ಯಾರ್ಥಿಗಳ ಆದ್ಯತೆಯಾಗಬೇಕು. ದೇಶ, ಸಮಾಜ, ಕುಟುಂಬಕ್ಕಾಗಿ ನಾನು ಆರೋಗ್ಯವಂತನಾಗಿರುತ್ತೇನೆ. ಅದಕ್ಕಾಗಿ ಜಂಕ್‌ಫುಡ್ ತಿನ್ನುವುದಿಲ್ಲ, ಯೋಗಾಸನ ಮಾಡುತ್ತೇನೆ, ಉತ್ತಮನಾಗಿ, ಉಪಕಾರಿಯಾಗಿರುತ್ತೇನೆ ಎನ್ನುವುದು ವಿದ್ಯಾರ್ಥಿಗಳ ಜೀವನ ಮಂತ್ರವಾಗಬೇಕು. ಶಿಕ್ಷಕರು ಮಕ್ಕಳಿಗೆ ಶಿಕ್ಷಣದ ಜತೆ ಸಂಸ್ಕಾರ ಕಲಿಸುವ ಅಗತ್ಯತೆ ಇಂದು ಹೆಚ್ಚಾಗಿದೆ. ಈ ನಿಟ್ಟಿನಲ್ಲಿ ಎಲ್ಲರೂ ಗಮನಹರಿಸಬೇಕು.**

**-ಸುರೇಶ್ ಕುಮಾರ್,** ಶಿಕ್ಷಣ ಸಚಿವ

ವಿಜಯವಾಣಿ ದಿನಾಂಕ : 21-01-2020 ಮಂಗಳವಾರ ಪುಟ-03

ಪ್ರತಿ ಕ್ಷಣವೂ ಸಮಾಜದ ಹಿತಕ್ಕಾಗಿ ಬದುಕಬೇಕು | ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಸಲಹೆ

# ಸದೃಢ ದೇಶ ನಿರ್ಮಾಣಕ್ಕಾಗಿ ಆರೋಗ್ಯ ರಕ್ಷಣೆಗೆ ಒತ್ತು ನೀಡಿ

**ಶಿಕಾರಿಪುರ:** ನಾವು ಪ್ರತಿಕ್ಷಣ ಸಮಾಜದ ಹಿತಕ್ಕಾಗಿ ಬದುಕಬೇಕು. ದಾವೂದ್ ಇಬ್ರಾಹಿಂನಂತೆ ಜೀವನ ಸಾಗಿಸದೆ ಅಬ್ದುಲ್ ಕಲಾಂರಂತೆ ಬದುಕು ನಡೆಸಬೇಕು ಎಂದು ಶಿಕ್ಷಣ ಸಚಿವ ಎಸ್.ಸುರೇಶ್‌ಕುಮಾರ್ ಸಲಹೆ ನೀಡಿದರು.

ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಶನಿವಾರ ಏರ್ಪಡಿಸಿದ್ದ ಸ್ವಾಮಿ ವಿವೇಕಾನಂದ ಜನ್ಮದಿನಾಚರಣೆಯಲ್ಲಿ 'ವಿವೇಕಾಂಜಲಿ' ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿ, ಸಾಮಾಜಿಕ ಕಳಕಳಿ ಬೆಳೆಸಿಕೊಳ್ಳುವುದೇ ನಿಜವಾದ ದೇಶಪ್ರೇಮ ಎಂದರು.

ಇಂದು ನೀರಿನ ಸಂರಕ್ಷಣೆ ಅವಶ್ಯಕವಾಗಿದೆ. ಕುಡಿಯುವ ನೀರಿಗೆ ಹಾಹಾಕಾರ ಎದುರಾಗಿದೆ. ಹೀಗಾಗಿ ಜಲ ಸಂರಕ್ಷಣೆಗೆ ಆದ್ಯತೆ ನೀಡಬೇಕು. ಅರಣ್ಯ ಸಂರಕ್ಷಣೆಗೆ ಒತ್ತು ನೀಡಬೇಕು. ಗುರು-ಹಿರಿಯರನ್ನು ಗೌರವಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಸದೃಢ ಸಮಾಜಕ್ಕಾಗಿ ಆರೋಗ್ಯವನ್ನು ಕಾಪಾಡಿಕೊಳ್ಳಬೇಕು ಎಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಹೇಳಿದರು.

ಕಾರ್ಯಕ್ರಮ ಉದ್ಘಾಟಿಸಿದ ವಿವೇಕಾನಂದ ವಿದ್ಯಾಸಂಸ್ಥೆ ಕಾರ್ಯದರ್ಶಿ, ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ, ಪಾಶ್ಚಿಮಾತ್ಯರ ಅನುಕರಣೆಯಿಂದ ನಮ್ಮ ಸಂಸ್ಕೃತಿ ಮರೆಯುತ್ತಿದ್ದೇವೆ. ಫಾದರ್ಸ್ ಡೇ, ಮದರ್ಸ್ ಡೇ, ನ್ಯೂ ಇಯರ್ ಆಚರಣೆಗಳು ಹೆಚ್ಚುತ್ತಿವೆ. ಯುವಕರಲ್ಲಿ ದೇಶಪ್ರೇಮ ಮೂಡಿಸುವ ಸಲುವಾಗಿ ವಿವೇಕಾನಂದರ ಜನ್ಮದಿನವನ್ನು ಯುವ ದಿನವನ್ನಾಗಿ ಆಚರಿಸಲಾಗುತ್ತಿದೆ ಎಂದು ಹೇಳಿದರು. ಮಾನವ ಜನ್ಮ ಪಡೆದಿರುವ ನಾವು ಉತ್ತಮ ಜೀವನ ಸಾಗಿಸಬೇಕು. ಶಾಲೆಯಲ್ಲಿ ಶಿಕ್ಷಕರು, ಪಾಲಕರು ನೀಡುವ ಸಲಹೆ ಸ್ವೀಕರಿಸಬೇಕು. ಎಲ್ಲವನ್ನೂ ತಿರಸ್ಕರಿಸುವ, ನಕಾರಾತ್ಮಕ ದೃಷ್ಟಿಯಿಂದ ನೋಡುವ ಮನೋಭಾವ ಬಿಡಬೇಕು ಎಂದು ತಿಳಿಸಿದರು.

ವಿಜಯವಾಣಿ



ಶಿಕಾರಿಪುರದಲ್ಲಿ ವಿವೇಕಾಂಜಲಿ ಸ್ಮರಣ ಸಂಚಿಕೆಯನ್ನು ಎಸ್.ಸುರೇಶ್‌ಕುಮಾರ್ ಬಿಡುಗಡೆಗೊಳಿಸಿದರು. ಬಿ.ವೈ.ರಾಘವೇಂದ್ರ, ಶ್ರೀ ವಿನಯಾನಂದ ಸರಸ್ವತಿ ಸ್ವಾಮೀಜಿ, ಎನ್.ಎಂ.ರಮೇಶ್ ಇದ್ದರು.

> ಇಂದಿನ ಯುವಶಕ್ತಿ ಸಿಂಹಸದೃಶವಾಗಬೇಕು. ಗುರಿಯಿರುವ ಈ ಮಣ್ಣಿನ ಬಗ್ಗೆ ಅಪಾರ ಗೌರವ ಹೊಂದಿರುವ ಮತ್ತು ತಾನು ಏನನ್ನಾದರೂ ರಾಷ್ಟ್ರಕ್ಕಾಗಿ ಮಾಡಬಲ್ಲೆ ಎಂಬ ತರುಣ ಗಣದ ಅವಶ್ಯಕತೆ ಈಗ ಕಂಡುಬರುತ್ತಿದೆ. ಭಾರತದ ಯುವಶಕ್ತಿಯ ಅನಾವರಣವಾಗಬೇಕು . ಮಲಗಿದ ಆತ್ಮಗಳನ್ನು ಬಡಿದೆಬ್ಬಿಸಬೇಕು. ರಾಷ್ಟ್ರ ಕಾರ್ಯಕ್ಕಾಗಿ ನಿಯೋಜಿಸಬೇಕು.
>
> । ಶ್ರೀ ವಿನಯಾನಂದ ಸರಸ್ವತಿ ಸ್ವಾಮೀಜಿ

ಶಿವಮೊಗ್ಗ ರಾಮಕೃಷ್ಣಾಶ್ರಮದ ಶ್ರೀ ವಿನಯಾನಂದ ಸರಸ್ವತಿ ಸ್ವಾಮೀಜಿ ವಿಶೇಷ ಉಪನ್ಯಾಸ ನೀಡಿದರು. ಡಿಡಿಪಿಐ ಎನ್.ಎಂ.ರಮೇಶ್, ಶಿಕಾರಿಪುರ ಬಿಇಒ ಕೆ.ಆರ್.ಉಮಾಮಹೇಶ್, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ತೇಜಸ್ವಿನಿ ರಾಘವೇಂದ್ರ, ಪ್ರೊ. ಎಸ್.ಎನ್.ಗದಗ್, ಕೆ.ಎನ್.ಗುರುಮೂರ್ತಿ, ಡಾ. ಕೆ.ಎಸ್.ದತ್ತಾತ್ರಿ, ಆರ್.ಎಂ.ಕುಬೇರಪ್ಪ, ಡಾ. ವೀರೇಂದ್ರ, ವಿದ್ಯಾಶಂಕರ್ ಇತರರಿದ್ದರು.

**ಹುಚ್ಚರಾಯಸ್ವಾಮಿ ದರ್ಶನ ಪಡೆದ ಸಚಿವರು:** ಶಿಕಾರಿಪುರ: ಶಿಕಾರಿಪುರಕ್ಕೆ ಆಗಮಿಸಿದ ಸಚಿವ ಸುರೇಶ್‌ಕುಮಾರ್ ಅವರು ಬಿ.ವೈ.ರಾಘವೇಂದ್ರ ಜತೆ ಕ್ಷೇತ್ರಾಧಿಪತಿ ಶ್ರೀ ಹುಚ್ಚರಾಯಸ್ವಾಮಿ ದರ್ಶನ ಮಾಡಿದರು. ಈ ಸಂದರ್ಭದಲ್ಲಿ ದೇವಾಲಯದ ಇತಿಹಾಸ ತಿಳಿದುಕೊಂಡರು. ಇದು ವ್ಯಾಸರಾಯರ ಪ್ರತಿಷ್ಠೆ ಆಗಿರುವುದರಿಂದ ಮತ್ತು ನಾಸಿಕದ ಮೇಲೆ ಸಾಲಿಗ್ರಾಮ ಇರುವ ಕಾರಣ ಇಲ್ಲಿರುವ ಸ್ವಾಮಿ ಅತ್ಯಂತ ಜಾಗೃತನಾಗಿದ್ದಾನೆ. ಈ ದೇವಾಲಯಕ್ಕೆ ಪಾಳೆಗಾರರ, ಅರಸರ ನಂಟು ಇತ್ತು. ಇಡೀ ತಾಲೂಕಿನ ಜನತೆಯ ಮೇಲೆ ಮತ್ತು ಸಿಎಂ ಕುಟುಂಬದ ಮೇಲೆ ಶ್ರೀ ಸ್ವಾಮಿಯ ಅನುಗ್ರಹವಿದೆ ಎಂದು ರಾಘವೇಂದ್ರ ವಿವರಿಸಿದರು. ಇದೇ ವೇಳೆ ತಾಲೂಕು ಬ್ರಾಹ್ಮಣ ಸಮಾಜದಿಂದ ಸಚಿವರನ್ನು ಸನ್ಮಾನಿಸಲಾಯಿತು.

ಬಾಲಕೃಷ್ಣ ಜೋಯ್ಸ್, ಶ್ರೀಧರ ನಾಡಿಗ್, ರಾಘವೇಂದ್ರ ತಡಗಣಿ, ಗುರು ತಡಗಣಿ ಮತ್ತು ಪ್ರಧಾನ ಅರ್ಚಕ ಉಮೇಶ್ ಭಟ್, ಗಿರೀಶ್ ಭಟ್ ಇದ್ದರು.

ಸಂಯುಕ್ತ ಕರ್ನಾಟಕ ದಿನಾಂಕ : 19-01-2020 ಭಾನುವಾರ ಪುಟ-02

# ಸಮಾಜಕ್ಕೆ ಬೇಕು ನೆರವಾಗುವ ದೇಶಭಕ್ತಿ: ಸುರೇಶ್‌ಕುಮಾರ್



ಶಿಕಾರಿಪುರ: ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಶನಿವಾರ ಆಯೋಜಿಸಿದ್ದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮಕ್ಕೆ ಶಿಕ್ಷಣ ಸಚಿವ ಸುರೇಶ್‌ಕುಮಾರ್ ಚಾಲನೆ ನೀಡಿದರು.

ಶಿಕಾರಿಪುರ: ಭಾರತ-ಪಾಕಿಸ್ತಾನ ಕ್ರಿಕೆಟ್ ಸಂದರ್ಭದಲ್ಲಿ ನಮ್ಮ ದೇಶದ ಪರ ಘೋಷಣೆ ಕೂಗುವ ದೇಶಭಕ್ತಿಗಿಂತಲೂ ಸಮಾಜಕ್ಕೆ ನೆರವಾಗುವ ರೀತಿಯಲ್ಲಿ ಬದುಕುವುದು ನಿಜವಾದ ದೇಶಭಕ್ತಿ ಎಂದು ಶಿಕ್ಷಣ ಸಚಿವ ಸುರೇಶ್‌ಕುಮಾರ್ ಹೇಳಿದರು.

ಪಟ್ಟಣದಲ್ಲಿ ಶನಿವಾರ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಆಯೋಜಿಸಿದ್ದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ಉತ್ತಮನಾಗು, ಉಪಕಾರಿಯಾಗು ಎನ್ನುವ ವಿವೇಕಾನಂದ ವಾಣಿ ಪ್ರತಿಯೊಬ್ಬರೂ ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಅದು ಅವರಿಗೆ ಸಲ್ಲಿಸುವ ದೊಡ್ಡ ಗೌರವಾಗುತ್ತದೆ. ವಿವೇಕಾನಂದ, ಭಗತ್‌ಸಿಂಗ್ ಸೇರಿದಂತೆ ಹಲವರು ಕಾಲಾತೀತರು ಅವರ ಬದುಕಿನ ಕುರಿತು ಓದಿ ತಿಳಿದುಕೊಳ್ಳಬೇಕು ಆಗ ಬದುಕಿನ ಸಾರ್ಥಕತೆ ಎಂದರೇನು ಎಂದು ತಿಳಿಯುತ್ತದೆ ಎಂದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ವಿಶ್ವದಲ್ಲಿ ಭಾರತ ಹಾವಾಡಿಗರ ದೇಶ ಎಂದು ಅವಹೇಳನಕ್ಕೆ ಗುರಿಯಾಗಿದ್ದ, ನಮ್ಮ ಹಿರಿಮೆ ಕುರಿತು ಮಾತನಾಡುತ್ತಿದ್ದ ಕಾಲಘಟ್ಟದಲ್ಲಿ ಇಲ್ಲಿನ ಆಧ್ಯಾತ್ಮ ಶಕ್ತಿ ಕುರಿತು ಜಗತ್ತಿಗೆ ಪರಿಚಯಿಸಿದ ಕೀರ್ತಿ ಸ್ವಾಮಿ ವಿವೇಕಾನಂದರಿಗೆ ಸಲ್ಲುತ್ತದೆ. ನೀವು ಶ್ರೀಮಂತರಾಗಿ ನಿಮ್ಮ ಸಮಾಜವನ್ನೂ ಶ್ರೀಮಂತಗೊಳಿಸುವ ಕೆಲಸದ ಕಡೆ ವಿದ್ಯಾರ್ಥಿಗಳು ಗಮನ ನೀಡಬೇಕೆಂದರು.

ಕಾರ್ಯಕ್ರಮದಲ್ಲಿ ವಿವೇಕಾಂಜಲಿ ಸಂಚಿಕೆ ಬಿಡುಗಡೆ ಮಾಡಲಾಯಿತು. ಶಿವಮೊಗ್ಗ ರಾಮಕೃಷ್ಣಾಶ್ರಮದ ವಿನಯಾನಂದ ಗುರೂಜಿ ಸಾನ್ನಿಧ್ಯ ವಹಿಸಿದ್ದರು. ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಸಂಸ್ಥೆ ಆಡಳಿತ ಸಲಹೆಗಾರ ಪ್ರೊ.ಎಸ್.ಎಸ್.ಗದಗ್, ಡಿಡಿಪಿಐ ರಮೇಶ್, ಬಿಇಒ ಉಮಾಮಹೇಶ್, ಡಾ. ಜಯಶ್ರೀ, ಡಾ. ವೀರೇಂದ್ರ, ಪದವಿ ಪ್ರಾಚಾರ್ಯ ಪರಶುರಾಮ್, ಮೈತ್ರಿ ಆಡಳಿತಾಧಿಕಾರಿ ದಯಾನಂದ್, ಎಟಿಡಿಸಿ ವಿದ್ಯಾಶಂಕರ್, ಕುಬೇರಪ್ಪ ಇದ್ದರು.

## ಶಿಕ್ಷಕರು ಉತ್ತಮ ಮೇಲ್ಪಂಕ್ತಿಯಾಗಲಿ

ಶಿಕಾರಿಪುರ: ತಮ್ಮನ್ನು ನೋಡಿ ಪ್ರತಿಯೊಂದನ್ನೂ ಅನುಕರಿಸಲು ಪ್ರಯತ್ನಿಸುವ ಮಕ್ಕಳಿಗೆ ಶಿಕ್ಷಕರು ಉತ್ತಮ ಮೇಲ್ಪಂಕ್ತಿಯಾಗಬೇಕು ಎಂದು ಶಿಕ್ಷಣ ಸಚಿವ ಸುರೇಶ್ ಕುಮಾರ್ ಶಿಕ್ಷಕರಿಗೆ ಕಿವಿಮಾತು ನೀಡಿದರು.

ಶನಿವಾರ ಇಲ್ಲಿನ ಡಯಟ್ ಕಾಲೇಜಿನಲ್ಲಿ ಶೈಕ್ಷಣಿಕ ಸಂಸ್ಥೆಗಳ ನಾವೀನ್ಯತಾ ಅಭ್ಯಾಸಗಳ ಸೆಮಿನಾರ್‌ನಲ್ಲಿ ಭಾಗವಹಿಸಿ ಅವರು ಮಾತನಾಡಿದರು. ಈ ಸಂದರ್ಭದಲ್ಲಿ ಜಿಲ್ಲೆಯ ಆಯ್ದ 45 ಶಾಲೆಗಳ ಯಶೋಗಾಥೆಗಳನ್ನೊಳಗೊಂಡ ಒಳಗೊಂಡ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿದ ಅವರು, ಮಕ್ಕಳಲ್ಲಿ ಉತ್ಸಾಹ, ಸ್ಫೂರ್ತಿ ತುಂಬುವ, ಅವರ ಕಷ್ಟ ನೋವು, ಸಮಸ್ಯೆಗಳಿಗೆ ಸ್ಪಂದಿಸುವ ಮನೋಭಾವ ಹೊಂದಿರುವ ಶಿಕ್ಷಕರ ಅಗತ್ಯವಿದೆಯೇ ಹೊರತು ಮಕ್ಕಳ ಕಷ್ಟಗಳಿಗೆ ಅಪಹಾಸ್ಯ ಮಾಡುವವರು ಅಲ್ಲ. ಮಕ್ಕಳ ಮಟ್ಟಕ್ಕೆ ಇಳಿದು ಮಕ್ಕಳ ಕೈ ಹಿಡಿದು ಅಕ್ಷರಭ್ಯಾಸ ನೀಡಬಲ್ಲ ಶಿಕ್ಷಕರು ನಮಗೆ ಬೇಕು ಎಂದು ಹೇಳಿದರು. ಶಾಲೆಗಳ ಗುಣಮಟ್ಟ ಉನ್ನತೀಕರಿಸಲು ಇಲಾಖೆ ವತಿಯಿಂದ ಹಲವಾರು ಕಾರ್ಯಕ್ರಮ ಆಯೋಜಿಸಲಾಗುತ್ತಿದೆ. ಎಸ್‌ಎಸ್‌ಎಲ್‌ಸಿ ಫಲಿತಾಂಶ ಸುಧಾರಿಸುವ ನಿಟ್ಟಿನಲ್ಲಿ ಜಿಲ್ಲೆಗಳ ನಡುವೆ ಉತ್ತಮ ಪೈಪೋಟಿ ನಡೆಯುತ್ತಿರುವುದು ಉತ್ತಮ ಬೆಳವಣಿಗೆ. ಗುಣಮಟ್ಟ ಉನ್ನತೀಕರಿಸಲು ಶಿಕ್ಷಕರ ಸಹಕಾರ ಅತ್ಯಗತ್ಯ. ತಮ್ಮ ಕೆಲಸ ಕಾರ್ಯದಿಂದ ಶಿಕ್ಷಕರು ಶಾಲೆಯ ಇಮೇಜ್ ಉತ್ತಮಪಡಿಸಲು ಸಾಧ್ಯವಿದೆ ಎಂದು ಅಭಿಪ್ರಾಯಪಟ್ಟರು. ಸಾಮಾಜಿಕ ಜಾಲತಾಣಗಳನ್ನು ಸಕಾರಾತ್ಮಕ ಕಾರ್ಯಗಳಿಗಾಗಿ ಬಳಸಿಕೊಳ್ಳಬೇಕು. ಇಂದು ವಾಟ್ಸಾಪ್‌ನಂತಹ ಸಾಮಾಜಿಕ ಜಾಲತಾಣಗಳಲ್ಲಿ ನೆಗೆಟೀವ್ ಮೆಸೇಜ್ ಫಾರ್ವರ್ಡ್ ಮಾಡುವ ಚಾಳಿ ಹೆಚ್ಚಾಗುತ್ತಿರುವುದು ಉತ್ತಮ ಬೆಳವಣಿಗೆಯಲ್ಲ. ಶಿಕ್ಷಣಕ್ಕೆ ಸಂಬಂಧಿಸಿದಂತೆ ಉತ್ತಮ ಮೆಸೇಜ್ ಫಾರ್ವರ್ಡ್ ಮಾಡುವಂತಹ ಗ್ರೂಪ್ ಶಿಕ್ಷಕರು ರಚಿಸಿಕೊಳ್ಳುವುದು ಉತ್ತಮ ಎಂದರು.

ಈ ಸಂದರ್ಭದಲ್ಲಿ ಸಚಿವರು ತಮ್ಮ ಕ್ಷೇತ್ರಗಳಲ್ಲಿ ವಿಶೇಷ ಸಾಧನೆ ಮಾಡಿದ ಶಿಕ್ಷಕರನ್ನು ಸನ್ಮಾನಿಸಿದರು. ಕೆ.ಇ. ಕಾಂತೇಶ್, ಡಿಡಿಪಿಐ ರಮೇಶ್, ಡಯಟ್ ಪ್ರಾಂಶುಪಾಲೆ ಸುಮಂಗಲಾ ಕುಚಿನಾಡ, ವೀರಭದ್ರಪ್ಪ ಇದ್ದರು.

ಉದಯವಾಣಿ ದಿನಾಂಕ : 23-01-2020 ಗುರುವಾರ ಪುಟ-04

# ಕ್ರಿಯಾಶೀಲತೆ ಸೃಜನಶೀಲತೆಯ ಪ್ರತೀಕ



ಶಿಕಾರಿಪುರ: ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಸಂಸದ ಬಿ.ವೈ. ರಾಘವೇಂದ್ರ ಉದ್ಘಾಟಿಸಿದರು.

ಶಿಕಾರಿಪುರ: ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ, ತಾಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ದಿ| ಮೈತ್ರಾದೇವಿ ಯಡಿಯೂರಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಿತು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಸಂಸದ ಬಿ.ವೈ. ರಾಘವೇಂದ್ರ, ಜಗತ್ತಿನಲ್ಲಿ ಅನೇಕ ಅನ್ವೇಷಣೆ, ಆವಿಷ್ಕಾರಗಳು ಆಗಿವೆ. ಆ ಅನ್ವೇಷಣೆಗಳು, ಹೊಸತನ ಕಂಡುಕೊಳ್ಳಲು ನಿರಂತರ ಆಲೋಚನೆಯುಕ್ತ ಪ್ರಯತ್ನಗಳನ್ನು ನಿರ್ವಹಿಸುವ ಪ್ರತೀಕವೇ ಸೃಜನಶೀಲತೆಯಾಗಿದೆ. ಅದಕ್ಕಾಗಿ ನಮ್ಮ ದಿನನಿತ್ಯದ ಬದುಕಿನಲ್ಲಿ ಸೃಜನಶೀಲ ಗುಣಗಳನ್ನು ರೂಢಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಸೃಜನಶೀಲತೆ ಮತ್ತು ಜ್ಞಾಪಕ ಶಕ್ತಿ ಹೆಚ್ಚಿಸುವುದು ಎಂಬ ವಿಷಯಕ್ಕೆ ಉಪನ್ಯಾಸ ನೀಡಿದ ನಿವೃತ್ತ ನ್ಯಾಯಾಧೀಶರಾದ ಅರಳಿ ನಾಗರಾಜ ಅವರು ನೊಣ ಮತ್ತು ಜೇನು ಹುಳುಗಳು ನಿರಂತರ ಕ್ರಿಯಾಶೀಲವಾಗಿರುತ್ತವೆ. ನೊಣ ಅಲ್ಲಲ್ಲಿ ಬೇಡವಾದ ಪದಾರ್ಥಗಳ ಮೇಲೆ ಕುಳಿತು ಮನುಷ್ಯನ ಕಾಯಿಲೆಗಳಿಗೆ ಕಾರಣವಾಗುತ್ತದೆ. ಆದರೆ ಜೇನು ನೊಣವು ಸಹ ತನ್ನ ನಿರಂತರ ಕ್ರಿಯಾಶೀಲತೆಯಿಂದ ಹೂ- ಮಕರಂದಗಳಿಂದ ಔಷಧೀಯ ಗುಣವುಳ್ಳ ತುಪ್ಪವನ್ನು ನೀಡುವುದರ ಮೂಲಕ ಸೃಜನಶೀಲತೆಯನ್ನು ಮೆರೆದಿದೆ. ಹಾಗೆಯೇ ದಂತಚೋರ, ವಿಧ್ವಂಸಕ ಕೃತ್ಯಕ್ಕೆ ಹೆಸರಾದ ವೀರಪ್ಪನ್ ತನ್ನ ಕ್ರಿಯಾಶೀಲತೆಯಿಂದ ಸಮಾಜ ಬಾಹಿರ ಚಟುವಟಿಕೆಯಲ್ಲಿ ತೊಡಗಿದ್ದರೆ ಅವನನ್ನು ಮಟ್ಟ ಹಾಕುವ ನಿರ್ಧಾರ ಕೈಗೊಂಡ ಪೊಲೀಸ್ ಅಧಿಕಾರಿಗಳು ಸಮಾಜ ಹಿತವನ್ನು ಬಯಸುವ ಕಾರ್ಯದ ಮೂಲಕ ಸೃಜನಶೀಲತೆಯನ್ನು ತೋರಿಸಿಕೊಟ್ಟರು ಎಂದರು.

ಧನಾತ್ಮಕ ಸೃಜನಶೀಲತೆಯು ಹೆಚ್ಚು ಮಾನ್ಯತೆ ಪಡೆದುಕೊಳ್ಳುತ್ತದೆ. ಇಂತಹ ಸಮಾಜಮುಖಿಯಾದ ಕ್ರಿಯಾಶೀಲತೆ ಮತ್ತು ಸೃಜನಶೀಲತೆಗಳು ನಮ್ಮದಾಗಬೇಕು ಎಂದರು.

ತಾಲೂಕು ಕನ್ನಡ ಸಾಹಿತ್ಯ ಪರಿಷತ್‌ನ ಅಧ್ಯಕ್ಷರಾದ ಅಂಗಡಿ ಜಗದೀಶ, ಬಸವಾಶ್ರಮದ ಶಿವಶರಣೆ ನೀಲಾಂಬಿಕೆ, ಸ್ವಾಮಿ ವಿವೇಕಾನಂದ ಸಂಸ್ಥೆಯ ನಿರ್ದೇಶಕಿ ತೇಜಸ್ವಿ ರಾಘವೇಂದ್ರ, ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ| ಎಸ್. ಎಸ್. ಗದಗ, ಪ್ರಾಚಾರ್ಯ ಡಾ| ಜಯಶ್ರೀ ವಿ. ಆರ್., ಡಾ| ಪರಶುರಾಮ ಟಿ. ಆರ್., ಆಡಳಿತ ಸಮನ್ವಯಾಧಿಕಾರಿ ಕುಬೇರಪ್ಪ ಕೆ., ಕನ್ನಡ ಸಾಹಿತ್ಯ ಪರಿಷತ್ತಿನ ಪದಾಧಿಕಾರಿಗಳು ಹಾಗೂ ಬೋಧಕ ಮತ್ತು ಬೋಧಕೇತರ ಸಿಬ್ಬಂದಿ, ವಿದ್ಯಾರ್ಥಿಗಳು ಇದ್ದರು.

ವಿಜಯ ಕರ್ನಾಟಕ ದಿನಾಂಕ : 23-01-2020 ಗುರುವಾರ ಪುಟ-04

ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ದತ್ತಿ ಉಪನ್ಯಾಸ

# 'ಧನಾತ್ಮಕ ಸೃಜನಶೀಲತೆ ಮೈಗೂಡಿಸಿಕೊಳ್ಳಿ'



ಶಿಕಾರಿಪುರದಲ್ಲಿ ಬುಧವಾರ ಕಸಾಪ ಆಯೋಜಿಸಿದ್ದ ದಿ. ಮೈತ್ರಾದೇವಿ ಯಡಿಯೂರಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜ್ ಚಾಲನೆ ನೀಡಿದರು.

**ಶಿಕಾರಿಪುರ:** ಧನಾತ್ಮಕ ಸೃಜನಶೀಲತೆ ಹೆಚ್ಚು ಮಾನ್ಯತೆ ಪಡೆದುಕೊಳ್ಳುತ್ತದೆ, ಅದನ್ನು ಮನಗಂಡು ಪ್ರತಿಯೊಬ್ಬರೂ ಉತ್ತಮ ಚಿಂತನೆಗೆ ಆದ್ಯತೆ ನೀಡಬೇಕು ಎಂದು ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜ್ ಹೇಳಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಬುಧವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ದಿ.ಮೈತ್ರಾದೇವಿ ಯಡಿಯೂರಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು. ನೊಣ, ಜೇನುಹುಳು ನಿರಂತರ ಕ್ರಿಯಾಶೀಲವಾಗಿರುತ್ತವೆ. ನೊಣ ಅಲ್ಲಲ್ಲಿ ಬೇಡವಾದ ವಸ್ತುಗಳ ಮೇಲೆ ಕುಳಿತುಕೊಳ್ಳುತ್ತದೆ, ಜೇನುಹುಳ ಹೂಗಳ ಮಕರಂದ ಹೀರಿ ಜೇನುತುಪ್ಪ ತಯಾರಿಸುತ್ತದೆ. ನಮ್ಮ ಕ್ರಿಯಾಶೀಲತೆ ಉತ್ತಮವಾಗಿದ್ದರೆ ಅದು ನಮಗೆ ಮಾನ್ಯತೆ ತಂದುಕೊಡುತ್ತದೆ ಎಂದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ಕನ್ನಡ ವಿಶ್ವದ ಶ್ರೀಮಂತ ಭಾಷೆಯಲ್ಲೊಂದು. ಇದರಲ್ಲಿನ ಸಾಹಿತ್ಯವನ್ನು ಪ್ರತಿಯೊಬ್ಬರು ಓದಿ ತಿಳಿದುಕೊಂಡಲ್ಲಿ ಉತ್ತಮ ಅನುಭವದ ಜತೆಗೆ ಸೃಜನಾತ್ಮಕ ವ್ಯಕ್ತಿತ್ವ ರೂಪುಗೊಳ್ಳುತ್ತದೆ. ಕನ್ನಡ ಸಾಹಿತ್ಯ ಪರಿಷತ್ ತಾಲೂಕು, ಜಿಲ್ಲಾ ಮಟ್ಟದಲ್ಲಿ ನಡೆಸುವ ಸಾಹಿತ್ಯ ಸಮ್ಮೇಳನಕ್ಕೆ ಅನುದಾನ ನೀಡಲು ಆರಂಭಿಸಿದ ಪರಿಣಾಮ ಸಮ್ಮೇಳನ ಉತ್ತಮಗೊಳ್ಳಲು ಕಾರಣವಾಗಿದೆ. ಇಂದಿನ ಆಧುನಿಕತೆ ಸಂದರ್ಭ ಕನ್ನಡ ಸಂಸ್ಕೃತಿ ಉಳಿಸಿ ಬೆಳೆಸುವುದು ಅಗತ್ಯ ಎಂದರು.

ಕಸಾಪ ತಾಲೂಕು ಘಟಕ ಅಧ್ಯಕ್ಷ ಅಂಗಡಿ ಜಗದೀಶ್ ಪ್ರಾಸ್ತಾವಿಕ ಮಾತನಾಡಿದರು. ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ್, ಪ್ರಾಚಾರ್ಯರಾದ ಜಯಶ್ರೀ, ಡಾ. ಪರಶುರಾಮ್, ಸಮನ್ವಯಾಧಿಕಾರಿ ಕುಬೇರಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸುಭಾಷ್ ಚಂದ್ರ ಸ್ಥಾನಿಕ್, ಶಶಿಧರಸ್ವಾಮಿ, ಜೆ.ಎಂ.ನಾಗರಾಜ್ ಮತ್ತಿತರರು ಇದ್ದರು.

ಸಂಯುಕ್ತ ಕರ್ನಾಟಕ ದಿನಾಂಕ : 23-01-2020 ಗುರುವಾರ ಪುಟ-02

# ಧನಾತ್ಮಕ ಸೃಜನಶೀಲತೆಗೆ ಹೆಚ್ಚು ಮಾನ್ಯತೆ: ನ್ಯಾ.ಅರಳಿ ನಾಗರಾಜ್

ಶಿಕಾರಿಪುರ: ಧನಾತ್ಮಕ ಸೃಜನಶೀಲತೆ ಹೆಚ್ಚು ಮಾನ್ಯತೆ ಪಡೆದುಕೊಳ್ಳುತ್ತದೆ. ಅದನ್ನು ಮನಗಂಡು ಪ್ರತಿಯೊಬ್ಬರೂ ಉತ್ತಮ ಚಿಂತನೆಗೆ ಆದ್ಯತೆ ನೀಡಬೇಕು ಎಂದು ನಿವೃತ್ತ ನ್ಯಾಯಾಧೀಶರಾದ ಅರಳಿ ನಾಗರಾಜ್ ಹೇಳಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಬುಧವಾರ ತಾಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ದಿ.ಮೈತ್ರಾದೇವಿ ಯಡಿಯೂರಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ನೊಣ, ಜೇನುಹುಳು ನಿರಂತರ ಕ್ರಿಯಾಶೀಲವಾಗಿರುತ್ತವೆ. ನೊಣ ಅಲ್ಲಲ್ಲಿ ಬೇಡವಾದ ವಸ್ತುಗಳ ಮೇಲೆ ಕುಳಿತುಕೊಳ್ಳುತ್ತದೆ. ಜೇನುಹುಳ ಹೂಗಳ ಮಕರಂದ ಹೀರಿ ಜೇನುತುಪ್ಪ ತಯಾರಿಸುತ್ತದೆ. ನಮ್ಮ ಕ್ರಿಯಾಶೀಲತೆ ಉತ್ತಮವಾಗಿದ್ದರೆ ಅದು ನಮಗೆ ಮಾನ್ಯತೆ ತಂದುಕೊಡುತ್ತದೆ ಎಂದರು.

ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿ, ಕನ್ನಡ ವಿಶ್ವದ ಶ್ರೀಮಂತ ಭಾಷೆಯಲ್ಲೊಂದು ಇದರಲ್ಲಿನ ಸಾಹಿತ್ಯ ಪ್ರತಿಯೊಬ್ಬರು ಓದಿ ತಿಳಿದುಕೊಂಡಲ್ಲಿ ಉತ್ತಮ ಅನುಭವದ ಜೊತೆ ಸೃಜನಾತ್ಮಕ ವ್ಯಕ್ತಿತ್ವ ರೂಪಗೊಳ್ಳುತ್ತದೆ. ಕನ್ನಡ ಸಾಹಿತ್ಯ ಪರಿಷತ್ ತಾಲೂಕು, ಜಿಲ್ಲಾ ಮಟ್ಟದಲ್ಲಿ ನಡೆಸುವ ಸಾಹಿತ್ಯ ಸಮ್ಮೇಳನಕ್ಕೆ ಹಣ ನೀಡಲು ಆರಂಭಿಸಿದ ಪರಿಣಾಮ ಸಮ್ಮೇಳನ ಉತ್ತಮಗೊಳ್ಳಲು ಕಾರಣವಾಗಿದೆ. ಇಂದಿನ ಆಧುನಿಕತೆ ಸಂದರ್ಭದಲ್ಲಿ ಕನ್ನಡ ಸಂಸ್ಕೃತಿ ಉಳಿಸಿ ಬೆಳೆಸುವುದು ಅಗತ್ಯವಾಗಿದೆ. ಅದಕ್ಕಾಗಿ ಎಲ್ಲರೂ ಕೈಜೋಡಿಸಬೇಕು ಎಂದು ಹೇಳಿದರು.



ಶಿಕಾರಿಪುರ: ಕಸಾಪ ಆಯೋಜಿಸಿದ್ದ ದಿ. ಮೈತ್ರಾದೇವಿ ಯಡಿಯೂರಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮಕ್ಕೆ ನಿವೃತ್ತ ನ್ಯಾಯಾಧೀಶರಾದ ಅರಳಿ ನಾಗರಾಜ್ ಚಾಲನೆ ನೀಡಿದರು.

ಕಸಾಪ ತಾಲೂಕು ಘಟಕ ಅಧ್ಯಕ್ಷ ಅಂಗಡಿ ಜಗದೀಶ್ ಪ್ರಾಸ್ತಾವಿಕ ಮಾತನಾಡಿದರು. ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್, ಪ್ರಾಚಾರ್ಯ ಜಯಶ್ರೀ, ಡಾ. ಪರಶುರಾಮ್, ಸಮನ್ವಯಾದಿಕಾರಿ ಕುಬೇರಪ್ಪ, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸುಭಾಷ್‌ಚಂದ್ರ ಸ್ಥಾನಿಕ್, ಶಶಿಧರಸ್ವಾಮಿ, ಜಿ.ಎಂ.ನಾಗರಾಜ್ ಇದ್ದರು.

ಜೇನುಹುಳು ನಿರಂತರ ಕ್ರಿಯಾಶೀಲವಾಗಿರುತ್ತವೆ. ನೊಣ ಅಲ್ಲಲ್ಲಿ ಬೇಡವಾದ ವಸ್ತುಗಳ ಮೇಲೆ ಕುಳಿತುಕೊಳ್ಳುತ್ತವೆ. ಜೇನುಹುಳ ಹೂಗಳ ಮಕರಂದ ಹೀರಿ ಜೇನುತುಪ್ಪ ತಯಾರಿಸುತ್ತದೆ. ನಮ್ಮ ಕ್ರಿಯಾಶೀಲತೆ ಉತ್ತಮವಾಗಿದ್ದರೆ ಅದು ನಮಗೆ ಮಾನ್ಯತೆ ತಂದುಕೊಡುತ್ತದೆ.

■ ನ್ಯಾ.ಅರಳಿ ನಾಗರಾಜ್.

ವಿಜಯವಾಣಿ ದಿನಾಂಕ : 24-01-2020 ಶುಕ್ರವಾರ ಪುಟ-02

ಪ್ರತಿಯೊಬ್ಬರೂ ಕನ್ನಡ ಸಾಹಿತ್ಯ ಅಧ್ಯಯನ ಮಾಡಲು ಸಂಸದ ಬಿವೈಆರ್ ಸಲಹೆ

# ಕನ್ನಡ ನೆಲ, ಭಾಷೆ, ಸಂಸ್ಕೃತಿ ಉಳಿವಿಗೆ ಕಟಿಬದ್ಧರಾಗಿ

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ಕನ್ನಡದ ನೆಲ, ಜಲ, ಭಾಷೆ, ಸಂಸ್ಕೃತಿ ಉಳಿವಿಗೆ ನಾವು ಕಟಿಬದ್ಧರಾಗಬೇಕು ಎಂದು ಲೋಕಸಭಾ ಸದಸ್ಯ ಬಿ.ವೈ.ರಾಘವೇಂದ್ರ ಹೇಳಿದರು.

ಕುಮುದ್ವತಿ ಕಾಲೇಜಿ ನಲ್ಲಿ ಕಸಾಪ, ಶರಣ ಸಾಹಿತ್ಯ ಪರಿಷತ್, ಬಸವ ಕೇಂದ್ರದ ಆಶ್ರಯದಲ್ಲಿ ಬುಧವಾರ ಆಯೋಜಿಸಿದ್ದ ದಿ. ಮೈತ್ರಾದೇವಿ ಯಡಿಯೂರಪ್ಪ ದತ್ತಿನಿಧಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

ಕನ್ನಡ ಸಾರಸ್ವತ ಲೋಕ ಶ್ರೀಮಂತವಾಗಿದೆ. ಎಲ್ಲರೂ ಕನ್ನಡ ಸಾಹಿತ್ಯದ ಅಧ್ಯಯನ ಮಾಡಬೇಕು. ಇಂತಹ ದತ್ತಿನಿಧಿ ಕಾರ್ಯಕ್ರಮಗಳಿಂದ ಕನ್ನಡದ ಬಗ್ಗೆ ಜಾಗೃತಿ ಮೂಡುತ್ತದೆ. ನಾವು ಕನ್ನಡಿಗರು ಎಂಬ ಹೆಮ್ಮೆ ನಮಗಿರುವ ಜತೆಗೆ ನಮ್ಮ ನಡೆ, ನುಡಿಗಳಲ್ಲಿ ಪ್ರತ್ಯಕ್ಷವಾಗಿ ಕಾಣಬೇಕು ಎಂದರು.

ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜ್ ಮಾತನಾಡಿ, ಸೃಜನಶೀಲತೆ ನಮ್ಮ ಬದುಕಾದಾಗ ಮಾತ್ರ ಬದುಕಿನಲ್ಲಿ ಬೆಳಕು ಮೂಡುತ್ತದೆ. ಸತ್ವ ಮತ್ತು ಸತ್ವರಹಿತ ಅಪ್ರಾಮಾಣಿಕ ಜೀವನದಲ್ಲಿ ಸೃಜನಶೀಲತೆ ರೂಢಿಸಿಕೊಳ್ಳಲು ಸಾಧ್ಯವಿಲ್ಲ. ನಮ್ಮ ಮನಸ್ಸು ಸದ್ವಿಚಾರಗಳ ಹಂದರವಾಗಬೇಕು ಎಂದರು.

ತಾಲೂಕು ಕಸಾಪ ಅಧ್ಯಕ್ಷ ಅಂಗಡಿ ಜಗದೀಶ್ ಮಾತನಾಡಿ, ತಾಲೂಕಿನಲ್ಲಿ ಈಗ 34 ದತ್ತಿನಿಧಿಗಳಿವೆ. ಈ ವರ್ಷ ಮತ್ತಷ್ಟು ದತ್ತಿನಿಧಿಗಳನ್ನು ಮಾಡುವ ಯೋಜನೆ ರೂಪಿಸಲಾಗಿದೆ ಎಂದು ಹೇಳಿದರು.

ಬಸವಾಶ್ರಮದ ಮಾತೆ ಶರಣಾಂಬಿಕೆ, ಸ್ವಾಮಿ ವಿವೇಕಾನಂದ ಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ್, ಶರಣ ಸಾಹಿತ್ಯ ಪರಿಷತ್ ಅಧ್ಯಕ್ಷ ಸುಭಾಷಚಂದ್ರ ಸ್ಥಾನಿಕ, ಪ್ರಾಚಾರ್ಯೆ ವಿ.ಆರ್. ಜಯಶ್ರೀ, ಜಿ.ಎಂ.ನಾಗರಾಜ್, ಬಿ.ಬಿ.ಕೊಪ್ಪದ್, ಶಶಿಧರಸ್ವಾಮಿ, ಧನಂಜಯ ಉಪಸ್ಥಿತರಿದ್ದರು.



ದಿ.ಮೈತ್ರಾದೇವಿ ಯಡಿಯೂರಪ್ಪ ದತ್ತಿನಿಧಿ ಕಾರ್ಯಕ್ರಮವನ್ನು ಅರಳಿ ನಾಗರಾಜ್ ಉದ್ಘಾಟಿಸಿದರು. ಬಿ.ವೈ. ರಾಘವೇಂದ್ರ, ಮಾತೆ ಶರಣಾಂಬಿಕೆ, ತೇಜಸ್ವಿನಿ ರಾಘವೇಂದ್ರ, ಪ್ರೊ. ಎಸ್.ಎಸ್.ಗದಗ್ ಇದ್ದರು.

ಪ್ರಜಾವಾಣಿ ದಿನಾಂಕ : 25-05-2020 ಶನಿವಾರ ಪುಟ-10



ಶಿಕಾರಿಪುರದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಈಚೆಗೆ ಆಯೋಜಿಸಿದ್ದ ದಿ.ಮೈತ್ರಾದೇವಿ ಯಡಿಯೂರಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮದಲ್ಲಿ ಸಂಸದ ಬಿ.ವೈ. ರಾಘವೇಂದ್ರ ಮಾತನಾಡಿದರು.

# 'ನಾಡು ನುಡಿ ಬಗ್ಗೆ ಅಭಿಮಾನವಿರಲಿ'

ಶಿಕಾರಿಪುರ: 'ಕನ್ನಡ ನಾಡು ನುಡಿ ಬಗ್ಗೆ ಪ್ರತಿಯೊಬ್ಬನೂ ಅಭಿಮಾನ ಬೆಳೆಸಿಕೊಳ್ಳಬೇಕು' ಎಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಪಟ್ಟಣದ ಸಮೀಪದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಚೆಗೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಆಯೋಜಿಸಿದ್ದ ದಿವಂಗತ ಮೈತ್ರಾದೇವಿ ಯಡಿಯೂರಪ್ಪ ದತ್ತಿ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದರು.

'ಕನ್ನಡ ಭಾಷೆ ಬಳಸುವ ಮೂಲಕ ಭಾಷೆ ಉಳಿವಿಗಾಗಿ ಪ್ರತಿಯೊಬ್ಬನೂ ಶ್ರಮಿಸಬೇಕು' ಎಂದು ಆಶಿಸಿದರು.

ಸೃಜನಶೀಲತೆ ಮತ್ತು ಜ್ಞಾಪಕ ಶಕ್ತಿ ಹೆಚ್ಚಿಸುವ ಕುರಿತು ಮಾತನಾಡಿದ ನಿವೃತ್ತ ನ್ಯಾಯಾಧೀಶ ಅರಳಿ ನಾಗರಾಜ, 'ನಿರಂತರ ಅಧ್ಯಯನ ಹಾಗೂ ಸ್ಮರಣೆ ಮಾಡುವುದರಿಂದ ಜ್ಞಾಪಕಶಕ್ತಿ ಹೆಚ್ಚಿಸಿಕೊಳ್ಳಲು ಸಾಧ್ಯ. ವಿದ್ಯಾರ್ಥಿಗಳು ಹಾಗೂ ಶಿಕ್ಷಕರು ನಿರಂತರ ಅಧ್ಯಯನದಲ್ಲಿ ತೊಡಗಿಕೊಳ್ಳಬೇಕು. ಹೊಸ ಹೊಸ ಆಲೋಚನೆಗಳ ಬಗ್ಗೆ ಚರ್ಚಿಸುವುದರಿಂದ ಸೃಜನಾಶೀಲರಾಗಬಹುದು' ಎಂದರು.

ಬಸವಾಶ್ರಮದ ಶಿವಶರಣೆ ನೀಲಾಂಬಿಕೆ, ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಅಂಗಡಿ ಜಗದೀಶ್, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ನಿರ್ದೇಶಕ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್, ಆಡಳಿತ ಸಮನ್ವಯಾಧಿಕಾರಿ ಕುಬೇರಪ್ಪ, ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ.ವಿ. ಆರ್. ಜಯಶ್ರೀ ಇದ್ದರು.

ಉದಯವಾಣಿ ದಿನಾಂಕ : 21-01-2020 ಮಂಗಳವಾರ ಪುಟ-02

# ಬೃಹತ್ ಸೈಕಲ್ ಜಾಥಾಕ್ಕೆ ಚಾಲನೆ



ಶಿಕಾರಿಪುರ: ಫಿಟ್ ಇಂಡಿಯಾ ಕುರಿತು ಪ್ರಶಿಕ್ಷಣಾರ್ಥಿಗಳಿಂದ ಏರ್ಪಡಿಸಿದ್ದ ಸೈಕಲ್ ಜಾಥಾಕ್ಕೆ ನಗರ ಠಾಣೆ ಸಹಾಯಕ ಎಸ್ಐ ಪ್ರಭಾಕರ ಚಾಲನೆ ನೀಡಿದರು.

**ಶಿಕಾರಿಪುರ:** ಯುವ ಜನತೆ ಭಾರತ ಪ್ರಗತಿಗೆ ಕೊಡುಗೆ ನೀಡಬೇಕು ಎಂದು ನಗರ ಪೊಲೀಸ್ ಠಾಣೆಯ ಸಹಾಯಕ ಸಬ್ ಇನ್ಸಪೆಕ್ಟರ್ ಪ್ರಭಾಕರ ಜಿ. ಹೇಳಿದರು.

ಪಟ್ಟಣದಕುಮದ್ವತಿಶಿಕ್ಷಣಮಹಾವಿದ್ಯಾಲಯದಲ್ಲಿ ಹೊಸದಾಗಿ ಸ್ಥಾಪನೆಯಾಗಿರುವ ರಾಷ್ಟ್ರೀಯ ಸೇವಾ ಯೋಜನೆ ಘಟಕ ಉದ್ಘಾಟನೆ ಮತ್ತು ಫಿಟ್ ಇಂಡಿಯ ಸೈಕಲ್ ಜಾಥಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಷ್ಟ್ರೀಯ ಸೇವಾ ಯೋಜನೆ ಶಾಲಾ ಕಾಲೇಜು ಸ್ಥಾಪನೆಯಾಗಿರುವ ಉತ್ತಮ ಘಟಕವಾಗಿದ್ದು, ಇದರ ಅಡಿಯಲ್ಲಿ ಹಲವಾರು ಸಮಾಜಮುಖಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಭಾರತದ ಪ್ರಗತಿಗಾಗಿ ಸೇವಾ ಮನೋಭಾವ ರೂಢಿಸಿಕೊಂಡು ತಮ್ಮದೇ ಆದ ಕೊಡುಗೆ ನೀಡಬೇಕು ಎಂದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಆಡಳಿತ ಸಮನ್ವಯಾಧಿಕಾರಿ ಕುಬೇರಪ್ಪ ಕೆ. ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆಯು ವಿಶಾಲ ಅರ್ಥವನ್ನು ಹೊಂದಿದ್ದು ರಾಷ್ಟ್ರಪಿತ ಮಹಾತ್ಮ ಗಾಂಧಿಜಿಯವರ ಗ್ರಾಮ ರಾಜ್ಯದ ಕನಸನ್ನು ನನಸಾಗಿಸಲು ಎಲ್ಲರೂ ನಾನಾ ರೀತಿಯ ಕಾರ್ಯಕ್ರಮಗಳಾದ ಪರಿಸರ ಸಂರಕ್ಷಣೆ, ಆರೋಗ್ಯ ಸಂರಕ್ಷಣೆ, ಸಾಕ್ಷರತಾ ಗುಣಮಟ್ಟದ ಜಾಗೃತಿ ಮೂಡಿಸುವುದು, ಜಲಸಂಪನ್ಮೂಲವನ್ನು ಉಳಿಸುವುದರ ಕುರಿತು ಗ್ರಾಮೀಣ ಜನರಿಗೆ ಅರಿವನ್ನು ಮೂಡಿಸುವ ಕೆಲಸ ಮಾಡಬೇಕಾಗಿದೆ.

ಅಲ್ಲದೇ ರೈತರು ಹೆಚ್ಚಿರುವ ಗ್ರಾಮಗಳಲ್ಲಿ ಅವರಿಗೆ ಸರ್ಕಾರಗಳಿಂದ ದೊರೆಯುವಂತಹ ಸೌಲಭ್ಯ ತಿಳಿಸಿಕೊಡುವ ಜವಾಬ್ದಾರಿ ಅಕ್ಷರಸ್ಥರಾದ ನಮಗೆ ಇರುತ್ತದೆ. ಪ್ರತಿಯೊಬ್ಬರಿಗೂ ಇಚ್ಛಾಶಕ್ತಿಯು ಬೇಕಾಗುತ್ತದೆ. ಅನೇಕ ಪದವಿಗಳನ್ನು ಹೊಂದಿರುವ ಗ್ರಾಮೀಣ ಯುವಕ, ಯುವತಿಯರು ತಮ್ಮ ಕೀಳರಿಮೆ ಮನೋಭಾವದಿಂದ ತಮ್ಮ ಗ್ರಾಮಗಳಲ್ಲಿ ಕೆಲಸ ನಿರ್ವಹಿಸದೇ ಸಣ್ಣ ಪುಟ್ಟ ಕೆಲಸಗಳ ಬೆನ್ನ ಹತ್ತಿದ್ದಾರೆ. ಆದರೆ ಗ್ರಾಮಗಳಲ್ಲಿಯೇ ಹಲವಾರು ಸ್ವಉದ್ಯೋಗಗಳನ್ನು ಕೈಗೊಂಡು ತಮ್ಮ ಕುಟುಂಬದ ಆದಾಯದೊಂದಿಗೆ ದೇಶದ ಆದಾಯ ಹೆಚ್ಚಿಸಲು ಅನೇಕ ಮಾರ್ಗಗಳಿವೆ. ಆ ಕಡೆಗೆ ಹೆಚ್ಚು ಗಮನ ಹರಿಸಬೇಕು ಎಂದರು.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಜಯಶ್ರೀ ವಿ.ಆರ್, ಪ್ರಾಚಾರ್ಯ ವಿದ್ಯಾಶಂಕರ್ ಕೆ. ಎಸ್., ಡಾ.ಗದಗ್, ಬೋಧಕ, ಬೋಧಕೇತರ ಸಿಬ್ಬಂದಿ ಹಾಗೂ ಪ್ರಶಿಕ್ಷಣಾರ್ಥಿಗಳು ಇದ್ದರು.

ವಿಜಯ ಕರ್ನಾಟಕ ದಿನಾಂಕ : 16-02-2020 ಭಾನುವಾರ ಪುಟ-03

## ಹಾರೇಗೊಪ್ಪದ ಎನ್‌ಎಸ್‌ಎಸ್ ಶಿಬಿರದಲ್ಲಿ ಸಂಸದ ಬಿವೈಆರ್ ಕಿವಿಮಾತು

# ಗ್ರಾಮೀಣರಿಗೆ ಅರಿವು ಮೂಡಿಸಿ

■ **ವಿಕ ಸುದ್ದಿಲೋಕ** ಶಿಕಾರಿಪುರ

ದೇಶದ ಅಭಿವೃದ್ಧಿಯಲ್ಲಿ ಕಾಲೇಜು ಯುವಕ, ಯುವತಿಯರ ಪಾತ್ರ ಮಹತ್ವದ್ದು ಎಂದು ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ತಾಲೂಕಿನ ಹಾರೇಗೊಪ್ಪ ಗ್ರಾಮದಲ್ಲಿ ಶುಕ್ರವಾರ ಸಂಜೆ ಆರಂಭಗೊಂಡ ಕುಮದ್ವತಿ ಬಿಎಡ್ ಕಾಲೇಜು ಎನ್‌ಎಸ್‌ಎಸ್ ಶಿಬಿರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಶಿಬಿರದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಗ್ರಾಮದ ಎಲ್ಲ ಮನೆಗಳಿಗೆ ಭೇಟಿ ನೀಡಿ ಆರೋಗ್ಯ ಶಿಕ್ಷಣ ನೀಡಬೇಕು. ಅವರಲ್ಲಿರುವ ಮೌಢ್ಯತೆ ತೊಡೆದು ಹಾಕಬೇಕು. ಸ್ವಚ್ಛತೆಗೆ ಆದ್ಯತೆ ನೀಡಿದಲ್ಲಿ ಅದು ಹೇಗೆ ಕುಟುಂಬದ ಏಳಿಗೆಗೆ ಕಾರಣವಾಗುತ್ತದೆ. ಗ್ರಾಮದ ಏಳಿಗೆ ದೃಷ್ಟಿಯಿಂದ ಎಲ್ಲರೂ ಕೈಜೋಡಿಸುವ ಅಗತ್ಯ ಕುರಿತು ಮಾಹಿತಿ ನೀಡಬೇಕೆಂದರು.

ಜಿ.ಪಂ.ಸದಸ್ಯೆ ಅರುಂಧತಿ ರಾಜೇಶ್ ಮಾತನಾಡಿ, ಪ್ರತಿಯೊಬ್ಬರೂ ದೇಶದ ಪ್ರಗತಿಗೆ ಕೈಜೋಡಿಸಬೇಕೆಂಬ ಸಂದೇಶ ಸಾರಬೇಕು. ಗ್ರಾಮೀಣ ಪ್ರದೇಶದ ಕಲೆ, ಸಂಸ್ಕೃತಿ, ಸಾಹಿತ್ಯ ಯಾವ ರೀತಿ ಇದೆ ಎನ್ನುವುದನ್ನೂ ಅಧ್ಯಯನ ನಡೆಸ ಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಚಿಂತನೆ ನಡೆಸಬೇಕೆಂದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ್, ಗ್ರಾ.ಪಂ.ಅಧ್ಯಕ್ಷೆ ನಾಗಮ್ಮ, ಕುಮದ್ವತಿ ಬಿಎಡ್ ಕಾಲೇಜು ಪ್ರಾಂಶುಪಾಲರಾದ ಡಾ. ವಿ. ಆರ್. ಜಯಶ್ರೀ, ಶಿಬಿರದ ಸಂಚಾಲಕ ಎನ್.ಜಿ. ರವಿಕುಮಾರ್, ಪ್ರಶಿಕ್ಷಣಾರ್ಥಿಗಳಾದ ವಿದ್ಯಾಶ್ರೀ, ಲಾವಣ್ಯ, ಶ್ರೀಧರನಾಯ್ಕ, ಪ್ರಜ್ವಲಾ, ಶಿಬಿರಾರ್ಥಿಗಳು, ಗ್ರಾಮಸ್ಥರು ಇದ್ದರು.

> **ಎನ್‌ಎಸ್‌ಎಸ್ ಶಿಬಿರದ ಮೂಲಕ ವಿದ್ಯಾರ್ಥಿಗಳಿಗೆ ಗ್ರಾಮದ ಕಲ್ಪನೆ ಸಿಗುತ್ತದೆ. ಅಲ್ಲಿನ ಕೃಷಿ ಬದುಕು ಹೇಗೆ ದೇಶದ ಪ್ರಗತಿಗೆ ಕಾರಣವಾಗಿದೆ ಎನ್ನುವುದು ಗೊತ್ತಾಗುತ್ತದೆ. ಗ್ರಾಮದ ಸ್ವಚ್ಛತೆಗಾಗಿ ಶ್ರಮದಾನ ಮಾಡಬೇಕು.**
>
> **- ಅರುಂಧತಿ ರಾಜೇಶ್**, ಜಿ.ಪಂ.ಸದಸ್ಯೆ



ಹಾರೇಗೊಪ್ಪ ಗ್ರಾಮದಲ್ಲಿ ಶುಕ್ರವಾರ ಆರಂಭಗೊಂಡ ಕುಮದ್ವತಿ ಬಿಎಡ್ ಕಾಲೇಜು ಎನ್‌ಎಸ್‌ಎಸ್ ಶಿಬಿರದಲ್ಲಿ ಸಂಸದ ಬಿ.ವೈ.ರಾಘವೇಂದ್ರ ಮಾತನಾಡಿದರು. ಗ್ರಾ.ಪಂ. ಅಧ್ಯಕ್ಷೆ ನಾಗಮ್ಮ ಇತರರು ಇದ್ದರು.

ಹೊಸದಿಗಂತ ದಿನಾಂಕ : 16-02-2020 ಭಾನುವಾರ ಪುಟ-02

## ರಾ ಸೇ ಯೋ ಶಿಬಿರ ಉದ್ಘಾಟಿಸಿದ ಸಂಸದ ಬಿ.ವೈ. ರಾಘವೇಂದ್ರ ವಿದ್ಯಾರ್ಥಿಗಳಿಗೆ ಕರೆ

# ದೇಶದ ಅಭಿವೃದ್ಧಿ ಪೂರಕ ಕೌಶಲ್ಯ ಅಳವಡಿಸಿಕೊಳ್ಳಿ

**ಶಿಕಾರಿಪುರ:** ದೇಶದ ಅಭಿವೃದ್ಧಿಯಲ್ಲಿ ಯುವ ಪೀಳಿಗೆ ಪಾತ್ರ ಬಹು ಮಹತ್ವವಾಗಿದೆ. ಈ ದಿಸೆ ಯಲ್ಲಿ ಕಾಲೇಜು ಅವಧಿಯಲ್ಲಿ ವಿದ್ಯಾರ್ಥಿಗಳು ಕಡ್ಡಾಯವಾಗಿ ರಾ.ಸೇ. ಯೋ ಶಿಬಿರದಲ್ಲಿ ಸಕ್ರಿಯವಾಗಿ ಪಾಲ್ಗೊಂಡು ದೇಶದ ಅಭಿವೃದ್ಧಿಗೆ ಪೂರಕವಾದ ವಿವಿಧ ರೀತಿಯ ಕೌಶಲ್ಯಗಳನ್ನು ಅಳವಡಿಸಿಕೊಳ್ಳುವಂತೆ ಸಂಸದ ಬಿ.ವೈ ರಾಘವೇಂದ್ರ ಕರೆ ನೀಡಿದರು.

ತಾಲೂಕಿನ ಹಾರೋಗೊಪ್ಪ ಗ್ರಾಮದಲ್ಲಿ ಕುಮದ್ವತಿ ಶಿಕ್ಷಣ ಮಹಾ ವಿದ್ಯಾಲಯದ ವತಿಯಿಂದ ಆಯೋಜಿಸಲಾದ 7 ದಿನದ ವಿಶೇಷ ರಾಷ್ಟ್ರೀಯ ಸೇವಾ ಯೋಜನೆ ಶಿಬಿರವನ್ನು ಶುಕ್ರವಾರ ಸಂಜೆ ಉದ್ಘಾಟಿಸಿ ಅವರು ಮಾತನಾಡಿದರು.

ದೇಶಾದ್ಯಂತ ಕಾಲೇಜು ಯುವಕ ಯುವತಿಯರಿಗೆ ಗ್ರಾಮೀಣ ಜನಜೀವನದ ಅರಿವು ಉಂಟು ಮಾಡುವ ಜತೆಗೆ ಸಮಾಜದ ಜತೆ ಬಾಂಧವ್ಯವನ್ನು ಬೆಳೆಸಿಕೊಳ್ಳಲು ನೆರವಾಗುವಂತೆ ಆಯೋಜಿಸಲಾದ ರಾಷ್ಟ್ರೀಯ ಸೇವಾ ಯೋಜನೆಯ ಶಿಬಿರಗಳು ವಿದ್ಯಾರ್ಥಿಗಳಲ್ಲಿ ವಿವಿಧ ರೀತಿಯ ಕೌಶಲಗಳನ್ನು ರೂಢಿಸಿಕೊಳ್ಳಲು ಸಹಾಯಕವಾಗಿವೆ. ಪದವಿ ಪೂರ್ವ ಮತ್ತು ಪದವಿ ಕಾಲೇಜುಗಳಲ್ಲಿ ಸರ್ಕಾರ, ವಿಶ್ವವಿದ್ಯಾಲಯ ಮತ್ತು ಶಿಕ್ಷಣ ಸಂಸ್ಥೆಗಳ ನೆರವಿನೊಂದಿಗೆ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳನ್ನು ಸ್ಥಾಪಿಸಿ ಆ ಮೂಲಕ ಗ್ರಾಮೀಣ ಭಾಗದಲ್ಲಿ ಆರೋಗ್ಯ ಸಮತೋಲನ, ಪರಿಸರ ಸಂರಕ್ಷಣೆ, ಶೈಕ್ಷಣಿಕ ಅವಕಾಶಗಳ ಅರಿವನ್ನು ಮೂಡಿಸುವಂತಹ ಅನೇಕ ಕಾರ್ಯಕ್ರಮಗಳನ್ನು ಶಿಬಿರದಲ್ಲಿ ಹಮ್ಮಿಕೊಳ್ಳಲಾಗುತ್ತದೆ ಎಂದರು.

ಜಿಪಂ ಸದಸ್ಯೆ ಅರುಂಧತಿ ಮಾತನಾಡಿ, ವಿದ್ಯಾರ್ಥಿ ದಿಸೆಯಲ್ಲಿ ಕೇವಲ ಓದು ಬರಹಗಳಿಗೆ ಮಾತ್ರ ಸೀಮಿತಗೊಳ್ಳದೇ ಕಾಲೇಜುಗಳಲ್ಲಿ ಸ್ಥಾಪಿಸಲಾದ ರಾಷ್ಟ್ರೀಯ ಸೇವಾ ಯೋಜನಾ ಶಿಬಿರದಲ್ಲಿ ಸಕ್ರಿಯವಾಗಿ ಭಾಗವಹಿಸುವುದರಿಂದ ಪರಸ್ಪರ ಸಹಕಾರ, ಒಟ್ಟಿಗೇ ಸೇರಿ ಕಾರ್ಯ ನಿರ್ವಹಿಸುವುದರಿಂದ ನಾವು ಮತ್ತು ನಮ್ಮವರು ಎಂಬ ಭಾವನೆಯುಂಟಾಗಿ ಸುಮಧುರ ಬಾಂಧವ್ಯ ರೂಢಿಸಿಕೊಂಡು ಉತ್ತಮ ಬದುಕನ್ನು ರೂಪಿಸಿಕೊಳ್ಳಲು ಸಹಕಾರಿಯಾಗುತ್ತದೆ ಎಂದರು.

ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್. ಗದಗ್, ಗ್ರಾ.ಪಂ ಅಧ್ಯಕ್ಷೆ ನಾಗಮ್ಮ, ಕಾಲೇಜಿನ ಪ್ರಾಚಾರ್ಯೆ ಡಾ. ಜಯಶ್ರೀ ಉಪಸ್ಥಿತರಿದ್ದರು. ಶಿಬಿರದ ಸಂಚಾಲಕ ರವಿಕುಮಾರ ಎನ್.ಜಿ ಪ್ರಾಸ್ತಾವಿಕವಾಗಿ ಮಾತನಾಡಿದರು. ವಿದ್ಯಾಶ್ರೀ ಸಂಗಡಿಗರು ಪ್ರಾರ್ಥಿಸಿ, ಲಾವಣ್ಯ ಸಂಗಡಿಗರು ಎನ್.ಎಸ್.ಎಸ್ ಗೀತೆ ಹಾಡಿದರು. ಪ್ರಜ್ವಲಾ ನಿರೂಪಿಸಿ ಶ್ರೀಧರನಾಯ್ಕ ವಂದಿಸಿದರು.



ಕನ್ನಡ ಪ್ರಭ ದಿನಾಂಕ : 16-02-2020 ಭಾನುವಾರ ಪುಟ-02

ಸೇವಾ ಸಲಹ

ಹಾರೋಗೊಪ್ಪದಲ್ಲಿ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಶಿಬಿರ ಉದ್ಘಾಟಿಸಿದ ಸಂಸದ ರಾಘವೇಂದ್ರ

# ವಿದ್ಯಾರ್ಥಿಗಳಲ್ಲಿ ಸಮಾಜ ಸೇವೆ ಅರಿವಿಗೆ ಎನ್ನೆಸ್ಸೆಸ್ ಶಿಬಿರ ಪೂರಕ

• **ಕನ್ನಡಪ್ರಭವಾರ್ತೆ** ಶಿಕಾರಿಪುರ

ದೇಶದ ಅಭಿವೃದ್ಧಿಯಲ್ಲಿ ಯುವ ಪೀಳಿಗೆ ಪಾತ್ರ ಮಹತ್ತದ್ದು. ಈ ದಿಸೆಯಲ್ಲಿ ಕಾಲೇಜು ಅವಧಿಯಲ್ಲಿ ವಿದ್ಯಾರ್ಥಿಗಳು ರಾ.ಸೇ.ಯೋ ಶಿಬಿರದಲ್ಲಿ ಸಕ್ರೀಯವಾಗಿ ಪಾಲ್ಗೊಂಡು ದೇಶದ ಅಭಿವೃದ್ಧಿಗೆ ಪೂರಕ ವಿವಿಧ ಕೌಶಲ್ಯ ಅಳವಡಿಸಿಕೊಳ್ಳುವಂತೆ ಸಂಸದ ಬಿ.ವೈ. ರಾಘವೇಂದ್ರ ಕರೆ ನೀಡಿದರು.

ತಾಲೂಕಿನ ಹಾರೋಗೊಪ್ಪ ಗ್ರಾಮದಲ್ಲಿ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಹಮ್ಮಿಕೊಂಡಿರುವ 7 ದಿನದ ವಿಶೇಷ ರಾಷ್ಟ್ರೀಯ ಸೇವಾ ಯೋಜನೆ ಶಿಬಿರ ಉದ್ಘಾಟಿಸಿ ಮಾತನಾಡಿದರು.

ದೇಶಾದ್ಯಂತ ಕಾಲೇಜು ಯುವಕ-ಯುವತಿಯರಿಗೆ ಗ್ರಾಮೀಣ ಜನಜೀವನದ ಅರಿವು ಉಂಟು ಮಾಡುವ ಜತೆಗೆ ಸಮಾಜ ಜತೆ ಬಾಂಧವ್ಯ ಬೆಳೆಸಿಕೊಳ್ಳಲು ನೆರವಾಗುವಂತೆ ರಾಷ್ಟ್ರೀಯ ಸೇವಾ ಯೋಜನೆ ಶಿಬಿರ ಆಯೋಜಿಸಲಾಗುತ್ತದೆ. ಪಪೂ ಮತ್ತು ಪದವಿ ಕಾಲೇಜುಗಳಲ್ಲಿ ಸರ್ಕಾರ, ವಿಶ್ವವಿದ್ಯಾಲಯ ಮತ್ತು ಶಿಕ್ಷಣ ಸಂಸ್ಥೆಗಳ ನೆರವಿನೊಂದಿಗೆ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳನ್ನು ಸ್ಥಾಪಿಸಿ ಆ ಮೂಲಕ ಗ್ರಾಮೀಣ ಭಾಗದಲ್ಲಿ ಆರೋಗ್ಯ ಸಮತೋಲನ, ಪರಿಸರ ಸಂರಕ್ಷಣೆ, ಶೈಕ್ಷಣಿಕ ಅವಕಾಶಗಳ ಅರಿವು ಮೂಡಿಸುವ ಅನೇಕ ಕಾರ್ಯಕ್ರಮಗಳನ್ನು ಶಿಬಿರದಲ್ಲಿ ಹಮ್ಮಿಕೊಳ್ಳಲಾಗುತ್ತದೆ. ಶಿಬಿರದಲ್ಲಿ ಸಕ್ರೀಯವಾಗಿ ಕಾರ್ಯ ನಿರ್ವಹಿಸಿ ಗ್ರಾಮೀಣ ಜನರಿಗೆ ಹಲವು ವಿಷಯಗಳ ಅರಿವು ಮೂಡಿಸಬೇಕು ಎಂದು ಅವರು ತಿಳಿಸಿದರು.



ಹಾರೋಗೊಪ್ಪದ ಎನ್ಎಸ್ಎಸ್ ಶಿಬಿರದಲ್ಲಿ ಸಂಸದ ರಾಘವೇಂದ್ರ ಮಾತನಾಡಿದರು.

ಮುಖ್ಯ ಅತಿಥಿ ಜಿಪಂ ಸದಸ್ಯೆ ಅರುಂಧತಿ ಮಾತನಾಡಿ, ವಿದ್ಯಾರ್ಥಿ ದಿಸೆಯಲ್ಲಿ ಕೇವಲ ಓದು ಬರಹಗಳಿಗೆ ಮಾತ್ರ ಸೀಮಿತಗೊಳ್ಳದೇ ರಾಷ್ಟ್ರೀಯ ಸೇವಾ ಯೋಜನೆಯಲ್ಲಿ ಪಾಲ್ಗೊಳ್ಳುವುದರಿಂದ ಶೈಕ್ಷಣಿಕ ಸಾಧನೆಯೊಂದಿಗೆ ಅನೇಕ ಸಾಮಾಜಿಕ ಮೌಲ್ಯ ಅಳವಡಿಸಿಕೊಳ್ಳಲು ಸಾಧ್ಯ. ಶಿಬಿರಗಳಿಂದ ಪರಸ್ಪರ ಸಹಕಾರ, ಒಟ್ಟಿಗೇ ಸೇರಿ ಕಾರ್ಯ ನಿರ್ವಹಿಸುವುದರಿಂದ ನಾವು ಮತ್ತು ನಮ್ಮವರು ಎಂಬ ಭಾವನೆಯುಂಟಾಗಿ ಸುಮಧುರ ಬಾಂಧವ್ಯ ಸಾಧ್ಯವಾಗುತ್ತದೆ ಎಂದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್ ಮಾತನಾಡಿ ಹಳ್ಳಿ ಪ್ರಧಾನವಾದ ಭಾರತ ದೇಶ, ಕೃಷಿಯ ಮೂಲಕ ಪ್ರಾಬಲ್ಯವನ್ನು ಸಾಧಿಸುತ್ತಿದೆ. ಅಲ್ಲದೆ ಉತ್ತಮ ಪರಂಪರೆಯನ್ನು ಹೊಂದಿದ ನಾವು ಈಗ ನಗರೀಕರಣಕ್ಕೆ ಮಾರು ಹೋಗಿದ್ದೇವೆ. ಹಳ್ಳಿ ನಿರ್ಲಕ್ಷ್ಯತೆ ಭಾವನೆಯಲ್ಲಿ ಬದುಕುತ್ತಿದ್ದೇವೆ. ಆದರೆ ಪೀಳಿಗೆಯಿಂದ ಪೀಳಿಗೆಗೆ ಆ ಪರಂಪರೆ ಉಳಿಸಿ ಬೆಳೆಸಬೇಕಾದರೆ ಗ್ರಾಮಗಳ ಮೊರೆ ಹೋಗಬೇಕಾಗುತ್ತದೆ. ಗ್ರಾಮಗಳಲ್ಲಿರುವ ಕೂಡು ಕುಟುಂಬ, ಸಾಮಾಜಿಕ ಸಾಮರಸ್ಯ, ಒಟ್ಟಿಗೆ ಬಾಳುವ ಮನೋಭಾವಗಳನ್ನು ನೋಡಿ ಕಲಿಯಲು ಈ ರಾಷ್ಟ್ರೀಯ ಸೇವಾ ಯೋಜನೆ ಪೂರಕ ಎಂದು ಹೇಳಿದರು.

ವೇದಿಕೆಯಲ್ಲಿ ಗ್ರಾಪಂ ಅಧ್ಯಕ್ಷೆ ನಾಗಮ್ಮ ಹಾಗೂ ಕಾಲೇಜಿನ ಪ್ರಾಚಾರ್ಯರಾದ ಡಾ. ಜಯಶ್ರೀ ವಿ. ಆರ್., ಗ್ರಾಮಸ್ಥರು, ಬೋಧಕ ಸಿಬ್ಬಂದಿ, ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಶಿಬಿರದ ಸಂಚಾಲಕ ರವಿಕುಮಾರ ಎನ್.ಜಿ.ಪ್ರಾಸ್ತಾವಿಕವಾಗಿಮಾತನಾಡಿದರು. ಪ್ರಶಿಕ್ಷಣಾರ್ಥಿ ವಿದ್ಯಾಶ್ರೀ ಸಂಗಡಿಗರು ಪ್ರಾರ್ಥಿಸಿ, ಲಾವಣ್ಯ ಮತ್ತು ಸಂಗಡಿಗರು ಎನ್ಎಸ್ಎಸ್ ಗೀತೆ ಹಾಡಿದರು. ಪ್ರಜ್ವಲಾ ನಿರೂಪಿಸಿ ಶ್ರೀಧರನಾಯ್ಕ ವಂದಿಸಿದರು.

ವಿಜಯ ಕರ್ನಾಟಕ ದಿನಾಂಕ : 28-01-2020 ಮಂಗಳವಾರ ಪುಟ-03

# ಮಾರಕವಾದ ಪ್ಲಾಸ್ಟಿಕ್ ಬಳಕೆ ನಿಲ್ಲಿಸಿ

## ಡಾ.ಜಯಶ್ರೀ ಹೇಳಿಕೆ । ಪರಿಸರ ಉಳಿಸಿ ಅಭಿಯಾನ




ಶಿಕಾರಿಪುರದಲ್ಲಿ ಶನಿವಾರ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ವಿದ್ಯಾರ್ಥಿಗಳು ಪ್ಲಾಸ್ಟಿಕ್ ಬ್ಯಾಗ್ ತೆಗೆದುಕೊಂಡು ಹೋಗುತ್ತಿದ್ದ ಸಾರ್ವಜನಿಕರಿಗೆ ಬಟ್ಟೆ ಚೀಲ ನೀಡಿ ಜಾಗೃತಿ ಕಾರ್ಯಕ್ರಮ ನಡೆಸಿದರು.

■ **ವಿಕ ಸುದ್ದಿಲೋಕ** ಶಿಕಾರಿಪುರ

ಪ್ಲಾಸ್ಟಿಕ್ ಮಣ್ಣಿನಲ್ಲಿ ಕರಗುವುದಿಲ್ಲ, ಪ್ರಾಣಿಗಳಿಗೂ ಇದರಿಂದ ಆರೋಗ್ಯಕ್ಕೆ ತೊಂದರೆ. ಸುಂದರ ನಗರ ನಿರ್ಮಾಣ ಆಗುವುದಕ್ಕೆ ಎಲ್ಲರೂ ಪ್ಲಾಸ್ಟಿಕ್ ಬಳಕೆ ನಿಲ್ಲಿಸಬೇಕೆಂದು ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ.ವಿ.ಆರ್.ಜಯಶ್ರೀ ಹೇಳಿದರು.

ಪಟ್ಟಣದ ಬಸ್‌ನಿಲ್ದಾಣದಲ್ಲಿ ಶನಿವಾರ ಆಯೋಜಿಸಿದ್ದ ಪ್ಲಾಸ್ಟಿಕ್ ಶ್ರಜಿಸಿ, ಪರಿಸರ ಉಳಿಸಿ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಬಿಎಡ್ ಪ್ರಶಿಕ್ಷಣಾರ್ಥಿಗಳು ತಮ್ಮ ಅಧ್ಯಯನ ಭಾಗವಾಗಿ ತಯಾರಿಸಿದ್ದ ಬಟ್ಟೆ ಚೀಲಗಳನ್ನು ಉಚಿತವಾಗಿ ನಾಗರಿಕರಿಗೆ ವಿತರಿಸುತ್ತಿದ್ದು, ಅದು ಇನ್ನುಳಿದ ಸಂಘ, ಸಂಸ್ಥೆಗಳಿಗೆ, ಜನರಿಗೆ, ವಿದ್ಯಾರ್ಥಿಗಳಿಗೆ ಮಾದರಿಯಾಗಲಿ ಎಂದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದ ಪ್ರಶಿಕ್ಷಣಾರ್ಥಿಗಳು ಪ್ಲಾಸ್ಟಿಕ್ ಬಳಕೆ ವಿರೋಧಿಸಿ ಜನರಲ್ಲಿ ಜಾಗೃತಿ ಮೂಡಿಸುವ ಘೋಷಣೆ ಕೂಗಿದರು. ರಸ್ತೆಯಲ್ಲಿ ಪ್ಲಾಸ್ಟಿಕ್ ಬ್ಯಾಗ್ ತೆಗೆದುಕೊಂಡು ಹೋಗುತ್ತಿದ್ದವರಿಗೆ ಬಟ್ಟೆ ಬ್ಯಾಗ್ ನೀಡುವ ಮೂಲಕ ಅರಿವು ಮೂಡಿಸಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗೆ, ಕುಮದ್ವತಿ ಸಿದ್ಧ ಉಡುಪು ತಯಾರಿಕೆ, ತರಬೇತಿ ಸಂಸ್ಥೆ ಪ್ರಾಚಾರ್ಯ ವಿದ್ಯಾಶಂಕರ್, ಇತರರು ಇದ್ದರು.

ಉದಯವಾಣಿ ದಿನಾಂಕ : 31-01-2020 ಶುಕ್ರವಾರ ಪುಟ-05

# ಪ್ಲಾಸ್ಟಿಕ್‌ಮುಕ್ತ ಸಮಾಜಕ್ಕಾಗಿ ಅಭಿಯಾನ



ಶಿಕಾರಿಪುರದ ಖಾಸಗಿ ಬಸ್‌ನಿಲ್ದಾಣದಲ್ಲಿ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಪ್ಲಾಸ್ಟಿಕ್ ಬಳಕೆ ನಿಷೇಧ ಕುರಿತು ಅರಿವು ಮೂಡಿಸಿದರು. ಡಾ. ಜಯಶ್ರೀ, ಡಾ. ವೀರೇಂದ್ರ ವಾಲಿ, ವಿದ್ಯಾಶಂಕರ್ ಇತರರಿದ್ದರು.

ಶಿಕಾರಿಪುರ: ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳು ಪಟ್ಟಣದ ಹೊಸ ಸಂತೆ ಮೈದಾನದಿಂದ ಕಿರಣ್ ಟಾಕೀಸ್ ವೃತ್ತ, ಖಾಸಗಿ ಬಸ್ ನಿಲ್ದಾಣ, ಹೊಯ್ಸಳ ವೃತ್ತ ಮೂಲಕ ಶ್ರೀ ಹುಚ್ಚರಾಯಸ್ವಾಮಿ ದೇವಾಲಯದವರೆಗೆ ಪ್ಲಾಸ್ಟಿಕ್‌ಮುಕ್ತ ಸಮಾಜಕ್ಕಾಗಿ ಅಭಿಯಾನ ನಡೆಸಿದರು. ಸಂಸ್ಥೆಯ ಶೈಕ್ಷಣಿಕ ಮಾರ್ಗದರ್ಶಕ ಪ್ರೊ. ಎಸ್. ಎಸ್.ಗದಗ್ ಮಾತನಾಡಿ, ನಾವು ಪ್ಲಾಸ್ಟಿಕ್ ಬಳಸುವುದಿಲ್ಲ, ಪರಿಸರಕ್ಕೆ ಕಂಟಕವಾಗಿರುವ ಪ್ಲಾಸ್ಟಿಕ್ ತೊಲಗಿಸುವವರೆಗೆ ವಿರಮಿಸುವದಿಲ್ಲ ಎಂದು ಪ್ರತಿಯೊಬ್ಬರೂ ಸಂಕಲ್ಪ ಮಾಡಬೇಕು ಎಂದರು. ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಶಿಕ್ಷಣಾರ್ಥಿಗಳೇ ತಯಾರಿಸಿದ ಬಟ್ಟೆ ಚೀಲಗಳನ್ನು ಸಂತೆ ಮಾರುಕಟ್ಟೆ, ಬಸ್ ನಿಲ್ದಾಣ ಸೇರಿ ವಿವಿಧೆಡೆ ನಾಗರಿಕರಿಗೆ ನೀಡುವ ಮೂಲಕ ಜಾಗೃತಿ ಮೂಡಿಸಲಾಗುತ್ತಿದೆ. ಪ್ಲಾಸ್ಟಿಕ್ ನಿಷೇಧಿಸುವಂತೆ ಕೋರ್ಟ್, ಸರ್ಕಾರ ಜನರಲ್ಲಿ ಮನವಿ ಮಾಡಿದೆ. ಸರ್ಕಾರ ಕಠಿಣ ಕ್ರಮಗಳನ್ನೂ ಕೈಗೊಂಡಿದೆ. ಆದರೂ ಪ್ಲಾಸ್ಟಿಕ್ ಬಳಕೆ ನಿಂತಿಲ್ಲ ಎಂದರು. ಮೊದಲು ನಾವೆಲ್ಲರೂ ಒಂದಾಗಿ ಪ್ಲಾಸ್ಟಿಕ್ ಮುಕ್ತ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ ಹೆಜ್ಜೆ ಹಾಕಬೇಕಿದೆ. ಸ್ವಯಂ ಸೇವಾಸಂಸ್ಥೆಗಳು, ಸಂಘ ಸಂಸ್ಥೆಗಳು ಈಗಾಗಲೆ ಸಾರ್ವಜನಿಕರಲ್ಲಿ ಅರಿವು ಮೂಡಿಸುತ್ತಿವೆ. ನಮ್ಮ ಮನೆಗಳಿಂದಲೇ ಪ್ಲಾಸ್ಟಿಕ್ ನಿಷೇಧವಾಗಬೇಕು ಎಂದರು. ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಜಯಶ್ರೀ, ಕುಮದ್ವತಿ ಸಿದ್ಧ ಉಡುಪುಗಳ ತಯಾರಿಕೆ ಮತ್ತು ತರಬೇತಿ ಸಂಸ್ಥೆಯ ಪ್ರಾಚಾರ್ಯ ವಿದ್ಯಾಶಂಕರ್, ಡಾ. ವೀರೇಂದ್ರ ಕುಮಾರ್ ವಾಲಿ, ರವಿಕುಮಾರ್ ಇತರರಿದ್ದರು.

ವಿಜಯವಾಣಿ ದಿನಾಂಕ : 16-02-2020 ಭಾನುವಾರ ಪುಟ-02

# ಗ್ರಾಮೋತ್ಥಾನದತ್ತ ಇರಲಿ ಪ್ರತಿಯೊಬ್ಬರ ಚಿತ್ತ

ಶಿಕಾರಿಪುರ: ಗ್ರಾಮರಾಜ್ಯದಿಂದ ರಾಮರಾಜ್ಯ ಎಂದು ಬಾಪೂಜಿ ಹೇಳಿದ್ದರು. ಗ್ರಾಮಗಳು ಸರ್ವತೋಮುಖ ಅಭಿವೃದ್ಧಿಯಾದರೆ ದೇಶ ಪ್ರಕಾಶಿಸುತ್ತದೆ. ನಾವು ಗ್ರಾಮೋತ್ಥಾನದತ್ತ ಗಮನ ಹರಿಸಬೇಕು ಎಂದು ಲೋಕಸಭಾ ಸದಸ್ಯ ಬಿ.ವೈ. ರಾಘವೇಂದ್ರ ಹೇಳಿದರು.

ಹಾರೋಗೊಪ್ಪದಲ್ಲಿ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಹಮ್ಮಿಕೊಂಡಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಿಶೇಷ ಶಿಬಿರ ಉದ್ಘಾಟಿಸಿ ಮಾತನಾಡಿ, ಶಿಬಿರಗಳಿಂದ ಗ್ರಾಮೀಣ ಜನರ ಪರಿಸ್ಥಿತಿ, ಪರಂಪರೆ, ಸಾಹಿತ್ಯ, ಸಂಸ್ಕೃತಿಗಳ ಪರಿಚಯವಾಗುತ್ತದೆಎಂದರು. ಆರೋಗ್ಯ, ಸ್ವಚ್ಛತೆ, ಪರಿಸರಸೇರಿಹಲವುಕಾರ್ಯಕ್ರಮಗಳನ್ನು ಆಯೋಜಿಸುತ್ತಿದ್ದು ಅದರಲ್ಲಿ ಎಲ್ಲರೂ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಗ್ರಾಮದಲ್ಲಿ 7 ದಿನಗಳ ಕಾಲ ನಡೆಯುವ ಉಪನ್ಯಾಸ, ಚರ್ಚೆ, ಸಂವಾದಗಳನ್ನು ಮನನ ಮಾಡಬೇಕು. ದೈಹಿಕ ಚಟುವಟಿಕೆಗಳು, ಸೇವಾಕಾರ್ಯಗಳು ನಮಗರಿವಿಲ್ಲದಂತೆ ಹೊಸ ಪ್ರಪಂಚಕ್ಕೆ ಕರೆದೊಯ್ಯುತ್ತವೆ ಎಂದು ಹೇಳಿದರು.

ಸೇವಾ ಹಿ ಪರಮೋಧರ್ಮಃ ಎಂಬಂತೆ ಸೇವೆ ಕೂಡ ಶಿಕ್ಷಣದ ಒಂದು ಭಾಗ. ಶಿಕ್ಷಣದ ಜತೆಗೆ ಮಾನವೀಯ ಮೌಲ್ಯಗಳೂ ಮುಖ್ಯ. ಶಿಬಿರಗಳು ಸಾಮಾಜಿಕ ಕಳಕಳಿ ಬೆಳೆಸುತ್ತವೆ. ಪಠ್ಯದ ಜತೆ ಪಠ್ಯೇತರ ಚಟುವಟಿಕೆಗಳಿಗೂ ಆದ್ಯತೆ ನೀಡಬೇಕು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಏರ್ಪಡಿಸಿದ್ದ ಎನ್ ಎಸ್ ಎಸ್ ಶಿಬಿರದಲ್ಲಿ ಬಿ.ವೈ.ರಾಘವೇಂದ್ರ ಮಾತನಾಡಿದರು. ಪ್ರಾಚಾರ್ಯೆ ಜಯಶ್ರೀ, ನಾಗಮ್ಮ, ಅರುಂಧತಿ ರಾಜೇಶ್ ಇತರರಿದ್ದರು.

ಸುಶಿಕ್ಷಿತ ಸಮಾಜ ನಿರ್ಮಾಣದಲ್ಲಿ ನಿಮ್ಮ ಪಾತ್ರ ಅತ್ಯಂತ ಮಹತ್ವಪೂರ್ಣ ಎಂದು ಕಿವಿಮಾತು ಹೇಳಿದರು. ಜಿಪಂ ಸದಸ್ಯೆ ಅರುಂಧತಿ ರಾಜೇಶ್, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯೆ ಡಾ. ಜಯಶ್ರೀ, ಹಾರೋಗೊಪ್ಪ ಗ್ರಾಪಂ ಅಧ್ಯಕ್ಷೆ ನಾಗಮ್ಮ ಇತರರಿದ್ದರು.

ಉದಯವಾಣಿ ದಿನಾಂಕ : 20-02-2020 ಗುರುವಾರ ಪುಟ-05

# ಮನುಷ್ಯನ ಸಾಧನೆಗೆ ಬೇಕು ಸದೃಢ ಆರೋಗ್ಯ

ಶಿಕಾರಿಪುರ: ಆರೋಗ್ಯ ಇದ್ದರೆ ವಿವಿಧ ಸಾಧನೆ ಮಾಡಬಹುದು. ನಾವು ನಮ್ಮ ಆರೋಗ್ಯದತ್ತ ಹೆಚ್ಚಿನ ಗಮನಹರಿಸದೆ ಹಲವು ಕಾಯಿಲೆಗಳಿಗೆ ತುತ್ತಾಗುತ್ತಿದ್ದೇವೆ ಎಂದು ಪ್ರಾಚಾರ್ಯೆ ಡಾ. ಜಯಶ್ರೀ ಹೇಳಿದರು.

ಸಮೀಪದ ಹಾರೋಗೊಪ್ಪ ಗ್ರಾಮದಲ್ಲಿ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯವು ಸಾರ್ವಜನಿಕ ಆಸ್ಪತ್ರೆ, ನಾಗರಿಕ ಸಹಾಯವಾಣಿ, ಉದ್ಧವ್ ಶಿಕ್ಷಣ ಸಂಸ್ಥೆ ಆಶ್ರಯದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಮಾತನಾಡಿ, ಆರೋಗ್ಯವಂತ ವ್ಯಕ್ತಿಯ ಮನಸ್ಸು ಸದಾ ಚಟುವಟಿಕೆಯಿಂದ ಕೂಡಿರುತ್ತದೆ ಎಂದರು.

ಡಾ. ಅರುಣ್‌ಕುಮಾರ್ ಮಾತನಾಡಿ, ಆರೋಗ್ಯಕ್ಕೆ ಮೊದಲು ಗಮನ ಕೊಡಿ. ಈ ರೀತಿಯ ಶಿಬಿರಗಳು ನಮ್ಮಲ್ಲಿ ಉತ್ಸಾಹ ಮೂಡಿಸುತ್ತವೆ. ಸೇವಾ ಹಿ ಪರಮೋಧರ್ಮಃ ನಮ್ಮ ದಿವ್ಯ ಮಂತ್ರವಾಗಬೇಕು. ಸೇವೆಯೇ ನಮ್ಮ ಪರಮ ಗುರಿಯಾಗಬೇಕು. ಅದು ನಿಸ್ವಾರ್ಥ ಸೇವೆಯಾಗಿರಬೇಕು ಎಂದರು.

ಕುಮದ್ವತಿ ರೆಸಿಡೆನ್ಸಿಯಲ್ ಶಾಲೆ ಪ್ರಾಚಾರ್ಯ ಡಾ. ಕೆ.ಎಸ್. ದತ್ತಾತ್ರಿ, ಅಗ್ನಿಶಾಮಕ ದಳದ ಸಹಾಯಕ ಅಧಿಕಾರಿ ಕೆ.ಹಳದಪ್ಪ,



ಹಾರೋಗೊಪ್ಪ ಗ್ರಾಮಸ್ಥರು, ವಿಶೇಷ ಸೇವಾ ಶಿಬಿರದ ಪ್ರಶಿಕ್ಷಣಾರ್ಥಿಗಳ ಆರೋಗ್ಯ ತಪಾಸಣೆ ಮಾಡಲಾಯಿತು.

ಮಾರುತಿ ಸ್ವಸಹಾಯ ಸಂಘದ ಅಧ್ಯಕ್ಷ ಎಚ್.ಆರ್.ರಾಮಪ್ಪ ರೆಡ್ಡಿ, ಮಾತಂಗೇಶ್ವರಿ ಸ್ತ್ರೀ ಶಕ್ತಿ ಸ್ವಸಹಾಯ ಸಂಘದ ಅಧ್ಯಕ್ಷೆ ಶಿಲ್ಪಾ ಶಿವಕುಮಾರ್, ಹಾರೋಗೊಪ್ಪ ಎಸ್‌ಡಿಎಂಸಿ ಅಧ್ಯಕ್ಷ ವಿಜಯಕುಮಾರ್ ಉಪಸ್ಥಿತರಿದ್ದರು.

ಕನ್ನಡ ಪ್ರಭ ದಿನಾಂಕ : 03-03-2020 ಮಂಗಳವಾರ ಪುಟ-02

# ಆನ್‌ಲೈನ್ ಬ್ಯಾಂಕಿಂಗ್ ವ್ಯವಹಾರ ಅಗತ್ಯ

## ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ.ಆರ್. ಮನವಿ

• **ಕನ್ನಡಪ್ರಭವಾರ್ತೆ** ಶಿಕಾರಿಪುರ

ಗ್ರಾಹಕರು ಸರತಿಯಲ್ಲಿ ನಿಂತು ಸಮಯ ವ್ಯಯಮಾಡುವುದನ್ನು ತಪ್ಪಿಸಲು ಪ್ರಸ್ತುತ ಹಣಕಾಸಿನ ಬಹುತೇಕ ವ್ಯವಹಾರ ಆನ್‌ಲೈನ್ ಮೂಲಕ ನಿರ್ವಹಣೆಯಾಗುತ್ತಿದ್ದು ಹೊಸ ವ್ಯವಸ್ಥೆಗೆ ಪ್ರತಿಯೊಬ್ಬರೂ ಹೊಂದಿಕೊಳ್ಳುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ.ಆರ್. ಮನವಿ ಮಾಡಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಕುಮದ್ವತಿ ಶಿಕ್ಷಣ ಮಹಾ ವಿದ್ಯಾಲಯದ ಐಕ್ಯೂಎಸಿ ಹಾಗೂ ವಿಜ್ಞಾನ ಸಂಘದ ಆಡಿಯಲ್ಲಿ ರಾಷ್ಟ್ರೀಯ

ವಿಜ್ಞಾನ ದಿನದ ಅಂಗವಾಗಿ ಆನ್‌ಲೈನ್ ಬ್ಯಾಂಕಿನ ಪ್ರಾಮುಖ್ಯತೆ ಕುರಿತು ಪ್ರಶಿಕ್ಷಣಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಇತ್ತೀಚೆಗೆ ಭಾರತ ತಂತ್ರಜ್ಞಾನದಲ್ಲಿ ಅತ್ಯಂತ ವೇಗ ಮುಂದುವರಿಯುತ್ತಿದೆ. ಇದಕ್ಕೆ ಬ್ಯಾಂಕಿಂಗ್ ಕ್ಷೇತ್ರ ಹೊರತಾಗಿಲ್ಲ. ಇಂಟರ್‌ನೆಟ್ ವ್ಯವಸ್ಥೆಯೊಂದಿಗೆ ಮೊಬೈಲ್ ಅಥವಾ ಡಿವೈಸಸ್ ಬಳಕೆದಾರರು ವ್ಯವಹಾರ ಕೈಗೊಂಡಿರುವ ಬ್ಯಾಂಕ್‌ಗಳ ಜೊತೆ ಉತ್ತಮ ಸಂವಹನ ಸಾಧಿಸಬೇಕು ಮತ್ತು ದಿನನಿತ್ಯ ಹಣಕಾಸಿನ ವ್ಯವಹಾರ ಕುರಿತು ಮಾಹಿತಿ ಪಡೆಯಬೇಕು. ಗ್ರಾಮೀಣರಿಗೂ ತಂತ್ರಜ್ಞಾನಾಧಾರಿತವ್ಯವಹಾರಅರಿವುಮೂಡಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ದೇವರಾಜ ಮಾತನಾಡಿ, ಪ್ರಸ್ತುತ ಶಿಕ್ಷಣ ಸಂಸ್ಥೆಗಳು, ಬ್ಯಾಂಕುಗಳು, ಗ್ರಾಹಕರ ನಡುವೆ ಉತ್ತಮ ಸಂಬಂಧ ಕಲ್ಪಿಸಬೇಕು ಎಂದರು.

ವಿಜ್ಞಾನ ಸಂಘದ ಮಾರ್ಗದರ್ಶಕ ಡಾ. ಯದುಕುಮಾರ, ಎಸ್‌ಬಿಐನ ನಿಯೋಜಿತ ವ್ಯವಸ್ಥಾಪಕ ಮಾಧವ್ ಹೆಗ್ಡೆ, ಸಹಾಯಕ ವ್ಯವಸ್ಥಾಪಕ ಪ್ರೀಯೇಶ್ ರಂಜನ್, ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಇದ್ದರು.

ಎಸ್‌ಬಿಐ ಸಹಯೋಗದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಡಿಜಿಟಲ್ ಇಂಡಿಯಾದಲ್ಲಿ ವಿದ್ಯಾರ್ಥಿ ಸ್ನೇಹಿ ಆನ್‌ಲೈನ್ ವ್ಯವಸ್ಥೆ ಎಂಬ ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಶಿಕ್ಷಣಾರ್ಥಿ ವಿಜಯಲಕ್ಷ್ಮೀ ಪ್ರಥಮ, ಸಿಂಧು ಮತ್ತು ಲಾವಣ್ಯ ದ್ವಿತೀಯ ಹಾಗೂ ಯುವರಾಜ ತೃತೀಯ ಬಹುಮಾನ ಎಸ್‌ಬಿಐ ವತಿಯಿಂದ ಪಡೆದರು. ಪ್ರಶಿಕ್ಷಣಾರ್ಥಿ ಸಿಂಧು ಪ್ರಾರ್ಥಿಸಿ, ಆಯಿಷಾ ಫರೀನ್ ಶೇಕ್ ಸ್ವಾಗತಿಸಿ, ವಿಜಯಲಕ್ಷ್ಮೀ ನಿರೂಪಿಸಿ, ಪ್ರಜ್ವಲ ವಂದಿಸಿದರು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ವಿಜ್ಞಾನ ದಿನಾಚರಣೆಯಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ.ಆರ್. ಮೊದಲಾದವರು ಇದ್ದರು.

ಕನ್ನಡ ಪ್ರಭ ದಿನಾಂಕ : 03-03-2020 ಮಂಗಳವಾರ ಪುಟ-02

# ಆನ್‌ಲೈನ್ ಬ್ಯಾಂಕಿಂಗ್ ವ್ಯವಹಾರ ಅಗತ್ಯ

## ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ.ಆರ್. ಮನವಿ

• **ಕನ್ನಡಪ್ರಭವಾರ್ತೆ** ಶಿಕಾರಿಪುರ

ಗ್ರಾಹಕರು ಸರತಿಯಲ್ಲಿ ನಿಂತು ಸಮಯ ವ್ಯಯಮಾಡುವುದನ್ನು ತಪ್ಪಿಸಲು ಪ್ರಸ್ತುತ ಹಣಕಾಸಿನ ಬಹುತೇಕ ವ್ಯವಹಾರ ಆನ್ ಲೈನ್ ಮೂಲಕ ನಿರ್ವಹಣೆಯಾಗುತ್ತಿದ್ದು ಹೊಸ ವ್ಯವಸ್ಥೆಗೆ ಪ್ರತಿಯೊಬ್ಬರೂ ಹೊಂದಿಕೊಳ್ಳುವಂತೆ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ.ಆರ್. ಮನವಿ ಮಾಡಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಕುಮದ್ವತಿ ಶಿಕ್ಷಣ ಮಹಾ ವಿದ್ಯಾಲಯದ ಐಕ್ಯೂಎಸಿ ಹಾಗೂ ವಿಜ್ಞಾನ ಸಂಘದ ಆಡಿಯಲ್ಲಿ ರಾಷ್ಟ್ರೀಯ

ವಿಜ್ಞಾನ ದಿನದ ಅಂಗವಾಗಿ ಆನ್ ಲೈನ್ ಬ್ಯಾಂಕಿನ ಪ್ರಾಮುಖ್ಯತೆ ಕುರಿತು ಪ್ರಶಿಕ್ಷಣಾರ್ಥಿಗಳಿಗೆ ಹಮ್ಮಿಕೊಳ್ಳಲಾಗಿದ್ದ ವಿಶೇಷ ಉಪನ್ಯಾಸದಲ್ಲಿ ಅವರು ಮಾತನಾಡಿದರು.

ಇತ್ತೀಚೆಗೆ ಭಾರತ ತಂತ್ರಜ್ಞಾನದಲ್ಲಿ ಅತ್ಯಂತ ವೇಗ ಮುಂದುವರಿಯುತ್ತಿದೆ. ಇದಕ್ಕೆ ಬ್ಯಾಂಕಿಂಗ್ ಕ್ಷೇತ್ರ ಹೂರತಾಗಿಲ್ಲ. ಇಂಟರ್‌ನೆಟ್ ವ್ಯವಸ್ಥೆಯೊಂದಿಗೆ ಮೊಬೈಲ್ ಅಥವಾ ಡಿವೈಸಸ್ ಬಳಕೆದಾರರು ವ್ಯವಹಾರ ಕೈಗೊಂಡಿರುವ ಬ್ಯಾಂಕ್‌ಗಳ ಜೊತೆ ಉತ್ತಮ ಸಂವಹನ ಸಾಧಿಸಬೇಕು ಮತ್ತು ದಿನನಿತ್ಯ ಹಣಕಾಸಿನ ವ್ಯವಹಾರ ಕುರಿತು ಮಾಹಿತಿ ಪಡೆಯಬೇಕು. ಗ್ರಾಮೀಣರಿಗೂ ತಂತ್ರಜ್ಞಾನಾಧಾರಿತವ್ಯವಹಾರಅರಿವುಮೂಡಿಸಬೇಕು ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ದೇವರಾಜ ಮಾತನಾಡಿ, ಪ್ರಸ್ತುತ ಶಿಕ್ಷಣ ಸಂಸ್ಥೆಗಳು, ಬ್ಯಾಂಕುಗಳು, ಗ್ರಾಹಕರ ನಡುವೆ ಉತ್ತಮ ಸಂಬಂಧ ಕಲ್ಪಿಸಬೇಕು ಎಂದರು.

ವಿಜ್ಞಾನ ಸಂಘದ ಮಾರ್ಗದರ್ಶಕ ಡಾ. ಯದುಕುಮಾರ, ಎಸ್‌ಬಿಐನ ನಿಯೋಜಿತ ವ್ಯವಸ್ಥಾಪಕ ಮಾಧವ್ ಹೆಗ್ಡೆ, ಸಹಾಯಕ ವ್ಯವಸ್ಥಾಪಕ ಪ್ರೀಯೇಶ್ ರಂಜನ್, ಎಲ್ಲಾ ಬೋಧಕ ಬೋಧಕೇತರ ಸಿಬ್ಬಂದಿ ಇದ್ದರು.

ಎಸ್‌ಬಿಐ ಸಹಯೋಗದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಡಿಜಿಟಲ್ ಇಂಡಿಯಾದಲ್ಲಿ ವಿದ್ಯಾರ್ಥಿ ಸ್ನೇಹಿ ಆನ್‌ಲೈನ್ ವ್ಯವಸ್ಥೆ ಎಂಬ ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಪ್ರಬಂಧ ಸ್ಪರ್ಧೆಯಲ್ಲಿ ಪ್ರಶಿಕ್ಷಣಾರ್ಥಿ ವಿಜಯಲಕ್ಷ್ಮೀ ಪ್ರಥಮ, ಸಿಂಧು ಮತ್ತು ಲಾವಣ್ಯ ದ್ವಿತೀಯ ಹಾಗೂ ಯುವರಾಜ ತೃತೀಯ ಬಹುಮಾನ ಎಸ್‌ಬಿಐ ವತಿಯಿಂದ ಪಡೆದರು. ಪ್ರಶಿಕ್ಷಣಾರ್ಥಿ ಸಿಂಧು ಪ್ರಾರ್ಥಿಸಿ, ಆಯಿಷಾ ಫರೀನ್ ಶೇಕ್ ಸ್ವಾಗತಿಸಿ, ವಿಜಯಲಕ್ಷ್ಮೀ ನಿರೂಪಿಸಿ, ಪ್ರಜ್ವಲ ವಂದಿಸಿದರು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ವಿಜ್ಞಾನ ದಿನಾಚರಣೆಯಲ್ಲಿ ಪ್ರಬಂಧ ಸ್ಪರ್ಧೆಯಲ್ಲಿ ವಿಜೇತ ಪ್ರಶಿಕ್ಷಣಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ.ಆರ್. ಮೊದಲಾದವರು ಇದ್ದರು.

ಪ್ರಜಾವಾಣಿ : ದಿನಾಂಕ : 04-03-2020 ಬುಧವಾರ ಪುಟ-05



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಚೆಗೆ ಆನ್‌ಲೈನ್ ಬ್ಯಾಂಕಿಂಗ್ ಸೇವೆ ವಿಷಯ ಕುರಿತು ಆಯೋಜಿಸಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಿಕಾರಿಪುರ ಶಾಖೆ ವ್ಯವಸ್ಥಾಪಕ ಟಿ.ಆರ್. ರವಿ ಮಾತನಾಡಿದರು.

# ಆನ್‌ಲೈನ್ ಬ್ಯಾಂಕಿಂಗ್: ಉಪನ್ಯಾಸ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: 'ಆನ್‌ಲೈನ್ ಬ್ಯಾಂಕಿಂಗ್ ಸೇವೆಯನ್ನು ಗ್ರಾಹಕರು ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಶಿಕಾರಿಪುರ ಶಾಖೆಯ ಮುಖ್ಯ ವ್ಯವಸ್ಥಾಪಕ ಟಿ.ಆರ್. ರವಿ ಹೇಳಿದರು.

ಸಮೀಪದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಈಚೆಗೆ ಕಾಲೇಜಿನ ಐಕ್ಯೂಎಸಿ, ವಿಜ್ಞಾನ ಸಂಘ ಹಾಗೂ ಎಸ್‌ಬಿಐ ಬ್ಯಾಂಕ್ ವತಿಯಿಂದ ರಾಷ್ಟ್ರೀಯ ವಿಜ್ಞಾನ ದಿನದ ನಿಮಿತ್ತ ನಡೆದ 'ಆನ್‌ಲೈನ್ ಬ್ಯಾಂಕಿಂಗ್' ಸೇವೆ ಕುರಿತು ನಡೆದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಗ್ರಾಹಕರು ಬ್ಯಾಂಕ್ ಕೆಲಸಕ್ಕಾಗಿ ಸಮಯ ವ್ಯಯಿಸುವುದನ್ನು ತಪ್ಪಿಸುವುದಕ್ಕಾಗಿ ಆನ್‌ಲೈನ್ ಬ್ಯಾಂಕಿಂಗ್ ಸೇವೆ ನೀಡಲಾಗುತ್ತಿದೆ. ಗ್ರಾಮೀಣ ಭಾಗದ ಜನರಲ್ಲಿ ಈ ಸೇವೆಯ ಬಗ್ಗೆ ವಿದ್ಯಾರ್ಥಿಗಳು ಜಾಗೃತಿ ಮೂಡಿಸಬೇಕು' ಎಂದು ಸಲಹೆ ನೀಡಿದರು.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಸಹಾಯಕ ಪ್ರಾಧ್ಯಾಪಕ ವೈ. ದೇವರಾಜ್ ಅಧ್ಯಕ್ಷತೆ ವಹಿಸಿದ್ದರು. ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ವಿಜ್ಞಾನ ಸಂಘದ ಸಂಯೋಜಕ ಡಾ.ಯದುಕುಮಾರ್, ಎಸ್‌ಬಿಐ ನಿಯೋಜಿತ ವ್ಯವಸ್ಥಾಪಕ ಮಾಧವ್ ಹೆಗ್ಡೆ, ಸಹಾಯಕ ವ್ಯವಸ್ಥಾಪಕ ಪ್ರಿಯೇಶ್ ರಂಜನ್ ಇದ್ದರು.

ಎಸ್‌ಬಿಐ ಸಹಯೋಗದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ಡಿಜಿಟಲ್ ಇಂಡಿಯಾದಲ್ಲಿ ವಿದ್ಯಾರ್ಥಿಸ್ನೇಹಿ ಡಿಜಿಟಲ್ ಲಾಕರ್ ಸೇವೆ ನೀಡುವ ಕುರಿತು ಆಯೋಜಿಸಿದ್ದ ಪ್ರಬಂಧ ಸ್ಪರ್ಧೆ ವಿಜೇತರಿಗೆ ಬಹುಮಾನ ವಿತರಿಸಲಾಯಿತು.

# ಬ್ಯಾಂಕಿಂಗ್ ಕ್ಷೇತ್ರದಲ್ಲಿ ನೂತನ ಆವಿಷ್ಕಾರ

**ಶಿಕಾರಿಪುರ:** ಪ್ರಸ್ತುತ ಹಣಕಾಸಿನ ವ್ಯವಹಾರಗಳು ಆನ್‌ಲೈನ್‌ಗಳ ನಡೆಯುತ್ತಿರುವುದರಿಂದ ಗ್ರಾಹಕರು ಸರತಿ ಸಾಲಿನಲ್ಲಿ ನಿಂತು ದಿನಗಟ್ಟಲೇ ಸಮಯ ವ್ಯಯ ಮಾಡುವುದು ಕಡಿಮೆಯಾಗಿದೆ ಎಂದು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ. ಆರ್. ಹೇಳಿದರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಐಕ್ಯೂಎಸಿ ಹಾಗೂ ವಿಜ್ಞಾನ ಸಂಘದ ಆಡಿಯಲ್ಲಿ ರಾಷ್ಟ್ರೀಯ ವಿಜ್ಞಾನ ದಿನದ ಅಂಗವಾಗಿ 'ಆನ್‌ಲೈನ್ ಬ್ಯಾಂಕ್‌ನ ಪ್ರಾಮುಖ್ಯತೆಯ ಕುರಿತು ಹಮ್ಮಿಕೊಂಡಿದ್ದ ವಿಶೇಷ ಉಪನ್ಯಾಸ ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳಿಗೆ ವಿಶೇಷ ಉಪನ್ಯಾಸ ನೀಡಿದ ಅವರು, ಇತ್ತೀಚಿಗೆ ಭಾರತವು ತಂತ್ರಜ್ಞಾನದಲ್ಲಿ ಮುಂದುವರಿಯುತ್ತಿದೆ. ಬ್ಯಾಂಕಿಂಗ್ ಕ್ಷೇತ್ರ ಕೂಡ ಅದಕ್ಕೆ ಹೊರತಾಗಿಲ್ಲ, ಹೊಸ ಹೊಸ ವಿಧಾನಗಳನ್ನು ಬಳಸಿಕೊಳ್ಳುತ್ತಾ ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುತ್ತಿವೆ ಎಂದರು.



**ಶಿಕಾರಿಪುರ: ಬ್ಯಾಂಕ್ ಆಫ್ ಇಂಡಿಯಾದ ಮುಖ್ಯ ವ್ಯವಸ್ಥಾಪಕ ರವಿ ಟಿ. ಆರ್. ಮಾತನಾಡಿದರು.**

ಅಂತರ್ಜಾಲ ವ್ಯವಸ್ಥೆಯೊಂದಿಗೆ ಮೊಬೈಲ್ ಅಥವಾ ಡಿವೈಸಸ್ ಬಳಕೆದಾರರು ತಾವು ವ್ಯವಹಾರ ಕೈಗೊಂಡಿರುವ ಬ್ಯಾಂಕ್‌ಗಳ ಜೊತೆ ಉತ್ತಮ ಸಂವಹನ ಸಾಧಿಸಬೇಕು ಮತ್ತು ಅವರು ದಿನನಿತ್ಯ ಅಲೆದಾಡದಂತೆ ಯಾವ ರೀತಿಯಲ್ಲಿ ಹಣಕಾಸಿನ ವ್ಯವಹಾರ ಕೈಗೊಳ್ಳಬಹುದೆಂಬುದರ ಕುರಿತು ಮಾಹಿತಿ ಪಡೆಯಬೇಕು. ನಮ್ಮ ದೇಶದಲ್ಲಿ ಗ್ರಾಮೀಣ ಭಾಗದ ಗ್ರಾಹಕರು ಹೆಚ್ಚಿದ್ದು ಅವರಿಗೆ ತಂತ್ರಜ್ಞಾನಾಧಾರಿತ ವ್ಯವಹಾರಕ್ಕೆ ವಿದ್ಯಾವಂತರಾದ ನಾವು ಅರಿವು ಮೂಡಿಸಬೇಕು. ಡಿಗಿಲಾಕರ್ ವ್ಯವಸ್ಥೆಯು ನಮ್ಮ ವೈಯಕ್ತಿಕ ಗುರುತಿನ ದಾಖಲೆಗಳನ್ನು ಶೇಖರಿಸಿ ಸಂಗ್ರಹಿಸಿಡಲು ಮತ್ತು ಅಗತ್ಯದಲ್ಲಿ ಬಳಸಿಕೊಳ್ಳಲು ಉತ್ತಮ ವ್ಯವಸ್ಥೆಯಾಗಿದೆ. ಇದರ ಉಪಯೋಗವನ್ನು ಎಲ್ಲರೂ ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಪ್ರಸ್ತುತ ಹಣಕಾಸಿನ ವ್ಯವಹಾರಗಳು ಆನ್‌ಲೈನ್ ಮೂಲಕ ನಿರ್ವಹಣೆಯಾಗುತ್ತಿದ್ದು ಗ್ರಾಹಕರು ಸರತಿ ಸಾಲಿನಲ್ಲಿ ನಿಂತು ದಿನಗಟ್ಟಲೇ ಸಮಯ ವ್ಯಯ ಮಾಡುವುದನ್ನು ಕಡಿಮೆ ಮಾಡುತ್ತಿರುವುದು ಸ್ವಾಗತಾರ್ಹ ಎಂದು ಅಭಿಪ್ರಾಯ ಪಟ್ಟರು.

ಕಾಲೇಜಿನ ಸಹಾಯಕ ಪ್ರಾಧ್ಯಾಪಕ ದೇವರಾಜ ವೈ. ಮಾತನಾಡಿ, ಪ್ರಸ್ತುತ ಶಿಕ್ಷಣ ಸಂಸ್ಥೆಗಳು, ಬ್ಯಾಂಕುಗಳು ಮತ್ತು ಗ್ರಾಹಕರ ನಡುವೆ ಉತ್ತಮ ಸಂಬಂಧ ಕಲ್ಪಿಸುವುದು ಎಲ್ಲರ ಹೊಣೆಗಾರಿಕೆಯಾಗಿದೆ ಎಂದರು.

ವಿಜ್ಞಾನಸಂಘದಮಾರ್ಗದರ್ಶಕರಾದ ಡಾ। ಯದುಕುಮಾರ ಎಂ., ಎಸ್‌ಬಿಐನ ನಿಯೋಜಿತ ವ್ಯವಸ್ಥಾಪಕ ಮಾಧವ್ ಹೆಗ್ಡೆ ಸಹಾಯಕ ವ್ಯವಸ್ಥಾಪಕರಾದ ಪ್ರಿಯೇಶ್ ರಂಜನ್ ಮತ್ತಿತರರು ಇದ್ದರು

# ಮಹಿಳೆಯ ಆರೋಗ್ಯದ ಕಾಳಜಿ ಕುಟುಂಬದ ಸದಸ್ಯರು ವಹಿಸಬೇಕು: ಡಾ. ಶ್ರೀನಿವಾಸ್



## ಮಹಿಳೆಯ ಆರೋಗ್ಯದ ಕಾಳಜಿ ಕುಟುಂಬದ ಸದಸ್ಯರು ವಹಿಸಬೇಕು

1 ನೇ ಪುಟದಿಂದ

ಯೋಜನೆಯನ್ನು ಜಾರಿಗೆ ತಂದಿದ್ದು 45 ವರ್ಷದ ಮೇಲಿನವರು ಇದರ ಸದುಪಯೋಗವನ್ನು ಪಡೆದುಕೊಳ್ಳಬೇಕೆಂದು ಕರೆ ನೀಡಿದರು.

ಪ್ರಾಚಾರ್ಯರಾದ ಡಾ. ಜಯಶ್ರೀ ಪಿ ಆರ್ ಅಧ್ಯಕ್ಷತೆಯನ್ನು ವಹಿಸಿ ಮಾತನಾಡಿ 'ಹೆಣ್ಣೊಂದು ಕಲಿತರೆ ಶಾಲೆಯೊಂದು ತೆರೆದಂತೆ' ಎಂಬ ವಾಕ್ಯದಂತೆ ಎಲ್ಲಾ ಹೆಣ್ಣು ಮಕ್ಕಳಿಗೆ ಶಿಕ್ಷಣದ ಅವಕಾಶಗಳು ಸಿಗಬೇಕು. ಮಹಿಳೆ ಪ್ರಸ್ತುತ ಎಲ್ಲಾ ಕ್ಷೇತ್ರಗಳಲ್ಲಿ ತನ್ನ ಸಾಧನೆಯನ್ನು ತೋರುತ್ತಿರುವುದು ಸ್ವಾಗತಾರ್ಹ. ಅದಕ್ಕೆ ಪುರುಷರು ನೀಡಿದ ಸಹಮತಿಯು ಕಾರಣವಾಗುತ್ತದೆ. ಸಮಾಜ ಮಹಿಳೆಗೆ ನೀಡಿದ ಸ್ವಾತಂತ್ರ್ಯ ಸ್ವೇಚ್ಛತನಕ್ಕೆ ಬಳಸಿಕೊಳ್ಳಬಾರದು. ಎಂದು ಅಭಿಪ್ರಾಯ ಪಟ್ಟರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಶೈಕ್ಷಣಿಕ ಸಲಹೆಗಾರರಾದ ಪ್ರೊ. ಎಸ್ ಎಸ್ ಗದಗರವರು ಎಲ್ಲಾ ಮಹಿಳೆಯರಿಗೆ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಶಯಗಳನ್ನು ಕೋರಿದರು.

ಸಾರ್ವಜನಿಕ ಆಸ್ಪತ್ರೆ ವೈದ್ಯರಾದ ಡಾ. ಬಸವ ಕುಲಾಲ, ನಾಗರೀಕ ಸಹಾಯ ವಾಣಿಯ ಸಂಚಾಲಕರಾದ ಸೋಮಶೇಖರ್, ಪ್ರಾಧ್ಯಾಪಕರಾದ ಡಾ. ವಾಣಿ ನಾಯಕಿ, ರವಿಕುಮಾರ್. ಡಾ. ರವಿ. ಡಾ. ಕಿರಣ್ ಕುಮಾರ್, ಡಾ. ವೀರೇಂದ್ರಕುಮಾರವಾಲಿ, ದೇವರಾಜ ವೈ. ಡಾ. ಶಿವಕುಮಾರ್, ನಾಗೇಂದ್ರಪ್ಪ, ಡಾ. ಯದುಕುಮಾರ್, ಬೋಧಕೇತರ ಸಿಬ್ಬಂದಿ, ಪತ್ರಿಕಾ ಮಾಧ್ಯಮದವರು ಹಾಗೂ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಪ್ರಶಿಕ್ಷಣಾರ್ಥಿಗಳಾದ ಜ್ಯೋತಿ ಮತ್ತು ಸಂಗಡಿಗರು ಪ್ರಾರ್ಥಿಸಿದರೆ. ಲಾವಣ್ಯ ಸ್ವಾಗತಿಸಿ, ಹಾಗೂ ವಿದ್ಯಶ್ರೀ ವಂದಿಸಿದರು. ಕಾರ್ಯಕ್ರಮವನ್ನು ಅರ್ಚನ ನಿರೂಪಿಸಿದರು.

ಕನ್ನಡ ಪ್ರಭ : ದಿನಾಂಕ : 12-03-2020 ಗುರುವಾರ ಪುಟ-04

ಉಪನ್ಯಾಸ — ಶಿಕಾರಿಪುರ ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಶ್ರೀನಿವಾಸ್ ಸಲಹೆ

# ಕುಟುಂಬ ರಕ್ಷಕಿ ಮಹಿಳೆ ಬಗ್ಗೆ ಕಾಳಜಿ ಅಗತ್ಯ

• **ಕನ್ನಡಪ್ರಭವಾರ್ತೆ** ಶಿಕಾರಿಪುರ

ಕುಟುಂಬದ ಎಲ್ಲ ಸದಸ್ಯರ ಆರೋಗ್ಯ ಕಾಳಜಿ ಮಾಡುವ ಮಹಿಳೆಯರ ಬಗ್ಗೆ ಕುಟುಂಬದ ಇತರೆ ಸದಸ್ಯರು ಕಾಳಜಿ ವಹಿಸಬೇಕು ಎಂದು ಸರ್ಕಾರಿ ಸಾರ್ವಜನಿಕ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಶ್ರೀನಿವಾಸ್ ತಿಳಿಸಿದರು.

ಬುಧವಾರ ಪಟ್ಟಣದ ಕುಮದ್ವತಿ ಶಿಕ್ಷಣಮಹಾವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ, ಮಹಿಳಾ ಸಂಘ, ಸುಗಂಧ ಸಾಂಸ್ಕೃತಿಕ ವೇದಿಕೆ, ಐಕ್ಯೂಎಸಿ, ಶಿವಮೊಗ್ಗ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಶಿಕಾರಿಪುರ ಸಾರ್ವಜನಿಕ ಆಸ್ಪತ್ರೆ, ನಾಗರಿಕ ಸಹಾಯವಾಣಿ ಕೇಂದ್ರ, ಸಾರ್ವಜನಿಕ ಆಸ್ಪತ್ರೆ ಹಾಗೂ ಬೆಂಗಳೂರಿನ ಉದ್ಭವ್ ಶೈಕ್ಷಣಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಸಹಯೋಗದಲ್ಲಿ ರಾಷ್ಟ್ರೀಯ ಮಹಿಳಾ ದಿನಾಚರಣೆ ಅಂಗವಾಗಿ ಮಹಿಳಾ ಆರೋಗ್ಯ ಮತ್ತು ಸಮಾಜದ ಅಭಿವೃದ್ಧಿ ಎಂಬ ಶೀರ್ಷಿಕೆಯಡಿಯಲ್ಲಿ ಹಮ್ಮಿಕೊಂಡಿದ್ದ ಉಪನ್ಯಾಸ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಬುಧವಾರ ನಡೆದ ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆಯಲ್ಲಿ ತಜ್ಞ ವೈದ್ಯ ಡಾ.ಶ್ರೀನಿವಾಸ್ ಮಾತನಾಡಿದರು.

ಕುಟುಂಬದಲ್ಲಿ ಮಹಿಳೆಯು ಹಲವಾರು ಸ್ಥಾನಗಳಲ್ಲಿ ತನ್ನ ಪಾತ್ರ ನಿಭಾಯಿಸುತ್ತಾಳೆ. ತಾಯಿ, ಪತ್ನಿ, ಸಹೋದರಿ, ಸಂಭಂದಿ, ಶಿಕ್ಷಕಿ, ಸೇವಕಿ ಹೀಗೆ ಪಟ್ಟಿ ಬೆಳೆಯುತ್ತಾ ಹೋಗುತ್ತದೆ. ಅಂತಹ ಸಹನಾಮಯಿ ಮಹಿಳೆ ಆರೋಗ್ಯದ ಕಾಳಜಿ ನಾವೆಲ್ಲರೂ ವಹಿಸಿಕೊಂಡಾಗ ಅದು ಅವಳಿಗೆ ಅತಿ ದೊಡ್ಡ ಗೌರವ ನೀಡಿದಂತಾಗುತ್ತದೆ ಎಂದು ತಿಳಿಸಿದರು.

ಮಹಿಳಾ ಆರೋಗ್ಯ ಮತ್ತು ಸಮಾಜದ ಅಭಿವೃದ್ಧಿ ಎಂಬ ವಿಷಯ ಬಗ್ಗೆ ಉಪನ್ಯಾಸ ನೀಡಿದ ಸ್ತ್ರೀರೋಗ ತಜ್ಞೆ ಡಾ. ಗೀತಾ, 18ವರ್ಷ ವಯಸ್ಸಿನವರೆಗೆ ಹುಡುಗಿಯರು ತಮ್ಮ ಆರೋಗ್ಯದ ಕಡೆಗೆ ಹೆಚ್ಚು ಗಮನ ನೀಡಬೇಕು. ಪೌಷ್ಟಿಕ ಆಹಾರ ಸೇವನೆಯೊಂದಿಗೆ ತಮ್ಮಲ್ಲಿನ ರಕ್ತ ಹೀನತೆ ಸರಿದೂಗಿಸಿಕೊಳ್ಳಬೇಕು. ಆಗ ಮಾತ್ರ ತಮ್ಮ ವೈವಾಹಿಕ ಜೀವನದಲ್ಲಾಗುವ ಎಲ್ಲಾ ಬದಲಾವಣೆಗಳು ಯಾವುದೇ ಸಮಸ್ಯೆಯಿಲ್ಲದೇ ಜರಗುತ್ತವೆ. ಆ ಮೂಲಕ ಮಕ್ಕಳ, ಕುಟುಂಬ, ಸಮಾಜದ ಆರೋಗ್ಯದ ಜತೆಗೆ ದೇಶದ ಆರೋಗ್ಯ ಕಾಪಾಡಲು ಸಾಧ್ಯವಾಗುತ್ತದೆ. ಹೆಣ್ಣು ಮಕ್ಕಳು ಯಾವುದೇ ಸಂಕೋಚ ಭಾವನೆಗೆ ಒಳಗಾಗದೇ ತಮ್ಮ ಸಮಸ್ಯೆಗಳಿಗೆ ಹತ್ತಿರದ ವೈದ್ಯರನ್ನುಭೇಟಿಮಾಡಿಪರಿಹರಿಸಿಕೊಳ್ಳಬೇಕು ಎಂದು ತಿಳಿಸಿದರು.

ಹಿರಿಯ ವೈದ್ಯಾಧಿಕಾರಿ ಡಾ. ಅರುಣ್ ಕುಮಾರ್, ದಂತ ವೈದ್ಯ ಉಷಾ ಮಾತನಾಡಿದರು. ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್ ಎಸ್ ಗದಗ್ ಮಹಿಳೆಯರಿಗೆ ರಾಷ್ಟ್ರೀಯ ಮಹಿಳಾ ದಿನಾಚರಣೆಯ ಶುಭಾಷಯಗಳನ್ನು ಕೋರಿದರು.

ಪ್ರಾಚಾರ್ಯರಾದ ಡಾ. ಜಯಶ್ರೀ ವಿ. ಆರ್. ಅಧ್ಯಕ್ಷತೆ ವಹಿಸಿ ಮಾತನಾಡಿದರು. ವೇದಿಕೆಯಲ್ಲಿ ವೈದ್ಯ ಡಾ. ಬಸವ ಕುಲಾಲ, ನಾಗರಿಕ ಸಹಾಯವಾಣಿ ಸಂಚಾಲಕ ಮಂಜಪ್ಪ, ಪ್ರಾಧ್ಯಾಪಕಿ ಡಾ. ವಾಣಿ ನಾಯಕ್, ರವಿಕುಮಾರ್, ಡಾ. ರವಿ, ಡಾ. ಕಿರಣ್ ಕುಮಾರ್, ಡಾ. ವೀರೇಂದ್ರಕುಮಾರ ವಾಲಿ, ದೇವರಾಜ ವೈ, ಡಾ. ಶಿವಕುಮಾರ್, ನಾಗೇಂದ್ರಪ್ಪ, ಡಾ. ಯದುಕುಮಾರ್, ಬೋಧಕೇತರ ಸಿಬ್ಬಂದಿ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಶಿಕ್ಷಣಾರ್ಥಿ ಜ್ಯೋತಿ ಮತ್ತು ಸಂಗಡಿಗರು ಪ್ರಾರ್ಥಿಸಿ, ಲಾವಣ್ಯ ಸ್ವಾಗತಿಸಿ, ಅರ್ಚನ ನಿರೂಪಿಸಿ, ವಿದ್ಯಾಶ್ರೀ ವಂದಿಸಿದರು.

ವಿಜಯವಾಣಿ ದಿನಾಂಕ : 16-03-2020 ಸೋಮವಾರ ಪುಟ-04

# ಮಹಿಳೆಯರು ಆರೋಗ್ಯದತ್ತ ಗಮನ ನೀಡಲಿ

**ಶಿಕಾರಿಪುರ:** ಕುಟುಂಬದ ಆರೋಗ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸುವ ಹೆಣ್ಣು ತನ್ನ ಆರೋಗ್ಯದ ಬಗ್ಗೆಯೂ ಗಮನ ನೀಡಬೇಕು ಎಂದು ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ. ಶ್ರೀನಿವಾಸ್ ಹೇಳಿದರು. ಪಟ್ಟಣದ ಕುಮದ್ವತಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ರಾಷ್ಟ್ರೀಯ ಸೇವಾ ಯೋಜನೆ, ಮಹಿಳಾ ಸಂಘ, ಸುಗಂಧ ಸಾಂಸ್ಕೃತಿಕ ವೇದಿಕೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ಗುರುವಾರ ಏರ್ಪಡಿಸಿದ್ದ ಮಹಿಳಾ ಆರೋಗ್ಯ ಮತ್ತು ಸಮಾಜದ ಅಭಿವೃದ್ಧಿ ಉಪನ್ಯಾಸ ಮಾಲಿಕೆಯಲ್ಲಿ ಮಾತನಾಡಿದರು. ಮಗಳಾಗಿ, ತಾಯಿಯಾಗಿ, ಸೊಸೆಯಾಗಿ, ಸಹೋದರಿಯಾಗಿ ಹೆಣ್ಣಿನ ಪಾತ್ರ ಅದ್ಭುತ. ಸರ್ವರ ಹಿತ, ಆರೋಗ್ಯ ಬಯಸುವ ಆಕೆ ತನ್ನ ಸಂತೋಷ, ಆರೋಗ್ಯದ ಬಗ್ಗೆ ಹೆಚ್ಚು ಗಮನ ನೀಡುವುದಿಲ್ಲ. ಇದರಿಂದ ಬಹುಬೇಗ ಅನಾರೋಗ್ಯಕ್ಕೆ ತುತ್ತಾಗುತ್ತಾಳೆ ಎಂದರು. ವಿವೇಕಾನಂದ ವಿದ್ಯಾಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ ಮಾತನಾಡಿ, ಸಮಾಜೋನ್ನತಿಗೆ ಬಹುಪಾಲು ಮಹಿಳೆ ಕೂಡ ಪಾಲುದಾರಳು. ಅವಳು ಯಾವುದೇ ಕೆಲಸ ಹಿಡಿದರೂ ಪೂರ್ಣಗೊಳಿಸದೆ ಬಿಡುವುದಿಲ್ಲ. ಮಹಿಳೆಯರು ನಡೆಸುವ ಉದ್ಯಮಗಳು ಹೆಚ್ಚು ಸೋಲುವುದಿಲ್ಲ ಎಂದು ತಿಳಿಸಿದರು. ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಚಾರ್ಯೆ ಡಾ. ವಿ.ಆರ್.ಜಯಶ್ರೀ ಅಧ್ಯಕ್ಷತೆ ವಹಿಸಿದ್ದರು. ಡಾ. ಬಸವಕುಲಾಲ್, ಸೋಮಶೇಖರ್, ರವಿಕುಮಾರ್, ಡಾ. ವಾಣಿ, ಡಾ. ವೀರೇಂದ್ರ ಕುಮಾರ್ ವಾಲಿ, ವೈ.ದೇವರಾಜ್, ಡಾ. ರವಿ, ಡಾ. ಉಷಾ ಇತರರಿದ್ದರು.

# 2018-2019
# Paper Reports

ಪ್ರಜಾವಾಣಿ ದಿನಾಂಕ : 05-02-2019, ಮಂಗಳವಾರ ಪುಟ-03

## 'ಕ್ಯಾನ್ಸರ್: ಆತಂಕ ಬೇಡ'

ಪ್ರಜಾವಾಣಿ ವಾರ್ತೆ

ಶಿಕಾರಿಪುರ: ಕ್ಯಾನ್ಸರ್ ಬಗ್ಗೆ ಆತಂಕ ಪಡದೇ ಶಿಕ್ಷಣ ಆಸ್ಪತ್ರೆ ತಜ್ಞ ವೈದ್ಯರ ಸಲಹೆ ಪಡೆದು ಪ್ರಾಥಮಿಕ ಹಂತದಲ್ಲಿ ಚಿಕಿತ್ಸೆ ಪಡೆಯಬೇಕು ಎಂದು ತಾಲ್ಲೂಕು ವೈದ್ಯಾಧಿಕಾರಿ ಡಾ. ಮಂಜುನಾಥ್ ನಾಗಲೀಕರ್ ಸಲಹೆ ನೀಡಿದರು.

ಪಟ್ಟಣದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಸೋಮವಾರ ಆರೋಗ್ಯ ಇಲಾಖೆ, ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ, ಸಾರ್ವಜನಿಕ ಆಸ್ಪತ್ರೆ ನಾಗರಿಕ ಸಹಾಯವಾಣಿ ಕೇಂದ್ರ, ಬೆಂಗಳೂರು ಉದ್ಭವ್ ಶೈಕ್ಷಣಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಯುವ ರೆಡ್‌ಕ್ರಾಸ್ ಘಟಕ ಹಾಗೂ ಐಕ್ಯೂಎಸಿ ಆಶ್ರಯದಲ್ಲಿ ನಡೆದ ವಿಶ್ವ ಕ್ಯಾನ್ಸರ್ ದಿನಾಚರಣೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕ್ಯಾನ್ಸರ್ ಸೇರಿ ಇತರೆ ಕಾಯಿಲೆಗಳ ಹೆಚ್ಚಿನ ಚಿಕಿತ್ಸೆಗಾಗಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಅಡಿ ಚಿಕಿತ್ಸೆ ನೀಡಲಿದ್ದು, ಯೋಜನೆ ಸದ್ಬಳಕೆ ಮಾಡಿಕೊಳ್ಳಬೇಕು' ಎಂದು ಸಲಹೆ ನೀಡಿದರು.



ಶಿಕಾರಿಪುರದ ಸಾರ್ವಜನಿಕ ಸರ್ಕಾರಿ ಆಸ್ಪತ್ರೆಯಲ್ಲಿ ಸೋಮವಾರ ನಡೆದ ವಿಶ್ವ ಕ್ಯಾನ್ಸರ್ ದಿನಾಚರಣೆ ಕಾರ್ಯಕ್ರಮವನ್ನು ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಚಾರ್ಯೆ ಡಾ.ವಿ.ಆರ್.ಜಯಶ್ರೀ ಉದ್ಘಾಟಿಸಿದರು

ಕಾರ್ಯಕ್ರಮ ಉದ್ಘಾಟಿಸಿದ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ವಿ.ಆರ್. ಜಯಶ್ರೀ ಮಾತನಾಡಿದರು.

ವೈದ್ಯಾಧಿಕಾರಿಗಳಾದ ಡಾ. ಗೀತಾ, ಡಾ. ಸುಧಾಕರ್, ಡಾ. ಉಷಾ ರವೀಂದ್ರ ಉಪನ್ಯಾಸ ನೀಡಿದರು. ವೈದ್ಯಾಧಿಕಾರಿ ಡಾ.ರವೀಂದ್ರ ಪ್ರಾಸ್ತಾವಿಕವಾಗಿ ಮಾತನಾಡಿದರು.

ಸಾರ್ವಜನಿಕ ಸರ್ಕಾರಿ ಆಸ್ಪತ್ರೆ ಆಡಳಿತಾಧಿಕಾರಿ ಡಾ. ಶ್ರೀನಿವಾಸ್ ಅಧ್ಯಕ್ಷತೆ ವಹಿಸಿದ್ದರು.

ತಾಲ್ಲೂಕು ಪಂಚಾಯಿತಿ ಇಒ ಆನಂದಕುಮಾರ್, ಜಿಲ್ಲಾ ಎನ್‌ಟಿಸಿಪಿ ಸಂಯೋಜಕ ಡಾ. ಪಾಟೀಲ್, ಸರ್ಕಾರಿ ಆಸ್ಪತ್ರೆ ವೈದ್ಯಾಧಿಕಾರಿ ಡಾ. ಸುರೇಶ್, ಸರ್ಕಾರಿ ನೌಕರರ ಸಂಘದ ಉಪಾಧ್ಯಕ್ಷ ಕೇಶವ್, ಹಿರಿಯ ಶುಶ್ರೂಷಕಿ ಲೀಲಾ, ನಾಗರಿಕ ಸಹಾಯವಾಣಿ ಕೇಂದ್ರ ವ್ಯವಸ್ಥಾಪಕ ಎಂ. ಮಂಜಪ್ಪ ಇದ್ದರು.

ವಿಜಯಕರ್ನಾಟಕ ದಿನಾಂಕ : 08-02-2019 ಶುಕ್ರವಾರ ಪುಟ-03

## 'ಉಳಿದ ಭಾಗ್ಯಕ್ಕಿಂತ ಉತ್ತಮ ಆರೋಗ್ಯ ಲೇಸು'

▪ ವಿಕ ಸುದ್ದಿಲೋಕ ಶಿಕಾರಿಪುರ

ಆಧುನಿಕ ಜೀವನ ಶೈಲಿ, ಆಹಾರ ಪದ್ಧತಿ ಕ್ಯಾನ್ಸರ್ ಹೆಚ್ಚಾಗುವುದಕ್ಕೆ ಕಾರಣವಾಗಿದೆ. ರೋಗರಹಿತವಾಗಿ ಬದುಕುವುದೇ ಇಂದಿನ ಶ್ರೀಮಂತಿಕೆ ಪ್ರತೀಕವಾಗಿದೆ ಎಂದು ಪಟ್ಟಣದ ಸರಕಾರಿ ಆಸ್ಪತ್ರೆ ಆಡಳಿತಾಧಿಕಾರಿ ಶ್ರೀನಿವಾಸ್ ಹೇಳಿದರು.

ಪಟ್ಟಣದಲ್ಲಿ ಸೋಮವಾರ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ, ಸರಕಾರಿ ಆಸ್ಪತ್ರೆ, ನಾಗರಿಕ ಸಹಾಯವಾಣಿ ಕೇಂದ್ರ ಆಯೋಜಿಸಿದ್ದ ಕ್ಯಾನ್ಸರ್ ದಿನಾಚರಣೆಯಲ್ಲಿ ಅವರು ಮಾತನಾಡಿದರು. ನಾವು ಎಷ್ಟೇ ಹಣ ಸಂಪಾದಿಸಬಹುದು, ಆದರೆ ಉತ್ತಮ ಆರೋಗ್ಯ ಇಲ್ಲದಿದ್ದರೆ ಎಲ್ಲವೂ ವ್ಯರ್ಥ. ಆದ್ದರಿಂದ ಪ್ರತಿಯೊಬ್ಬರೂ ಆರೋಗ್ಯ ರಕ್ಷಣೆಗೆ ಮೊದಲ ಆದ್ಯತೆ ನೀಡಬೇಕೆಂದರು.

ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಜಯಶ್ರೀ ಮಾತನಾಡಿ, ಯುವಜನತೆ ಸೇವಿಸುವ ಬಹುತೇಕ ಫಾಸ್ಟ್ ಫುಡ್‌ನಲ್ಲಿ ಆಕರ್ಷಕವಾಗಿ ಕಾಣುವುದಕ್ಕೆ ಬಣ್ಣ, ಬಾಯಿ ರುಚಿಗೆ ಹಾಕುವ ಟೇಸ್ಟಿಂಗ್ ಪೌಡರ್ ಕಾರಣ. ಇದು ಕ್ಯಾನ್ಸರ್‌ಕಾರಕ. ಇದರ ಸೇವನೆಯಿಂದ ದೂರ ಇರಬೇಕು. ಮನೆಯಲ್ಲಿ ಮಾಡುವ ಆಹಾರ ಪೌಷ್ಟಿಕವಾಗಿರುವಂತೆ ಎಚ್ಚರಿಕೆವಹಿಸಬೇಕು. ರೋಗ ಬಂದ ಮೇಲೆ ಚಿಕಿತ್ಸೆ ಪಡೆಯುವುದಕ್ಕಿಂತಲೂ ರೋಗ ಬಾರದಂತೆ ಮುನ್ನೆಚ್ಚರಿಕೆ ವಹಿಸುವುದು ಇಂದಿನ ಅಗತ್ಯ ಎಂದರು.

ತಾಲೂಕು ಆರೋಗ್ಯಾಧಿಕಾರಿ ಮಂಜುನಾಥ ನಾಗಲೀಕರ ಮಾತನಾಡಿ, ಯುವಜನತೆ ತಂಬಾಕು, ಸಿಗರೇಟ್ ಸೇವನೆಗೆ ಬಲಿಯಾಗುತ್ತಿರುವುದು ಹೆಚ್ಚಾಗಿದೆ. ಗುಟ್ಕಾ ನಿಷೇಧಿಸಿದ್ದರೂ ತಂಬಾಕು ಬೇರೆಯಾಗಿ ಮಾರುವ ಮೂಲಕ ಅದು ಇಂದಿಗೂ ಯುವಜನತೆಗೆ ಪೂರಕವಾಗಿ ಪರಿಣಮಿಸಿದೆ. ಸಿಗರೇಟ್, ಮದ್ಯಪಾನ ಫ್ಯಾಶನ್ ಎನ್ನುವಂತಾಗಿದೆ. ಆಧುನಿಕ ಜೀವನ ಶೈಲಿ ಅನಾರೋಗ್ಯಕ್ಕೆ ಕಾರಣವಾಗುತ್ತಿದೆ. ಇದನ್ನು ಅರಿತು ಎಲ್ಲರೂ ಉತ್ತಮ ಜೀವನ ನಡೆಸಬೇಕೆಂದರು.

ಕುಷ್ಠರೋಗ ನಿಯಂತ್ರಣಕ್ಕೆ ಜನರಲ್ಲಿ ಜಾಗೃತಿ ಮೂಡಿಸುವ ಕುರಿತು ಪ್ರಮಾಣ ಬೋಧಿಸಲಾಯಿತು. ವಿದ್ಯಾರ್ಥಿಗಳು, ಆಶಾ ಕಾರ್ಯಕರ್ತೆಯರು, ವೈದ್ಯರು ಪಟ್ಟಣದ ಪ್ರಮುಖ ಬೀದಿಗಳಲ್ಲಿ ಜಾಗೃತಿ ಜಾಥಾ ನಡೆಸಿದರು. ಎಂ. ಮಂಜಪ್ಪ, ಶಿವಾನಂದ, ರವೀಂದ್ರ, ಉಷಾ, ಗೀತಾ, ಪ್ರಮೋದ್, ಭಾನುಪ್ರಸಾದ್, ಲೀಲಾ, ದಯಾನಂದ್, ಸುರೇಶ್, ದೇವರಾಜ್, ಮಂಜು ಮತ್ತಿತರರು ಇದ್ದರು.



ಶಿಕಾರಿಪುರದಲ್ಲಿ ಸೋಮವಾರ ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯ, ಸರಕಾರಿ ಆಸ್ಪತ್ರೆ, ನಾಗರಿಕ ಸಹಾಯವಾಣಿ ಆಶ್ರಯದಲ್ಲಿ ಏರ್ಪಡಿಸಿದ್ದ ಕ್ಯಾನ್ಸರ್ ವಿರೋಧಿ ದಿನಾಚರಣೆಯಲ್ಲಿ ಅರಿವು ಮೂಡಿಸುವ ಪ್ರಮಾಣ ಬೋಧಿಸಲಾಯಿತು. ಶ್ರೀನಿವಾಸ್ ಇತರರು ಇದ್ದರು.

ವಿಜಯ ಕರ್ನಾಟಕ ದಿನಾಂಕ : 04-03-2019 ಸೋಮವಾರ ಪುಟ-02

# ಕಡ್ಡಾಯ ಮತದಾನದಿಂದ ಉತ್ತಮರ ಆಯ್ಕೆ

**ಶಿಕಾರಿಪುರ:** ಕಟ್ಟಡಕ್ಕೆ ಅಡಿಪಾಯ ಹೇಗೆ ಮುಖ್ಯವೋ ಹಾಗೆಯೆ ದೇಶದ ಪ್ರಜಾಪ್ರಭುತ್ವ ಉಳಿವಿಗೆ ಜನಮತ ಸಂಗ್ರಹಣೆ, ಚುನಾವಣೆ ಭದ್ರ ಬುನಾದಿಯಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎ. ದಯಾನಂದ್ ಹೇಳಿದರು.

ಪಟ್ಟಣದಲ್ಲಿ ಶನಿವಾರ ಕಾಲೇಜು ಶಿಕ್ಷಣ ಇಲಾಖೆ, ತಾಲೂಕು ಆಡಳಿತ, ಸರಕಾರಿ ಪದವಿ ಕಾಲೇಜು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ್ದ ಯುವ ಮತದಾರರ ನೋಂದಣಿ, ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಜೆಗಳು ತಮಗೆ ಬೇಕಾದ ಉತ್ತಮ ಆಡಳಿತಗಾರರ ಆಯ್ಕೆಗೆ ಪ್ರಜಾಪ್ರಭುತ್ವ ಅವಕಾಶ ಕಲ್ಪಿಸಿದೆ. ಇದನ್ನು ಸದ್ಬಳಕೆ ಮಾಡಿಕೊಳ್ಳಲು ಯುವಜನತೆ ಮುಂದಾಗಬೇಕೆಂದರು.

ಮತದಾನಕ್ಕೆ 18ವರ್ಷ ಪೂರೈಸಿದ ಯುವಜನತೆ ತಮ್ಮ ಹೆಸರನ್ನು ಮತದಾರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಚುನಾವಣೆ ಸಂದರ್ಭ ಪ್ರತಿಯೊಬ್ಬರೂ ಕಡ್ಡಾಯ ಮತದಾನ ಮಾಡಬೇಕು. ನಕಾರಾತ್ಮಕ ಮನೋಭಾವ ದೂರಮಾಡಿ ಸಮಾಜಮುಖಿ, ರಾಷ್ಟ್ರಮುಖಿಯಾದ ಉತ್ತಮ ಆಲೋಚನೆ ಹೊಂದಬೇಕು. ತಮ್ಮ ಸುತ್ತಮುತ್ತಲಿನ ಜನರೂ ಮತದಾನದಲ್ಲಿ ಪಾಲ್ಗೊಳ್ಳುವಂತೆ ಪ್ರೇರೇಪಿಸಬೇಕೆಂದರು.

ಜಿ.ಪಂ. ಸಿಇಒ ಶಿವರಾಮೇಗೌಡ ಮಾತನಾಡಿ, ಒಂದು ದೇಶದ ಪ್ರಗತಿ ಆ ದೇಶ ಹೊಂದಿದ ಸಂವಿಧಾನ ಪ್ರತಿನಿಧಿಸುತ್ತದೆ. ಸಂವಿಧಾನ ಇಲ್ಲಿನ ಪ್ರಜೆಗಳಿಗೆ ಹಕ್ಕು, ಕರ್ತವ್ಯ ನೀಡಿದೆ. ಯುವ ಜನತೆ ತಮ್ಮ ಹಕ್ಕು ಪ್ರತಿಪಾದನೆ ಜತೆಗೆ ಕರ್ತವ್ಯದ ಕಡೆಯೂ ಗಮನ ನೀಡಬೇಕು. ಆಗ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಕರ್ತವ್ಯವಿಮುಖರ ಕಡೆ ಬೆರಳು ತೋರಿಸದೆ ಎಲ್ಲರೂ ಕರ್ತವ್ಯಪರರಾಗೋಣ, ಉತ್ತಮ ನಾಯಕನ ಆಯ್ಕೆ ಮೂಲಕ ಪ್ರಜಾಪ್ರಭುತ್ವ ಆಶಯಕ್ಕೆ ನೀರೆರೆಯೋಣ ಎಂದರು.

ರಾಷ್ಟ್ರೀಯ ಚೆಸ್ ಆಟಗಾರ ಸ್ಟ್ಯಾನಿ ಜಾರ್ಜ್, ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿ ವೇಣುಗೋಪಾಲ್, ಕುಮದ್ವತಿ ಶಿಕ್ಷಕ ತರಬೇತಿ ಸಂಸ್ಥೆ ಪ್ರಾಚಾರ್ಯರಾದ ವಿ.ಆರ್.ಜಯಶ್ರೀ, ಸರಕಾರಿ ಪದವಿ ಕಾಲೇಜು ಪ್ರಾಂಶುಪಾಲ ಜಿ. ಆರ್.ಹೆಗಡೆ, ತಹಸೀಲ್ದಾರ್ ಕೆ.ವಿ.ಕವಿರಾಜ್, ತಾ.ಪಂ.ಇಒ ಆನಂದಕುಮಾರ್, ಉಪನ್ಯಾಸಕ ವೈ.ದೇವರಾಜ್, ಅಕ್ಷತಾ, ನಾಗೇಂದ್ರಪ್ಪ, ಎಚ್. ರವಿ ಮತ್ತಿತರರು ಇದ್ದರು.



ಶಿಕಾರಿಪುರದಲ್ಲಿ ನಡೆದ ಮತದಾರರ ನೋಂದಣಿ, ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮತಯಂತ್ರ ಬಳಕೆ ಕುರಿತು ಜಿಲ್ಲಾಧಿಕಾರಿ ಕೆ.ಎ. ದಯಾನಂದ ತರಬೇತಿ ನೀಡಿದರು.

ಹೊಸದಿಗಂತ ದಿನಾಂಕ : 02-04-2019 ಮಂಗಳವಾರ ಪುಟ-11

## ಸಹಾಯಕ ಪ್ರಾಧ್ಯಾಪಕ ಡಾ.ಟಿ.ಆರ್. ಗುರುಪ್ರಸಾದ್ ಅಭಿಪ್ರಾಯ

# ವಿದ್ಯಾರ್ಥಿಗಳಿಗೆ ಧನಾತ್ಮಕ ವಿಚಾರಧಾರೆ ಮೂಡಿಸಿ



**ಶಿಕಾರಿಪುರ** : ಶಿಕ್ಷಕ ಶಿಕ್ಷಣವನ್ನು ಕಲೆಯ ರೀತಿ ಆಸ್ವಾದಿಸಿ ವಿದ್ಯಾರ್ಥಿಗಳಿಗೆ ಧನಾತ್ಮಕ ವಿಚಾರ ಧಾರೆಯನ್ನು ಮೂಡಿಸಿದಾಗ ಮಾತ್ರ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾಗಲು ಸಾಧ್ಯ ಎಂದು ಶಿರಾಳಕೊಪ್ಪದ ಕದಂಬ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಟಿ.ಆರ್. ಗುರು ಪ್ರಸಾದ್ ಅಭಿಪ್ರಾಯಪಟ್ಟರು.

ಸೋಮವಾರ ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಹಾಗೂ ಭಾಷಾ ಸಂಘ 2018-19, ಸಿರಿಯಾಳ ಕಲಾ ಕೇಂದ್ರ (ರಿ), ಶಿರಾಳಕೊಪ್ಪ ಇವರ ಸಂಯುಕ್ತ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಭಾಷಾ ಸಂಘದ ಉದ್ಘಾಟನೆ, ಶಿಕ್ಷಣದಲ್ಲಿ ನಾಟಕ ಕಲೆಯ ಪ್ರಾತ್ಯಕ್ಷಿಕೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ತಂತ್ರಜ್ಞಾನದ ಭರಾಟೆಯು ಶಿಕ್ಷಣ ವ್ಯವಸ್ಥೆಯಲ್ಲಿಯೂ ತನ್ನ ಪರಿಣಾಮವನ್ನು ಬೀರಿದೆ. ಶಿಕ್ಷಕನಿಲ್ಲದ ಶಿಕ್ಷಣ ಕಲ್ಪನೆಯನ್ನು ಮೀರಿದೆ ಎಂದ ಅವರು ಶಿಕ್ಷಕ ಕಲಾವಿದನಾದಾಗ ಶಿಕ್ಷಣ ಕಲೆಯಾಗಿ ಪರಿಣಮಿಸುತ್ತದೆ. ಯಾವುದೇ ಹಂತದಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಧನಾತ್ಮಕ ವಿಚಾರಧಾರೆಯನ್ನು ಮೂಡಿಸಬೇಕಾಗುತ್ತದೆ. ಜೀವನದ ಅನುಭವಗಳನ್ನು ಜ್ಞಾನವನ್ನಾಗಿಸಿಕೊಂಡು ಅರ್ಥೈಸಿದಾಗ ಉತ್ತಮ ಕಲಿಕೆಯುಂಟಾಗುತ್ತದೆ. ಈ ದಿಸೆಯಲ್ಲಿ ನಾಟಕ ಅಥವಾ ರಂಗಕಲೆಯ ಸ್ಪರ್ಶವಿದ್ದಲ್ಲಿ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾಗಿರಲು ಸಾಧ್ಯವಾಗುವುದರ ಜತೆಗೆ ಶಿಕ್ಷಕನ ಬೋಧನೆ ಹಸಿ ಗೋಡೆ ಮೇಲೆ ಹರಳು ಇಟ್ಟಂಗಾಗಬೇಕು ಎಂಬ ಗಾದೆಮಾತಿನಂತೆ ವಿದ್ಯಾರ್ಥಿಗಳ ಹಸಿ ಮನಸ್ಸಿನಲ್ಲಿ ಜ್ಞಾನವು ಹರಳಿನ ಹಾಗೆ ಬೇರೂರಲು ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿ, ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್ ಮಾತನಾಡಿ, ಶಿಕ್ಷಕನಾಗ ಬಯಸುವವನಲ್ಲಿ ನೈಪುಣ್ಯತೆ ಮತ್ತು ನೈಜತೆಯ ಮನೋಭಾವವಿರಬೇಕು. ನೈಪುಣ್ಯತೆಯು ಅನುಭವದಿಂದ ಬರುತ್ತದೆ. ಪ್ರತಿ ವೃತ್ತಿಗೆ ಅದರದ್ದೇ ಆದ ನೈತಿಕತೆ ಇರುತ್ತದೆ. ಕಲಿಕೆ ಶಾಶ್ವತವಾಗಿ ನೆನಪಿನಲ್ಲಿರಲು ಪರಿಣಾಮಕಾರಿಯಾಗಿ ಬೋಧನೆ ಮಾಡಬೇಕು. ಅದಕ್ಕಾಗಿ ಶಿಕ್ಷಕನು ವಿವಿಧ ರೀತಿಯ ಕೌಶಲಗಳನ್ನು ರೂಢಿಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಅಧ್ಯಕ್ಷತೆಯನ್ನು ವಹಿಸಿದ್ದ ಪ್ರಾಚಾರ್ಯೆ ಡಾ.ವಿ.ಆರ್. ಜಯಶ್ರೀ ಮಾತನಾಡಿ, ಶಿಕ್ಷಕರಲ್ಲಿ ಶ್ರದ್ಧೆ ಇರಬೇಕು. ಶಿಕ್ಷಕರ ಜ್ಞಾನದ ಮಟ್ಟ ಹೆಚ್ಚಾದ ಹಾಗೆ ದೇಶದ ಅಭಿವೃದ್ಧಿ ಸಾಧ್ಯ ಎಂಬ ಪ್ರತೀತಿ ಯಿದ್ದು ಈ ದೃಷ್ಟಿಯಲ್ಲಿ ಎಲ್ಲ ಶಿಕ್ಷಕರ ಗಮನ ಜ್ಞಾನ ಸಂಪಾದನೆಯ ದಿಸೆಯಲ್ಲಿ ಸಾಗಬೇಕು ಎಂದರು.

ಪ್ರಾಧ್ಯಾಪಕ ಡಾ. ವೀರೇಂದ್ರ ಕುಮಾರ ಪಾಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಶಿಕ್ಷಣಾರ್ಥಿ ನಳಿನಾ ಪ್ರಾರ್ಥಿಸಿ, ಶಿವಕುಮಾರ ಸ್ವಾಗತಿಸಿ, ಗಿರೀಶ್ ನಿರೂಪಿಸಿ, ದಾಕ್ಷಾಯಿಣಿ ಕಾಗೇರ ವಂದಿಸಿದರು.

ಕನ್ನಡ ಪ್ರಭ ದಿನಾಂಕ : 02-04-2019 ಮಂಗಳವಾರ ಪುಟ-02

**ಶಿಕ್ಷಕರಿಗೆ ಸಲಹೆ** ಕುಮದ್ವತಿ ಮಹಾವಿದ್ಯಾಲಯದಲ್ಲಿ ಭಾಷಾ ಸಂಘದ ಉದ್ಘಾಟನೆ, ಶಿಕ್ಷಣದಲ್ಲಿ ನಾಟಕ ಕಲೆಯ ಪ್ರಾತ್ಯಕ್ಷಿಕೆ

# ಶಿಕ್ಷಕನಿಗೆ ರಂಗಕಲೆಯೂ ಅಗತ್ಯ: ಡಾ.ಗುರುಪ್ರಸಾದ್

• ಕನ್ನಡಪ್ರಭ ವಾರ್ತೆ ಶಿಕಾರಿಪುರ

ಶಿಕ್ಷಕ ಶಿಕ್ಷಣವನ್ನು ಕಲೆಯ ರೀತಿ ಆಸ್ವಾದಿಸಿ ವಿದ್ಯಾರ್ಥಿಗಳಿಗೆ ಧನಾತ್ಮಕ ವಿಚಾರಧಾರೆಯನ್ನು ಮೂಡಿಸಿದಾಗ ಮಾತ್ರ ಶಿಕ್ಷಣ ಹೆಚ್ಚು ಪರಿಣಾಮ ಕಾರಿಯಾಗಲು ಸಾಧ್ಯ ಎಂದು ಶಿರಾಳಕೊಪ್ಪದ ಕದಂಬ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕ ಡಾ.ಗುರುಪ್ರಸಾದ್ ಟಿ.ಆರ್ ಅಭಿಪ್ರಾಯಪಟ್ಟರು.

ಸೋಮವಾರ ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಐಕ್ಯೂಎಸಿ ಹಾಗೂ ಭಾಷಾ ಸಂಘ 2018-19, ಸಿರಿಯಾಳ ಕಲಾ ಕೇಂದ್ರಗಳ ಆಶ್ರಯದಲ್ಲಿ ಹಮ್ಮಿಕೊಳ್ಳಲಾದ ಭಾಷಾ ಸಂಘದ ಉದ್ಘಾಟನೆ, ಶಿಕ್ಷಣದಲ್ಲಿ ನಾಟಕ ಕಲೆಯ ಪ್ರಾತ್ಯಕ್ಷಿಕೆ ಹಾಗೂ ವಿಶೇಷ ಉಪನ್ಯಾಸ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.



ಶಿಕಾರಿಪುರದ ಕುಮದ್ವತಿ ವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು.

ಪ್ರಸ್ತುತ ತಂತ್ರಜ್ಞಾನದ ಭರಾಟೆ ಶಿಕ್ಷಣ ವ್ಯವಸ್ಥೆಯಲ್ಲಿಯೂ ತನ್ನ ಪರಿಣಾಮ ಬೀರಿದೆ. ಶಿಕ್ಷಕನಿಲ್ಲದ ಶಿಕ್ಷಣ ಕಲ್ಪನೆಯನ್ನು ಮೀರಿದೆ. ಶಿಕ್ಷಕ ಕಲಾವಿದನಾದಾಗ ಶಿಕ್ಷಣ ಕಲೆಯಾಗಿ ಪರಿಣಮಿಸುತ್ತದೆ. ಯಾವುದೇ ಹಂತದಲ್ಲಿ ಶಿಕ್ಷಕ ವಿದ್ಯಾರ್ಥಿಗಳ ಮನಸ್ಸಿನ ಮೇಲೆ ಧನಾತ್ಮಕ ವಿಚಾರಧಾರೆಯನ್ನು ಮೂಡಿಸಬೇಕಾಗುತ್ತದೆ. ಜೀವನದ ಅನುಭವಗಳನ್ನು ಜ್ಞಾನವನ್ನಾಗಿಸಿಕೊಂಡು ಅರ್ಥೈಸಿದಾಗ ಉತ್ತಮ ಕಲಿಕೆಯುಂಟಾಗುತ್ತದೆ. ಈ ದಿಸೆಯಲ್ಲಿ ನಾಟಕ ಅಥವಾ ರಂಗ ಕಲೆಯ ಸ್ಪರ್ಶವಿದ್ದಲ್ಲಿ ಶಿಕ್ಷಣ ಹೆಚ್ಚು ಪರಿಣಾಮಕಾರಿಯಾಗಿರಲು ಸಾಧ್ಯವಾಗುತ್ತದೆ ಎಂದರು.

ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್ ಗದಗ್ ಮಾತನಾಡಿ, ಶಿಕ್ಷಕನಾಗ ಬಯಸುವವನಲ್ಲಿ ನೈಪುಣ್ಯತೆ ಮತ್ತು ನೈಜತೆಯ ಮನೋಭಾವವಿರಬೇಕು. ನೈಪುಣ್ಯತೆಯು ಅನುಭವದಿಂದ ಬರುತ್ತದೆ. ಪ್ರತಿ ವೃತ್ತಿಗೆ ಅದರದ್ದೇ ಆದ ನೈತಿಕತೆ ಇರುತ್ತದೆ. ಕಲಿಕೆ ಶಾಶ್ವತವಾಗಿ ನೆನಪಿನಲ್ಲಿರಲು ಪರಿಣಾಮಕಾರಿಯಾಗಿ ಬೋಧನೆ ಮಾಡಬೇಕು.

ಅದಕ್ಕಾಗಿ ಶಿಕ್ಷಕನು ವಿವಿಧ ರೀತಿಯ ಕೌಶಲಗಳನ್ನು ರೂಢಿಸಿಕೊಳ್ಳಬೇಕು ಎಂದು ಆಶಯ ವ್ಯಕ್ತಪಡಿಸಿದರು.

ಪ್ರಾಚಾರ್ಯರಾದ ಡಾ. ಜಯಶ್ರೀ ಮಾತನಾಡಿ, ಶಿಕ್ಷಕರಲ್ಲಿ ಶ್ರದ್ಧೆ ಇರಬೇಕು. ಶಿಕ್ಷಕರ ಜ್ಞಾನದ ಮಟ್ಟ ಹೆಚ್ಚಾದ ಹಾಗೆ ದೇಶದ ಅಭಿವೃದ್ಧಿ ಸಾಧ್ಯ ಎಂಬ ಪ್ರತೀತಿಯಿದ್ದು ಈ ದೃಷ್ಟಿಯಲ್ಲಿ ಎಲ್ಲ ಶಿಕ್ಷಕರ ಗಮನ ಜ್ಞಾನ ಸಂಪಾದನೆಯ ದಿಸೆಯಲ್ಲಿ ಸಾಗಬೇಕು ಎಂದು ತಿಳಿಸಿದರು.

ಪ್ರಾಧ್ಯಾಪಕ ಡಾ. ವೀರೇಂದ್ರ ಕುಮಾರ ಪಾಲಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಶಿಕ್ಷಣಾರ್ಥಿ ನಳಿನಾ ಪ್ರಾರ್ಥಿಸಿ, ಶಿವಕುಮಾರ ಸ್ವಾಗತಿಸಿ, ಗಿರೀಶ ನಿರೂಪಿಸಿ, ದಾಕ್ಷಾಯಿಣಿ ಕಾಗೇರ ವಂದಿಸಿದರು.

ಸಂಯುಕ್ತ ಕರ್ನಾಟಕ ದಿನಾಂಕ : 04-03-2019 ಸೋಮವಾರ ಪುಟ-03

# ಪ್ರಜಾಪ್ರಭುತ್ವ ಉಳಿವಿಗೆ ಚುನಾವಣೆ ಭದ್ರ ಬುನಾದಿ

ಸಂ.ಕ.ಸಮಾಚಾರ ಶಿಕಾರಿಪುರ

ಕಟ್ಟಡಕ್ಕೆ ಅಡಿಪಾಯ ಹೇಗೆ ಮುಖ್ಯವೋ ಹಾಗೆಯೆ ದೇಶದ ಪ್ರಜಾಪ್ರಭುತ್ವ ಉಳಿವಿಗೆ ಜನಮತ ಸಂಗ್ರಹಣೆ, ಚುನಾವಣೆ ಭದ್ರ ಬುನಾದಿಯಾಗಿದೆ ಎಂದು ಜಿಲ್ಲಾಧಿಕಾರಿ ಕೆ.ಎ.ದಯಾನಂದ್ ಹೇಳಿದರು.

ಪಟ್ಟಣದಲ್ಲಿ ಕಾಲೇಜು ಶಿಕ್ಷಣ ಇಲಾಖೆ, ತಾಲೂಕು ಆಡಳಿತ, ಸರಕಾರಿ ಪದವಿ ಕಾಲೇಜು, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ್ದ ಯುವ ಮತದಾರರ ನೋಂದಣಿ, ಮತದಾನ ಜಾಗೃತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಪ್ರಜೆಗಳು ತಮಗೆ ಬೇಕಾದ ಉತ್ತಮ ಆಡಳಿತಗಾರನ ಆಯ್ಕೆಗೆ ಪ್ರಜಾಪ್ರಭುತ್ವ ಅವಕಾಶ ಕಲ್ಪಿಸಿದೆ ಅದರ ಸದ್ಬಳಕೆ ಮಾಡಿಕೊಳ್ಳಲು ಯುವಜನತೆ ಮುಂದಾಗಬೇಕು ಎಂದರು.

ಮತದಾನಕ್ಕೆ 18ವರ್ಷ ಪೂರೈಸಿದ ಯುವಜನತೆ ತಮ್ಮ ಹೆಸರನ್ನು ಮತದಾರ ಪಟ್ಟಿಯಲ್ಲಿ ನೋಂದಾಯಿಸಿಕೊಳ್ಳಬೇಕು. ಚುನಾವಣೆ ಸಂದರ್ಭದಲ್ಲಿ ಪ್ರತಿಯೊಬ್ಬರೂ ಕಡ್ಡಾಯ ಮತದಾನ ಮಾಡಬೇಕು ಎಂದರು.

ಜಿ.ಪಂ. ಸಿಇಒ ಶಿವರಾಮೇಗೌಡ ಮಾತನಾಡಿ, ಒಂದು ದೇಶದ ಪ್ರಗತಿ ಆ ದೇಶ ಹೊಂದಿದ ಸಂವಿಧಾನ ಪ್ರತಿನಿಧಿಸುತ್ತದೆ. ಸಂವಿಧಾನ ಇಲ್ಲಿನ ಪ್ರಜೆಗಳಿಗೆ ಹಕ್ಕು, ಕರ್ತವ್ಯ ನೀಡಿದೆ, ಯುವ ಜನತೆ ತಮ್ಮ ಹಕ್ಕನ್ನು ಮಾತ್ರ ಪ್ರತಿಪಾದಿಸುವುದು ಹೆಚ್ಚಾಗಿದೆ ಎಂದರು.

ರಾಷ್ಟ್ರೀಯ ಚೆಸ್ ಆಟಗಾರ ಸ್ಟ್ಯಾನಿ ಜಾರ್ಜ್, ಕಾಲೇಜು ಶಿಕ್ಷಣ ಇಲಾಖೆ ಅಧಿಕಾರಿ ವೇಣುಗೋಪಾಲ್, ಕುಮದ್ವತಿ ಶಿಕ್ಷಕ ತರಬೇತಿ ಸಂಸ್ಥೆ ಪ್ರಾಚಾರ್ಯೆ ವಿ.ಆರ್.ಜಯಶ್ರೀ, ಸರಕಾರಿ ಪದವಿ ಕಾಲೇಜು ಪ್ರಾಂಶುಪಾಲ ಜಿ.ಆರ್.ಹೆಗಡೆ, ತಹಸೀಲ್ದಾರ್ ಕೆ.ವಿ.ಕವಿರಾಜ್, ತಾ.ಪಂ. ಇಒ ಆನಂದಕುಮಾರ್, ಉಪನ್ಯಾಸಕ ವೈದೇವರಾಜ್, ಅಕ್ಷತಾ, ನಾಗೇಂದ್ರಪ್ಪ, ಎಚ್.ರವಿ ಮತ್ತಿತರರು ಇದ್ದರು.



ಶಿಕಾರಿಪುರದಲ್ಲಿ ನಡೆದ ಮತದಾರರ ನೋಂದಣಿ, ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮತಯಂತ್ರ ಬಳಕೆ ಕುರಿತು ಜಿಲ್ಲಾಧಿಕಾರಿ ಕೆ.ಎ.ದಯಾನಂದ ತರಬೇತಿ ನೀಡಿದರು.

ವಿಜಯ ಕರ್ನಾಟಕ ದಿನಾಂಕ : 23-05-2019 ಗುರುವಾರ ಪುಟ-04

# ಆರೋಗ್ಯಕ್ಕೆ ಆದ್ಯತೆ ನೀಡಿ:ಪ್ರಮೋದ್

■ ವಿಕ ಸುದ್ದಿಲೋಕ ಶಿಕಾರಿಪುರ

ಉತ್ತಮ ಆರೋಗ್ಯಕ್ಕೆ ಒತ್ತಡ ರಹಿತ ಜೀವನ ನಿರ್ವಹಣೆ ಅಗತ್ಯ ಎಂದು ಡಾ.ಪ್ರಮೋದ್ ಹೇಳಿದರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಸಾರ್ವಜನಿಕ ಆಸ್ಪತ್ರೆ, ನಾಗರಿಕ ಸಹಾಯವಾಣಿ ಕೇಂದ್ರ, ಉದ್ಭವ್ ಶೈಕ್ಷಣಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ, ಯುವ ರೆಡ್‌ಕ್ರಾಸ್ ಘಟಕ, ಐಕ್ಯೂಎಸಿ ಸಹಯೋಗದಲ್ಲಿ ನಡೆದ ವೈದ್ಯಕೀಯ ತಪಾಸಣೆ, ಆಪ್ತ ಸಮಾಲೋಚನೆ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಬ್ಬ ವ್ಯಕ್ತಿಗೆ ಆರೋಗ್ಯ ಬಹುಮುಖ್ಯ, ಯಾವುದೇ ಕೆಲಸ ಸರಿಯಾಗಿ ನಿರ್ವಹಿಸಬೇಕಾದರೆ ಯೋಜನೆ ರೂಪಿಸಿಕೊಳ್ಳಬೇಕು, ಸಮಯ ಹೊಂದಾಣಿಕೆ ಮಾಡಿಕೊಳ್ಳಬೇಕು. ಸೂಕ್ತ ತಯಾರಿ ಮಾಡಿಕೊಳ್ಳಬೇಕು. ದಿನದ 24ಗಂಟೆಯೂ ಮಾನಸಿಕ ಸಮತೋಲನ ಕಾಯ್ದುಕೊಳ್ಳಲು ಪ್ರಯತ್ನಿಸಬೇಕು. ಇದಕ್ಕಾಗಿ ಸಹಜ ದೈನಂದಿನ ಕೆಲಸ, ಮನರಂಜನೆ, ಯೋಗ, ಧ್ಯಾನ, ತಾಳ್ಮೆಯಂತ ಅಂಶ ಕಡ್ಡಾಯವಾಗಿ ಪಾಲಿಸಬೇಕೆಂದರು.

ನಾಗರೀಕ ಸಹಾಯವಾಣಿ ವ್ಯವಸ್ಥಾಪಕ ಎಂ.ಮಂಜಪ್ಪ ಮಾತನಾಡಿ, ಮನುಷ್ಯನ ಅಸ್ತಿತ್ವವು ಸದೃಢ ಆರೋಗ್ಯ ಅವಲಂಬಿಸಿದೆ. ಪ್ರತಿಯೊಬ್ಬರೂ ತಮ್ಮ ಆರೋಗ್ಯದ ಕಡೆ ಗಮನ ನೀಡಬೇಕು, ಒತ್ತಡ ನಿವಾರಣೆಗೆ ಸರಳ ಪರಿಹಾರ ಕಂಡುಕೊಳ್ಳಬೇಕೆಂದರು.

ಪ್ರಾಂಶುಪಾಲರಾದ ಡಾ. ವಿ.ಆರ್.ಜಯಶ್ರೀ ಮಾತನಾಡಿ, ಪ್ರತಿಯೊಬ್ಬರಲ್ಲಿ ಸ್ವಯಂ ಭರವಸೆ, ವಿಶ್ವಾಸ ರೂಢಿಯಾಗಬೇಕು. ಆಗ ಮಾತ್ರ ಸಹಜವಾಗಿ ಆರೋಗ್ಯವೃದ್ಧಿಯಾಗಿ ಉತ್ತಮ ಜೀವನ ನಡೆಸಲು ಸಾಧ್ಯ ಎಂದರು. ಆಪ್ತ ಸಮಾಲೋಚಕ ಹರೀಶ್, ಕೀರ್ತಿ ಪ್ರಶಿಕ್ಷಣಾರ್ಥಿಗಳಿಗೆ ಸಮಾಲೋಚನೆಯೊಂದಿಗೆ ಒತ್ತಡ ರಹಿತ ವ್ಯಕ್ತಿತ್ವಕ್ಕೆ ಸಲಹೆ ನೀಡಿದರು. ನಾಗರೀಕ ಸಹಾಯವಾಣಿ, ಕಾಲೇಜಿನ ಬೋಧಕ, ಬೋಧಕೇತರ ಸಿಬ್ಬಂದಿ ಇದ್ದರು.



ಶಿಕಾರಿಪುರದ ಕುಮದ್ವತಿ ಬಿಎಡ್ ಕಾಲೇಜಿನ ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ, ಆಪ್ತ ಸಮಾಲೋಚನೆ ನಡೆಸಲಾಯಿತು.

ಕನ್ನಡ ಪ್ರಭ ದಿನಾಂಕ : 08-06-2019 ಶನಿವಾರ ಪುಟ-04

# ವಿದ್ಯಾರ್ಥಿಗಳಲ್ಲಿ ಸೃಜನಶೀಲ ಮನೋಭಾವ ರೂಢಿಯಾಗಲಿ: ಪ್ರೊ.ಗದಗ್ ಅಭಿಮತ

• ಕನ್ನಡಪ್ರಭ ವಾರ್ತೆ ಶಿಕಾರಿಪುರ

ಸೃಜನಶೀಲ ಮನೋಭಾವ ವಿದ್ಯಾರ್ಥಿಗಳಲ್ಲಿ ರೂಢಿಯಾಗಬೇಕು ಎಂದುಕುಮದ್ವತಿಶಿಕ್ಷಣಮಹಾವಿದ್ಯಾಲಯದಶೈಕ್ಷಣಿಕಸಲಹೆಗಾರ ಪ್ರೊ.ಎಸ್.ಎಸ್ ಗದಗ್ ಅಭಿಪ್ರಾಯಪಟ್ಟರು.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ 'ಕವಿಮನೆ ಯಾನ' ಸಾಕ್ಷ್ಯಚಿತ್ರ ಬಿಡುಗಡೆ ಹಾಗೂ ಪ್ರಶಿಕ್ಷಣಾರ್ಥಿಗಳ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರು, 21ನೇ ಶತಮಾನದಲ್ಲಿ ತಂತ್ರಜ್ಞಾನ ಹೆಚ್ಚು ಮುಂದುವರಿದಿದ್ದು ಮನುಷ್ಯ ಸಹಜವಾಗಿ ಹಲವಾರು ಸನ್ನಿವೇಶಗಳಲ್ಲಿ ತಂತ್ರಜ್ಞಾನದ ಬಳಕೆ ಮಾಡಿಕೊಂಡು ತಮ್ಮ ಅಗತ್ಯತೆಯನ್ನು ಪೂರೈಸಿಕೊಳ್ಳುತ್ತಿರುವುದು ಸ್ವಾಗತಾರ್ಹ. ಇದಕ್ಕೆ ಪೂರಕವಾಗಿ ಕುವೆಂಪು ಅವರ ಕುಪ್ಪಳ್ಳಿ, ಕವಿಶೈಲಗಳ ಕುರಿತು ಅನೇಕ ಸಾಕ್ಷ್ಯಚಿತ್ರಗಳು ಈಗಾಗಲೇ ರಚನೆಯಾಗಿದ್ದರೂ ಸೃಜನಶೀಲತೆಯನ್ನು ಬಳಸಿ ಹೊಸ ರೂಪದ 'ಕವಿಮನೆ ಯಾನ' ಎಂಬ ಶೀರ್ಷಿಕೆಯಲ್ಲಿ ಭಿನ್ನವಾದ ಸಾಕ್ಷ್ಯಚಿತ್ರ ತಯಾರಿಸಿರುವುದು ಶೈಕ್ಷಣಿಕವಾಗಿ ಹೆಚ್ಚು ಮಹತ್ವವನ್ನು ಪಡೆಯುತ್ತದೆ. ಯಾವುದೇ ಕಾರ್ಯ ಸಫಲತೆ ಕಾಣಬೇಕಾದರೆ ಶ್ರಮವಹಿಸಿ ನಿರ್ವಹಿಸಿದಾಗ ಅದಕ್ಕೊಂದು ಮೌಲ್ಯ ದೊರೆಯುತ್ತದೆ. ಅಂತಹ ಕಾರ್ಯವೆಸಗಿದ ಕಾಲೇಜಿನ ಪ್ರಾಚಾರ್ಯರಿಗೆ, ಭಾಷಾ ಸಂಘದ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದರು.

ಪ್ರಾಚಾರ್ಯರಾದ ಡಾ. ಜಯಶ್ರೀ.ಮಾತನಾಡಿ, ಕನ್ನಡ ನಾಡಿನ ಹೆಮ್ಮೆಯ ಕವಿ ಎಂದು ಖ್ಯಾತರಾದ ಕುವೆಂಪುರವರ ಬರಹಗಳ ಬಗ್ಗೆ ಎಳೆಎಳೆಯಾಗಿಅಧ್ಯಯನನಡೆಯುತ್ತಿರುವಪ್ರಸ್ತುತಸಂದರ್ಭದಲ್ಲಿ ಹೊಸ ಪ್ರಯತ್ನವಾಗಿ 'ಕವಿಮನೆ ಯಾನ' ಸಾಕ್ಷ್ಯಚಿತ್ರ ತಯಾರಿಸಿರುವುದು ಪ್ರಶಂಸನೀಯ ಮತ್ತು ಮಾದರಿಯಾಗಿದೆ ಎಂದರು.

ಸಾಕ್ಷ್ಯಚಿತ್ರವನ್ನು ಸಿದ್ದಗೊಳಿಸಿದ ಸಾತ್ವಿಕ್ ಎಸ್. ಪಾಟೀಲ್‌ಗೆ ಭಾಷಾಸಂಘದ ವತಿಯಿಂದ ಸನ್ಮಾನಿಸಲಾಯಿತು. ಕಾಲೇಜಿನ ಸಹಾಯಕಪ್ರಾಧ್ಯಾಪಕರು, ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಾಸ್ತಾವಿಕವಾಗಿ ಪ್ರಾಧ್ಯಾಪಕ ರವಿ ಎಚ್ ಮಾತನಾಡಿದರು. ಪ್ರಶಿಕ್ಷಣಾರ್ಥಿ ಅಶ್ವಿನಿ ಮತ್ತು ಸುಮಿತ್ರ ಪ್ರಾರ್ಥಿಸಿ ಸುಮ ಸ್ವಾಗತಿಸಿ, ಫಸೀಹಾ ಕೌಸರ್ ನಿರೂಪಿಸಿ, ಶ್ರೀಧರನಾಯ್ಕ ವಂದಿಸಿದರು.



ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾಸಂಘ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ 'ಕವಿಮನೆ ಯಾನ' ಸಾಕ್ಷ್ಯಚಿತ್ರ ಬಿಡುಗಡೆ ಮಾಡಲಾಯಿತು.

ಹೊಸದಿಗಂತ ದಿನಾಂಕ : 08-06-2019 ಶನಿವಾರ ಪುಟ-02

## ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್ ಅಭಿಪ್ರಾಯ

# ಸೃಜನಶೀಲತೆ ವಿದ್ಯಾರ್ಥಿಗಳಲ್ಲಿ ರೂಢಿಯಾಗಬೇಕು



ಶಿಕಾರಿಪುರ : ಸೃಜನಶೀಲತ ಮನೋಭಾವ ವಿದ್ಯಾರ್ಥಿಗಳಲ್ಲಿ ರೂಢಿಯಾಗಬೇಕು ಎಂದು ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್ ಅಭಿಪ್ರಾಯಪಟ್ಟರು.

ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಭಾಷಾ ಸಂಘ ಹಾಗೂ ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಕವಿಮನೆ ಯಾನ ಸಾಕ್ಷ್ಯಚಿತ್ರ ಬಿಡುಗಡೆ ಹಾಗೂ ಪ್ರಶಿಕ್ಷಣಾರ್ಥಿಗಳಿಗಾಗಿ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಸಾಕ್ಷ್ಯಚಿತ್ರ ಬಿಡುಗಡೆಗೊಳಿಸಿ ಮಾತನಾಡಿದರು.

21ನೇ ಶತಮಾನದಲ್ಲಿ ತಂತ್ರಜ್ಞಾನ ಹೆಚ್ಚು ಮುಂದುವರೆದಿದೆ. ಮನುಷ್ಯ ಸಹಜವಾಗಿ ಹಲವಾರು ಸನ್ನಿವೇಶಗಳಲ್ಲಿ ತಂತ್ರಜ್ಞಾನದ ಬಳಕೆ ಮಾಡಿಕೊಂಡು ತಮ್ಮ ಅಗತ್ಯತೆಯನ್ನು ಪೂರೈಸಿ ಕೊಳ್ಳುತ್ತಿರುವುದು ಸ್ವಾಗತಾರ್ಹ. ಇದಕ್ಕೆ ಪೂರಕವಾಗಿ ಕುವೆಂಪು ಅವರ ಕುಪ್ಪಳ್ಳಿ, ಕವಿಶೈಲಗಳ ಕುರಿತು ಅನೇಕ ಸಾಕ್ಷ್ಯಚಿತ್ರಗಳು ಈಗಾಗಲೇ ರಚನೆಯಾಗಿದ್ದರೂ ಸೃಜನಶೀಲತೆಯನ್ನು ಬಳಸಿ ಹೊಸ ರೂಪದ ಕವಿ ಮನೆ ಯಾನ ಎಂಬ ಶೀರ್ಷಿಕೆಯಲ್ಲಿ ಭಿನ್ನವಾದ ಸಾಕ್ಷ್ಯಚಿತ್ರ ತಯಾರಿಸಿರುವುದು ಶೈಕ್ಷಣಿಕವಾಗಿ ಹೆಚ್ಚು ಮಹತ್ವವನ್ನು ಪಡೆಯುತ್ತದೆ. ಯಾವುದೇ ಕಾರ್ಯ ಸಫಲತೆಯನ್ನು ಕಾಣಬೇಕಾದರೆ ಶ್ರಮ ವಹಿಸಿ ನಿರ್ವಹಿಸಿದಾಗ ಅದಕ್ಕೊಂದು ಮೌಲ್ಯ ದೊರೆಯುತ್ತದೆ. ಅಂತಹ ಕಾರ್ಯವೆಸಗಿದ ಕಾಲೇಜಿನ ಪ್ರಾಚಾರ್ಯರಿಗೆ, ಭಾಷಾ ಸಂಘದ ಸದಸ್ಯರಿಗೆ ಅಭಿನಂದನೆ ಸಲ್ಲಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯೆ ಡಾ. ಜಯಶ್ರೀ ವಿ.ಆರ್. ಮಾತನಾಡಿ, ಕನ್ನಡ ನಾಡಿನ ಹೆಮ್ಮೆಯ ಕವಿ ಎಂದು ಖ್ಯಾತರಾದ ಕುವೆಂಪು ಅವರ ಬರಹಗಳ ಬಗ್ಗೆ ಎಳೆ ಎಳೆಯಾಗಿ ಅಧ್ಯಯನ ನಡೆಯುತ್ತಿರುವ ಪ್ರಸ್ತುತ ಸಂದರ್ಭದಲ್ಲಿ ಹೊಸ ಪ್ರಯತ್ನವಾಗಿ ಕವಿಮನೆಯಾನ ಸಾಕ್ಷ್ಯಚಿತ್ರ ತಯಾರಿಸಿರುವುದು ಪ್ರಶಂಸನೀಯ ಮತ್ತು ಮಾದರಿಯಾಗಿದೆ ಎಂದರು.

ಸಾಕ್ಷ್ಯಚಿತ್ರವನ್ನು ಸಿದ್ಧಗೊಳಿಸಿದ ಸಾತ್ವಿಕ್ ಎಸ್. ಪಾಟೀಲ್ ಅವರಿಗೆ ಭಾಷಾ ಸಂಘದ ವತಿಯಿಂದ ಸನ್ಮಾನಿಸಲಾಯಿತು. ಕಾಲೇಜಿನ ಸಹಾಯಕ ಪ್ರಾಧ್ಯಾಪಕರು, ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು. ಪ್ರಾಧ್ಯಾಪಕ ರವಿ ಎಚ್. ಪ್ರಾಸ್ತಾವಿಕವಾಗಿ ಮಾತನಾಡಿದರು. ಪ್ರಶಿಕ್ಷಣಾರ್ಥಿ ಅಶ್ವಿನಿ ಮತ್ತು ಸುಮಿತ್ರ ಪ್ರಾರ್ಥಿಸಿ, ಸುಮಾ ಸ್ವಾಗತಿಸಿದರು. ಫಸೀಹಾ ಕೌಸರ್ ನಿರೂಪಿಸಿ ಶ್ರೀಧರ ನಾಯ್ಕ ವಂದಿಸಿದರು.

ವಿಜಯವಾಣಿ ದಿನಾಂಕ : 11-06-2019 ಮಂಗಳವಾರ ಪುಟ-05

# ಹೊಸತಿನ ಕಡೆಗೆ ಹೆಜ್ಜೆ ಹಾಕೋಣ

## ತಂತ್ರಜ್ಞಾನ ಬಳಸಿ ಅನ್ವೇಷಣೆಯತ್ತ ಮುಖ ಮಾಡಿ | ಪ್ರೊ. ಗದಗ ಸಲಹೆ

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ಸಹೃದಯತೆ ಮತ್ತು ಸೃಜನಶೀಲತೆಗಳ ಅಗತ್ಯ ಇಂದಿನ ವಿದ್ಯಾರ್ಥಿಗಳಿಗೆ ಹೆಚ್ಚಿದೆ. ನಾವು ವಿಶಾಲ ಮನೋಭಾವನೆಯಿಂದ ಜಗತ್ತನ್ನು ನೋಡಬೇಕು. ಆಗ ಜಗತ್ತು ಸುಂದರವಾಗಿ ಕಾಣುತ್ತದೆ ಎಂದು ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ ಹೇಳಿದರು.

» ನಮ್ಮನ್ನು ಎತ್ತರಕ್ಕೆ ಕೊಂಡೊಯ್ಯುವ ಹೊಸ ಚಿಂತನೆಗಳು

ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಭಾಷಾ ಸಂಘ, ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡ 'ಕವಿಮನೆಯಾನ' ಸಾಕ್ಷ್ಯಚಿತ್ರ ಬಿಡುಗಡೆ ಹಾಗೂ ಪ್ರಶಿಕ್ಷಣಾರ್ಥಿಗಳ ರಸಪ್ರಶ್ನೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಾವು ಹೊಸತಿನ ಕಡೆಗೆ ಹೆಜ್ಜೆ ಹಾಕಬೇಕು. ಹೊಸಚಿಂತನೆಗಳು ನಮ್ಮನ್ನು ಎತ್ತರಕ್ಕೆ ಕರೆದುಕೊಂಡು ಹೋಗುತ್ತವೆ. ನಾವು ಮುಂದುವರಿದ ತಂತ್ರಜ್ಞಾನ ಬಳಕೆ ಮಾಡಿಕೊಂಡು ಅನ್ವೇಷಣೆಯತ್ತ ಮುಖ ಮಾಡಬೇಕು. ಇಂದು ಬಿಡುಗಡೆಯಾಗಿರುವ ಸಾಕ್ಷ್ಯಚಿತ್ರ 'ಕವಿಮನೆಯಾನ' ಅತ್ಯಂತ ಸಂವೇದನಾಶೀಲತೆಯನ್ನು ಉಳಿಸಿಕೊಂಡು ಹೊಸತನದಲ್ಲಿ ವಿಶೇಷವಾಗಿ ಮೂಡಿಬಂದಿದೆ. ಸೃಜನಾತ್ಮಕ ಮನಸ್ಸುಗಳಿಂದ ಮಾತ್ರ ಇಂತಹ ಪ್ರಯತ್ನ ಸಾಧ್ಯ. ಇದಕ್ಕೆ ಒಮ್ಮನಸಿನ ಅಗತ್ಯವಿದೆ. ಸಾತ್ವಿಕ್ ಎಸ್.ಪಾಟೀಲ್ ಅವರ ಶ್ರದ್ಧೆ, ಪರಿಶ್ರಮ ಈ 'ಕವಿಮನೆಯಾನ' ಸಾಕ್ಷ್ಯಚಿತ್ರದಲ್ಲಿ ಕಂಡುಬರುತ್ತಿದೆ ಎಂದು ಹೇಳಿದರು.

> ರಾಷ್ಟ್ರಕವಿ ಕುವೆಂಪು ಅವರು ಮಲೆನಾಡು ಕಂಡ ಅದ್ಭುತವಾದ ಅಭಿಮಾನದ ಕವಿ. ಅವರ ಬಗ್ಗೆ ನಿರಂತರವಾಗಿ ಅಧ್ಯಯನಗಳು ನಡೆಯುತ್ತಿವೆ. ಇದೊಂದು ಪ್ರಯತ್ನ ಕೂಡ ಪೂರಕವಾಗಿದೆ.
>
> | ಪ್ರೊ. ಎಸ್.ಎಸ್.ಗದಗ
> ಶೈಕ್ಷಣಿಕ ಸಲಹೆಗಾರ

ಪ್ರಾಚಾರ್ಯೆ ಡಾ.ಜಯಶ್ರೀ ಮಾತನಾಡಿ, ಕವಿಮನೆಯಾನ ಸಾಕ್ಷ್ಯಚಿತ್ರದಲ್ಲಿ ಕಾರ್ಯಶೀಲತೆ, ಕಳಕಳಿ ಎದ್ದುಕಾಣುತ್ತಿದೆ. ನಮ್ಮ ಕಾರ್ಯ ನಮ್ಮ ದೃಷ್ಟಿಕೋನವನ್ನು ತೋರಿಸುತ್ತದೆ. ಈ ಪ್ರಯತ್ನ ಅದ್ಭುತವಾಗಿದೆ. ನಾವು ಗುರಿಯಿಲ್ಲದೆ ಯಾವ ಕಾರ್ಯವನ್ನೂ ಮಾಡಬಾರದು. ಪ್ರಯತ್ನಗಳು ಮುಂದಿನ ಯಶಸ್ಸಿಗೆ ದಾರಿಯಾಗಲಿದೆ. ಸಾಧನೆಯಿಂದ ಮಾತ್ರ ನಮಗೆ ಯಶಸ್ಸು ಎಂದರು. ಸಾಕ್ಷ್ಯಚಿತ್ರದ ರೂವಾರಿ ಸಾತ್ವಿಕ್ ಎಸ್.ಪಾಟೀಲ್ ಅವರನ್ನು ಗೌರವಿಸಲಾಯಿತು. ಪ್ರಾಧ್ಯಾಪಕ ಎಚ್.ರವಿ ಪ್ರಾಸ್ತಾವಿಕವಾಗಿ ಮಾತನಾಡಿದರು. ಸಹ ಪ್ರಾಧ್ಯಾಪಕರು, ವಿದ್ಯಾರ್ಥಿಗಳು ಹಾಜರಿದ್ದರು.

ಕನ್ನಡ ಪ್ರಭ ದಿನಾಂಕ : 22–05–2019 ಬುಧವಾರ ಪುಟ–02

# ಒತ್ತಡ ರಹಿತ ಜೀವನಕ್ಕೆ ಒತ್ತು ಕೊಡಿ: ಪ್ರಮೋದ್



ಕುಮದ್ವತಿ ವಿದ್ಯಾಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಪ್ರಮೋದ್ ಮಾತನಾಡಿದರು.

ಶಿಕಾರಿಪುರ: ಉತ್ತಮ ಆರೋಗ್ಯಕ್ಕೆ ಒತ್ತಡ ರಹಿತ ಜೀವನ ನಿರ್ವಹಣೆ ಅಗತ್ಯ ಎಂದು ಸಾರ್ವಜನಿಕ ಆಸ್ಪತ್ರೆಯ ತಜ್ಞವೈದ್ಯ ಡಾ. ಪ್ರಮೋದ್ ಅಭಿಪ್ರಾಯಪಟ್ಟರು.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಸಾರ್ವಜನಿಕ ಆಸ್ಪತ್ರೆ ಹಾಗೂ ನಾಗರೀಕ ಸಹಾಯವಾಣಿ ಕೇಂದ್ರ, ಉದ್ಭವ್ ಶೈಕ್ಷಣಿಕ ಮತ್ತು ಗ್ರಾಮೀಣಾಭಿವೃದ್ಧಿ ಸಂಸ್ಥೆ ಬೆಂಗಳೂರು, ಯುವ ರೆಡ್‌ಕ್ರಾಸ್ ಘಟಕ ಮತ್ತು ಐಕ್ಯೂಎಸಿ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಪ್ರಶಿಕ್ಷಣಾರ್ಥಿಗಳಿಗೆ ವೈದ್ಯಕೀಯ ತಪಾಸಣಾ ಮತ್ತು ಆಪ್ತಸಮಾಲೋಚನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ದೈನಿಂದಿನ ಕೆಲಸಗಳನ್ನು ಸಮರ್ಪಕವಾಗಿ ನಿರ್ವಹಿಸಬೇಕಾದರೆ ಯೋಜನೆಯನ್ನು ರೂಪಿಸಿಕೊಳ್ಳಬೇಕು. ಸಮಯ ಹೊಂದಾಣಿಕೆ ಮಾಡಿಕೊಳ್ಳಬೇಕು, ಸೂಕ್ತ ತಯಾರಿ ಮಾಡಿಕೊಳ್ಳಬೇಕು. ದಿನದ 24 ಗಂಟೆಗಳಲ್ಲಿ ಮಾನಸಿಕ ಸಮತೋಲನಕ್ಕೆ ಪ್ರಯತ್ನಿಸಬೇಕು. ಅದಕ್ಕಾಗಿ ಮನರಂಜನೆ, ಯೋಗ, ಧ್ಯಾನ ಅಳವಡಿಸಿಕೊಳ್ಳಬೇಕೆಂದರು.

ನಾಗರೀಕ ಸಹಾಯವಾಣಿಯ ವ್ಯವಸ್ಥಾಪಕ ಮಂಜಪ್ಪ ಮಾತನಾಡಿ, ಆರೋಗ್ಯವೇ ಭಾಗ್ಯ ಎಂಬಂತೆ ಮನುಷ್ಯನ ಅಸ್ತಿತ್ವ ಸದೃಢ ಆರೋಗ್ಯವನ್ನು ಅವಲಂಬಿಸಿದೆ. ಪ್ರತಿಯೊಬ್ಬರು ತಮ್ಮಲ್ಲಿನ ಒತ್ತಡವನ್ನು ನಿವಾರಣೆ ಮಾಡಿಕೊಳ್ಳಲು ಪ್ರಯತ್ನಿಸಬೇಕು ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಚಾರ್ಯರಾದ ಡಾ. ಜಯಶ್ರೀ ಮಾತನಾಡಿ, ಪ್ರತಿಯೊಬ್ಬರಲ್ಲಿ ಸ್ವಯಂ ಭರವಸೆ, ವಿಶ್ವಾಸ ರೂಢಿಯಾಗಬೇಕು ಎಂದು ತಿಳಿಸಿದರು.

ಆಪ್ತ ಸಮಾಲೋಚಕ ಹರೀಶ್ ಮತ್ತು ಕೀರ್ತಿ ಒತ್ತಡ ರಹಿತ ವ್ಯಕ್ತಿತ್ವಕ್ಕೆ ಸಲಹೆಗಳನ್ನು ನೀಡಿದರು.

ವಿಜಯವಾಣಿ ದಿನಾಂಕ : 30-06-2019 ಭಾನುವಾರ ಪುಟ-03

# ಆಧುನಿಕ ಯುಗದ ಸವಾಲು ಎದುರಿಸಿ

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ಆಧುನಿಕ ಯುಗದ ಸವಾಲುಗಳನ್ನು ಎದುರಿಸಲು ವಿದ್ಯಾರ್ಥಿಗಳು ಅಗತ್ಯ ಕೌಶಲ ಬೆಳೆಸಿಕೊಳ್ಳಬೇಕು ಎಂದು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಖಜಾಂಚಿ ಬಿ.ವೈ.ವಿಜಯೇಂದ್ರ ಹೇಳಿದರು.



ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಿದ್ದ ಕಾರ್ಯಾಗಾರದಲ್ಲಿ ಮಾತನಾಡಿದ ಅವರು, ವೈಜ್ಞಾನಿಕ ಯುಗದ ವೇಗಕ್ಕೆ ತಕ್ಕಂತೆ ನಾವು ಹೆಜ್ಜೆ ಹಾಕಬೇಕು. ಹೊಸ ತಂತ್ರಜ್ಞಾನಗಳು ನಮಗೆ ಸವಾಲಾಗಿವೆ. ಸವಾಲನ್ನು ನಾವು ಸ್ವೀಕರಿಸಿ ಹೊಸತನದ ಕಡೆಗೆ ಸಾಗಬೇಕು. ಪ್ರತಿಕ್ಷಣವೂ ನಾವು ಕಲಿಯಬೇಕಾದ ಅಗತ್ಯವಿದೆ ಎಂದರು.

ನಾಡಿನ ಭವಿಷ್ಯದ ರೂವಾರಿಗಳಾದ ವಿದ್ಯಾರ್ಥಿಗಳನ್ನು ತಯಾರು ಮಾಡುವ ಶಿಕ್ಷಕರಿಗೆ ಇಂತಹ ಕಾರ್ಯಾಗಾರಗಳು ಪ್ರಯೋಜನಕಾರಿಯಾಗಿವೆ. ಇಲ್ಲಿ ಹೊಸ ವಿಚಾರಗಳು ತೆರೆದುಕೊಳ್ಳುತ್ತವೆ. ಈಗ ಸಾಮಾಜಿಕ ಜಾಲತಾಣ ಅತ್ಯಂತ ಪ್ರಭಾವಿಯಾಗಿದೆ. ಶಿಕ್ಷಕರಿಗಿಂತ ಮುಂಚೆಯೆ ವಿದ್ಯಾರ್ಥಿಗಳಿಗೆ ಅಗತ್ಯ ಮಾಹಿತಿ ದೊರೆಯುತ್ತಿದೆ. ಮಾಹಿತಿ ತಂತ್ರಜ್ಞಾನ ಅಷ್ಟೊಂದು ವೇಗವಾಗಿ ಎಲ್ಲ ಕಡೆಗೆ ಪಸರಿಸಿದೆ ಎಂದರು. ಪ್ರಸ್ತುತ ಸಂದರ್ಭದಲ್ಲಿ ಶಿಕ್ಷಕರ ಜವಾಬ್ದಾರಿ ಜಾಸ್ತಿಯಾಗಿದೆ. ಕಾಲಕ್ಕೆ ತಕ್ಕಂತೆ ಪಠ್ಯಗಳು, ಬೋಧನಾ ಕ್ರಮಗಳೂ ಬದಲಾಗುತ್ತವೆ. ಬದಲಾವಣೆಗೆ ನಾವು ಸ್ಪಂದಿಸಬೇಕು. ವಿದ್ಯಾರ್ಥಿಗಳಲ್ಲಿರುವ ಅಂತಃಸತ್ವವನ್ನು ಶಿಕ್ಷಕರು ಮೊದಲು ಅರಿತುಕೊಳ್ಳಬೇಕು. ಅವರ ಪ್ರತಿಭೆ ಅನಾವರಣಗೊಳ್ಳಲು ಶಿಕ್ಷಕರೆ ವೇದಿಕೆ ಕಲ್ಪಿಸಬೇಕು ಎಂದು ಹೇಳಿದರು.

> **ಶಿಕ್ಷಕ ವೃತ್ತಿಗೆ ಸಮಾಜದಲ್ಲಿ ಗೌರವಯುತ ಸ್ಥಾನವಿದೆ. ಶಿಕ್ಷಕರು ತಮ್ಮ ಕಾರ್ಯಕ್ಷಮತೆಯಿಂದ ಆ ವೃತ್ತಿಯ ಗೌರವ ಹೆಚ್ಚಿಸಬೇಕು. ಪ್ರಾಧ್ಯಾಪಕರು ಅಧ್ಯಯನಶೀಲರಾದಲ್ಲಿ ಉತ್ತಮ ಸಾಧನೆ ಮಾಡಲು ಸಾಧ್ಯ.**
>
> । ಬಿ.ವೈ.ವಿಜಯೇಂದ್ರ
> ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಖಜಾಂಚಿ

ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕ ಪ್ರೊ ಕೆ. ಪ್ರಸಾದ್ ಮಾತನಾಡಿ, ತಂತ್ರಜ್ಞಾನಬದಲಾದಂತೆತಮ್ಮ ಬೋಧನಾ ಶೈಲಿಯನ್ನೂ ಬದಲಾಯಿಸಿಕೊಳ್ಳಬೇಕು. ಶಿಕ್ಷಕರು ಇದನ್ನು ಅರಿಯಬೇಕು ಎಂದರು. ಪ್ರಾಚಾರ್ಯೆ ಡಾ. ವಿ.ಆರ್. ಜಯಶ್ರೀ, ಕುವೆಂಪು ವಿವಿ ಸಹ ಪ್ರಾಧ್ಯಾಪಕ ಡಾ. ಜಗನ್ನಾಥ ಡಾಂಗೆ, ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ್, ಡಾ.ಕಿರಣ್‌ಕುಮಾರ್, ವಿಜಯಲಕ್ಷ್ಮೀ, ಆಯಿಷಾ ಫರ್ವೀನ್ ಶೇಖ್ ಇತರರು ಇದ್ದರು.

ಪ್ರಜಾವಾಣಿ ದಿನಾಂಕ : 30-06-2019 ಭಾನುವಾರ ಪುಟ-02

# 'ಬೋಧನೆಯಲ್ಲಿ ತಂತ್ರಜ್ಞಾನ ಅಳವಡಿಕೆಯಾಗಲಿ'

## ಶಿಕಾರಿಪುರ: ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ಕಾರ್ಯಾಗಾರ

ಪ್ರಜಾವಾಣಿ ವಾರ್ತೆ



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶನಿವಾರ 21ನೇ ಶತಮಾನದ ಶಿಕ್ಷಕರ ಬೋಧನಾ ಮತ್ತು ಕಲಿಕೆಗೆ ಹೊಸ ವಿಧಾನಗಳು ಎಂಬ ವಿಷಯ ಕುರಿತು ನಡೆದ ರಾಷ್ಟ್ರ ಮಟ್ಟದ ಕಾರ್ಯಾಗಾರವನ್ನು ಶಿವಮೊಗ್ಗ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕ ಕೆ. ಪ್ರಸಾದ್ ಉದ್ಘಾಟಿಸಿ ಮಾತನಾಡಿದರು

**ಮುಖ್ಯಾಂಶಗಳು**

- **ಹೊಸ ಬೋಧನಾ ವಿಧಾನ ಅಳವಡಿಸಿಕೊಳ್ಳಿ**
- **ಶಿಕ್ಷಕರು ವೃತ್ತಿ ದಕ್ಷತೆ ಕಾಪಾಡಿಕೊಳ್ಳಲಿ**
- **ಶಿಕ್ಷಕರ ವೃತ್ತಿಗೆ ಹಲವು ಸವಾಲುಗಳು ಎದುರಾಗಿವೆ**

ಶಿಕಾರಿಪುರ: 'ತಂತ್ರಜ್ಞಾನ ಯುಗಕ್ಕೆ ತಕ್ಕಂತೆ ಶಿಕ್ಷಕರ ಬೋಧನಾ ಶೈಲಿ ಬದಲಾಗಬೇಕು' ಎಂದು ಶಿವಮೊಗ್ಗ ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕ ಕೆ. ಪ್ರಸಾದ್ ಸಲಹೆ ನೀಡಿದರು.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶನಿವಾರ ನಡೆದ '21ನೇ ಶತಮಾನದ ಶಿಕ್ಷಕರ ಬೋಧನಾ ಮತ್ತು ಕಲಿಕೆಗೆ ಹೊಸ ವಿಧಾನಗಳು' ಕುರಿತ ಎರಡು ದಿನಗಳ ಕಾಲ ನಡೆಯುವ ರಾಷ್ಟ್ರೀಯಮಟ್ಟದ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

'ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಬೋಧನಾ ವಿಧಾನಗಳು ಅಪ್ರಸ್ತುತವಾಗುತ್ತಿವೆ. ತಂತ್ರಜ್ಞಾನ ಬೆಳೆದಂತೆಲ್ಲ ಸಂಶೋಧನೆಯ ಮೂಲಕ ಹೊಸ ವೈವಿಧ್ಯಮಯ ಬೋಧನಾ ವಿಧಾನಗಳನ್ನು ಪರಿಚಯಿಸಲಾಗುತ್ತಿದೆ. ಶಿಕ್ಷಕರು ಈ ವಿಧಾನಗಳನ್ನು ತಿಳಿಯಬೇಕು, ತರಬೇತಿ ಪಡೆದುಕೊಂಡು ವಿದ್ಯಾರ್ಥಿಗಳಲ್ಲಿ ಜ್ಞಾನ ವೃದ್ಧಿಸುವಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳಿಗೆ ಅನಗತ್ಯ ಶಿಕ್ಷೆ ನೀಡುವುದು, ತಾರತಮ್ಯ ಮಾಡುವುದನ್ನು ನಿಲ್ಲಿಸಬೇಕು. ವಿದ್ಯಾರ್ಥಿಗಳು ಆಸಕ್ತಿಯಿಂದ ಕಲಿಯುವಂತೆ ಮಾಡಬೇಕು ಎಂದು ಸಲಹೆ ನೀಡಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಖಜಾಂಚಿ ಬಿ.ವೈ.ವಿಜಯೇಂದ್ರ ಅಧ್ಯಕ್ಷತೆ ವಹಿಸಿದ್ದರು. 'ತಂತ್ರಜ್ಞಾನ ಯುಗದಲ್ಲಿ ಶಿಕ್ಷಕ ವೃತ್ತಿ ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಶೈಕ್ಷಣಿಕ ವ್ಯವಸ್ಥೆಯಲ್ಲಿ ಬದಲಾಗುತ್ತಿರುವ ಯೋಜನೆಗಳಿಗೆ ತಕ್ಕಂತೆ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಶಿಕ್ಷಕರಿಗಿದೆ. ಪೋಷಕರು ಮಕ್ಕಳನ್ನು ಹೆಚ್ಚು ಅಂಕ ಪಡೆಯಲು ಮಾತ್ರ ಸೀಮಿತಗೊಳಿಸ ಬಾರದು. ಮಕ್ಕಳ ಮನಸ್ಸನ್ನು ಅರಿತು ಉತ್ತಮ ಜ್ಞಾನ ಪಡೆಯುವಂತೆ ಪ್ರೇರೇಪಿಸಬೇಕು' ಎಂದು ಸಲಹೆ ನೀಡಿದರು.

ಕುವೆಂಪು ವಿಶ್ವವಿದ್ಯಾಲಯ ಸಹ ಪ್ರಾಧ್ಯಾಪಕ ಡಾ.ಜಗನ್ನಾಥ ಕೆ. ಡಾಂಗೆ, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್, ಕುಮದ್ವತಿ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ವಿ.ಜಯಶ್ರೀ ಇದ್ದರು.

ವಿಜಯ ಕರ್ನಾಟಕ ದಿನಾಂಕ : 10–06–2019 ಸೋಮವಾರ ಪುಟ–04

## ಚಿತ್ರ ಸುದ್ದಿ



ಶಿಕಾರಿಪುರ ತಾಲೂಕು ಅಂಬ್ಲಿಗೊಳ್ಳ ಗ್ರಾಮದ ಶಾಲೆ ಆವರಣದಲ್ಲಿ ಅರಣ್ಯ ಇಲಾಖೆಯಿಂದ ಗಿಡ ನೆಡುವ ಕಾರ್ಯಕ್ರಮ ನಡೆಯಿತು.




ಶಿಕಾರಿಪುರದ ಮೈತ್ರಿ ಶಾಲೆ, ಕುಮದ್ವತಿ ವಸತಿಯುತ ಶಾಲೆ ವಿದ್ಯಾರ್ಥಿಗಳು ಶುಕ್ರವಾರ ಬಸ್‌ನಿಲ್ದಾಣದಲ್ಲಿ ಪರಿಸರ ಗೀತೆ ಹಾಡುವ ಮೂಲಕ ಜಾಗೃತಿ ಮೂಡಿಸಿದರು.



ಶಿಕಾರಿಪುರದ ಕುಮದ್ವತಿ ಪಿಯು ಕಾಲೇಜು ವಿದ್ಯಾರ್ಥಿಗಳು ಭ್ರಾಂತೇಶ ಪಾರ್ಕ್ ಸ್ವಚ್ಛಗೊಳಿಸಿ, ಸಸಿ ನೆಟ್ಟು ಪರಿಸರ ದಿನ ಆಚರಿಸಿದರು.



ಶಿಕಾರಿಪುರ ತಾಲೂಕು ಅಂಜನಾಪುರ ಸರ್ಕಲ್ ಗ್ರಾಮದಲ್ಲಿ ಶನಿವಾರ ಕುಮದ್ವತಿ ಬಿಎಡ್ ಕಾಲೇಜು ವತಿಯಿಂದ ಗ್ರಾಮಸ್ಥರಿಗೆ ಸಸಿ ವಿತರಣೆ, ಸಸಿ ನೆಡುವ ಕಾರ್ಯಕ್ರಮ ನಡೆಯಿತು.

ವಿಜಯ ಕರ್ನಾಟಕ ದಿನಾಂಕ : 17–08–2019 ಗುರುವಾರ ಪುಟ–04



ಶಿಕಾರಿಪುರದಲ್ಲಿ ಗುರುವಾರ ಮಾಜಿ ಶಾಸಕ ಬಿ.ವೈ.ರಾಘವೇಂದ್ರ ಹುಟ್ಟುಹಬ್ಬ ಅಂಗವಾಗಿ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ಪಾಲ್ಗೊಂಡವರಿಗೆ ಹಣ್ಣು ವಿತರಿಸಲಾಯಿತು.

ರಾಜ್ಯ, ಕೇಂದ್ರ ಸರಕಾರದ ನೀರಾವರಿ ಸಚಿವರಿಗೂ ಮನವಿ ನೀಡುವ ಮೂಲಕ ಜನಪರ ಕಾಳಜಿ ಮೆರೆದಿದ್ದರು. ಶೈಕ್ಷಣಿಕ, ಕೃಷಿ, ವಿದ್ಯುತ್, ಮೂಲ ಸೌಕರ್ಯ ಕ್ಷೇತ್ರದಲ್ಲಿ ತಾಲೂಕು ರಾಜ್ಯದಲ್ಲೆ ಮಾದರಿ ಮಾಡಿದ ಕೀರ್ತಿ ಬಿ.ವೈ.ರಾಘವೇಂದ್ರ ಅವರಿಗೆ ಸಲ್ಲುತ್ತದೆ ಎಂದು ಹೇಳಿದರು.

ಮಾಜಿ ಪ್ರಧಾನಿ ವಾಜಪೇಯಿ ನಿಧನದ ಸುದ್ದಿ ತಿಳಿಯುತ್ತಿದ್ದಂತೆ ಕಾರ್ಯಕ್ರಮವನ್ನು ಅರ್ಧಕ್ಕೆ ಮೊಟಕುಗೊಳಿಸಲಾಯಿತು. ಬೆಳಗ್ಗೆ ಕ್ಷೇತ್ರ ದೇವರಿಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಿಂದ ರಕ್ತದಾನ ಶಿಬಿರ ನಡೆಯಿತು. ನೂರಾರು ಅಭಿಮಾನಿಗಳು ಬಿವೈಆರ್ ಮನೆಗೆ ಆಗಮಿಸಿ ಶುಭ ಕೋರಿದರು. ಮುಖಂಡರಾದ ಕೆ.ಎಸ್.ಗುರುಮೂರ್ತಿ, ಸುಬ್ರಮಣ್ಯ ಕೌಲಿ, ಪ್ರಕಾಶ್ ಉಡುಗಣಿ, ಶಂಭು ಕಣೇದ, ಬಿ.ಎಸ್.ಪಾಟೀಲ್, ಬಿ.ಎಚ್.ನಾಗರಾಜಪ್ಪ, ಪಾಲಾಕ್ಷಪ್ಪ ಭದ್ರಾಪುರ ಮತ್ತಿತರರು ಪಾಲ್ಗೊಂಡಿದ್ದರು.

ವಿಜಯ ಕರ್ನಾಟಕ ದಿನಾಂಕ : 01-07-2019 ಸೋಮವಾರ ಪುಟ-02

## ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ

# ಸಾಂಪ್ರದಾಯಿಕ ಬೋಧನೆ ಅಪ್ರಸ್ತುತ

ವಿಕ ಸುದ್ದಿಲೋಕ
ಶಿಕಾರಿಪುರ

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಬೋಧನಾ ವಿಧಾನಗಳು ಅಪ್ರಸ್ತುತವಾಗುತ್ತಿವೆ, ತಂತ್ರಜ್ಞಾನ ಬೆಳೆದಂತೆಲ್ಲಾ ಸಂಶೋಧನೆಯ ವೈವಿಧ್ಯಮಯ ಬೋಧನಾ ವಿಧಾನಗಳು ಪರಿಚಯಿಸಲ್ಪಡುತ್ತಿವೆ ಎಂದು ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಕೆ.ಪ್ರಸಾದ್ ಹೇಳಿದರು.



ಶಿಕಾರಿಪುರದಲ್ಲಿ ಶನಿವಾರ ಕುಮದ್ವತಿ ಬಿ.ಇಡಿ. ಕಾಲೇಜಿನಲ್ಲಿ ನಡೆದ 21ನೇ ಶತಮಾನದ ಬೋಧನಾ, ಕಲಿಕೆಗೆ ಹೊಸ ವಿಧಾನಗಳು ಕಾರ್ಯಾಗಾರಕ್ಕೆ ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಕೆ.ಪ್ರಸಾದ್ ಚಾಲನೆ ನೀಡಿದರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶನಿವಾರ ನಡೆದ '21ನೇ ಶತಮಾನದ ಬೋಧನಾ, ಕಲಿಕೆಗೆ ಹೊಸ ವಿಧಾನಗಳು' ಎಂಬ ವಿಷಯದ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಹೊಸ ಬೋಧನಾ ವಿಧಾನ ಕುರಿತು ಶಿಕ್ಷಕರು ಅರಿವು ಹೊಂದಿರಬೇಕು, ಸಾಧ್ಯವಾದರೆ ತರಬೇತಿ ಪಡೆಯುವುದಕ್ಕೆ ಆದ್ಯತೆ ನೀಡಬೇಕು. ವಿದ್ಯಾರ್ಥಿಗಳಿಗೆ ಅನಗತ್ಯ ಶಿಕ್ಷೆ ನೀಡುವುದು, ತಾರತಮ್ಯ ಮಾಡುವುದು, ಕೆಲವರಿಗೆ ಮಾತ್ರ ಕಾಳಜಿವಹಿಸುವುದು ಸೇರಿದಂತೆ ಹಲವು ಶಿಕ್ಷಕರ ವರ್ತನೆಯ ಕಾರಣಕ್ಕೆ ಇಂದು ವಿದ್ಯಾರ್ಥಿಗಳು ಬದಲಿ ಬೋಧನಾ ವಿಧಾನಕ್ಕೆ ಆದ್ಯತೆ ನೀಡುತ್ತಾರೆ. ತಂತ್ರಜ್ಞಾನ ಬದಲಾದಂತೆ ಶಿಕ್ಷಕರ ಬೋಧನಾ ಶೈಲಿಯೂ ಬದಲಾಗಬೇಕು, ಸತತ ಅಧ್ಯಯನದ ಮೂಲಕ ವೃತ್ತಿಯಲ್ಲಿ ದಕ್ಷತೆ ಕಾಪಾಡಿಕೊಳ್ಳಬೇಕು ಎಂದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಖಜಾಂಚಿ ವಿಜಯೇಂದ್ರ ಮಾತನಾಡಿ, ಕಲಿಕಾ ಕ್ಷೇತ್ರಕ್ಕೆ ತಂತ್ರಜ್ಞಾನ ನೀಡಿರುವ ಕೊಡುಗೆ ಅಪಾರ ಅದು ಶಿಕ್ಷಕರಿಗೆ ಸವಾಲನ್ನೂ ಒಡ್ಡಿದೆ ಎಂದರೆ ತಪ್ಪಾಗಲಾರದು, ಶಿಕ್ಷಕರು ತಂತ್ರಜ್ಞಾನ ಬಳಸಬೇಕೆ ವಿನಾ ಜ್ಞಾನಕ್ಕಾಗಿ ತಂತ್ರಜ್ಞಾನ ಅನಿವಾರ್ಯ ಎನ್ನುವಂತೆ ಜೋತು ಬೀಳಬಾರದು ಅದು ನಮ್ಮನ್ನು ದಡ್ಡರನ್ನಾಗಿ, ಪರಾವಲಂಬಿಯಾಗಿಸುತ್ತದೆ. ಶಿಕ್ಷಣ ಕ್ಷೇತ್ರದ ಬೆಳವಣಿಗೆಗೆ ತಂತ್ರಜ್ಞಾನ ದೊಡ್ಡ ಕೊಡುಗೆ ನೀಡಿದೆ ಜತೆಗೆ ಶಿಕ್ಷಕರ ಬದಲಿಗೆ ಗೂಗಲ್ ಬಳಕೆ ಹೆಚ್ಚಾಗಿದೆ ಅದು ಕೃತಕ ಬುದ್ಧಿಮತ್ತೆ ಅದನ್ನು ಬಳಸಿಕೊಂಡು ನಾವು ಜ್ಞಾನ'ವ'ಂತ'ರಾ'ಗ'ಬೇ'ಕ'ು ಪ್ರದರ್ಶಕರಾಗಬಾರದು ಎಂದು ಹೇಳಿದರು. ಪ್ರಾಚಾರ್ಯೆ ಡಾ. ಜಯಶ್ರೀ ವಿ.ಆರ್, ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್.ಗದಗ್, ಕುವೆಂಪು ವಿವಿ ಸಹ ಪ್ರಾಧ್ಯಾಪಕರ ಡಾ.ಜಗನ್ನಾಥ ಡಾಂಗೆ ಇದ್ದರು.

ಸಿಂಧು ಸಂಗಡಿಗರು ಪ್ರಾರ್ಥಿಸಿ, ಲಲಿತಾಂಬ ಸ್ವಾಗತಿಸಿ, ವಿಜಯಲಕ್ಷ್ಮಿ, ಆಯಿಷಾ ಫರ್ವಿನ್‌ಶೇಕ್ ನಿರೂಪಿಸಿ, ಕಿರಣ್‌ಕುಮಾರ್ ವಂದಿಸಿದರು.

---

ಹೊಸದಿಗಂತ ದಿನಾಂಕ : 02-07-2019 ಮಂಗಳವಾರ ಪುಟ-02

## ರಾಷ್ಟ್ರೀಯ ಮಟ್ಟದ ಕಾರ್ಯಾಗಾರದಲ್ಲಿ ಜೆಡಿ ಪ್ರೊ.ಕೆ. ಪ್ರಸಾದ್ ಸಲಹೆ

# ಬೋಧನಾ ಶೈಲಿಯಲ್ಲೂ ಬದಲಾವಣೆ ಅವಶ್ಯ

**ಶಿಕಾರಿಪುರ :** ಶಿಕ್ಷಕರು ತಂತ್ರಜ್ಞಾನ ಬದಲಾದಂತೆ ತಮ್ಮ ಬೋಧನಾ ಶೈಲಿಯಲ್ಲಿಯೂ ಬದಲಾವಣೆಗಳನ್ನು ಮಾಡಿಕೊಂಡು ವೃತ್ತಿ ದಕ್ಷತೆಯನ್ನು ಕಾಪಾಡಿಕೊಳ್ಳಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆಯ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಪ್ರೊ.ಕೆ. ಪ್ರಸಾದ್ ಶಿಕ್ಷಕರಿಗೆ ಕರೆ ನೀಡಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ 21ನೇ ಶತಮಾನದ ಶಿಕ್ಷಕರ ಬೋಧನಾ ಮತ್ತು ಕಲಿಕೆಗೆ ಹೊಸ ವಿಧಾನಗಳು ಎಂಬ ವಿಷಯಕ್ಕೆ ಎರಡು ದಿನಗಳ ರಾಷ್ಟ್ರೀಯ ಮಟ್ಟದ ಕಾರ್ಯಾಗಾರವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಬೋಧನಾ ವಿಧಾನಗಳು ಅಪ್ರಸ್ತುತವಾಗುತ್ತಿವೆ. ತಂತ್ರಜ್ಞಾನ ಅಭಿವೃದ್ಧಿಯಾದಂತೆ ಸಂಶೋಧನೆಯಲ್ಲಿ ಹೊಸ ಹೊಸ ವೈವಿಧ್ಯಮಯ



ಬೋಧನಾ ವಿಧಾನಗಳು ಪರಿಚಯಿಸಲ್ಪಡುತ್ತಿವೆ. ಶಿಕ್ಷಕರು ಈ ಬಗ್ಗೆ ಸೂಕ್ತ ರೀತಿಯಲ್ಲಿ ವಿದ್ಯಾರ್ಥಿಗಳಿಗೆ ತಿಳಿಸಲು ತರಬೇತಿಗಳನ್ನು ಪಡೆದುಕೊಂಡು ಮಾತ್ರ ವಿದ್ಯಾರ್ಥಿಗಳಲ್ಲಿ ಜ್ಞಾನ ವೃದ್ಧಿಸಲು ಸಾಧ್ಯ, ಇದರೊಂದಿಗೆ ಶಾಲೆಗಳಲ್ಲಿ ವಿದ್ಯಾರ್ಥಿಗಳು ಪೂರ್ಣ ಪ್ರಮಾಣದ ಹಾಜರಾತಿ ಅಗತ್ಯವಾಗಿದ್ದು ಇದರಿಂದ ಮಾತ್ರ ಉತ್ತಮ ಶಿಕ್ಷಣದ ಪ್ರಯೋಜನ ಪಡೆಯಲು ಸಾಧ್ಯ ಎಂದರು.

ಅಧ್ಯಕ್ಷತೆ ವಹಿಸಿದ್ದ ವಿದ್ಯಾ ಸಂಸ್ಥೆ ಖಜಾಂಚಿ ಬಿ.ವೈ. ವಿಜಯೇಂದ್ರ ಮಾತನಾಡಿ, ಪ್ರಸ್ತುತ ತಂತ್ರಜ್ಞಾನದ ಕೊಡುಗೆಯಲ್ಲಿ ಶಿಕ್ಷಕ ವೃತ್ತಿಯು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಅಲ್ಲದೇ ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಗಾಗ ಬದಲಾಗುತ್ತಿರುವ ಯೋಜನೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಉಂಟಾಗಿದೆ. ಶಿಕ್ಷಕರ ಬದಲಿಗೆ ಗೂಗಲ್ ಎನ್ನುವಂತಾಗಿದೆ. ಇದರಿಂದ ಶಿಕ್ಷಕರಿಗಿಂತ ಮುಂಚೆ ವಿದ್ಯಾರ್ಥಿಗಳೇ ಎಲ್ಲವನ್ನು ತಿಳಿದಿರುವ ಸಂಭವಗಳೂ ಹೆಚ್ಚಾಗಿರುವುದನ್ನು ಕಾಣುತ್ತೇವೆ ಎಂದರು.

ಕೃತಕ ಬುದ್ಧಿಮತ್ತೆಯ ಫಲವಾಗಿ ಭವಿಷ್ಯದಲ್ಲಿ ಸಂಭವಿಸಬಹುದಾದ ಘಟನೆಗಳನ್ನು ಕ್ಷಣಾರ್ಧದಲ್ಲಿಯೇ ತಿಳಿಯುವಂತಾಗಿದೆ. ಹಾಗಾಗಿ ಶಿಕ್ಷಕರು ತಮ್ಮನ್ನು ವೃತ್ತಿಯಲ್ಲಿ ಧನಾತ್ಮಕವಾಗಿ ತೊಡಗಿಸಿಕೊಳ್ಳಬೇಕು. ಶೈಕ್ಷಣಿಕ ವ್ಯವಸ್ಥೆಯಲ್ಲಿ ಆಗುವಂತಹ ಬದಲಾವಣೆಗಳಿಗೆ ತಮ್ಮನ್ನು ತೊಡಗಿಸಿಕೊಳ್ಳಬೇಕು. ನಾವಿನ್ಯಾಧಾರಿತ ಉಪಕ್ರಮಗಳ ಅರಿವನ್ನು ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಇದೆ.

ಪ್ರಾಚಾರ್ಯರಾದ ಡಾ.ಆರ್. ಜಯಶ್ರೀ, ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್, ಕುವೆಂಪು ವಿಶ್ವವಿದ್ಯಾಲಯದ ಸಹ ಪ್ರಾಧ್ಯಾಪಕ ಡಾ. ಜಗನ್ನಾಥ ಕೆ. ಡಾಂಗೆ ಉಪಸ್ಥಿತರಿದ್ದರು.

ಪ್ರಜಾವಾಣಿ ದಿನಾಂಕ : 28-12-2019 ಶನಿವಾರ ಪುಟ-03

# 'ನಿರಂತರ ಕಲಿಕೆಯಿಂದ ಮಾತ್ರ ಉತ್ತಮ ಶಿಕ್ಷಕನಾಗಲು ಸಾಧ್ಯ'

ಪ್ರಜಾವಾಣಿ ವಾರ್ತೆ



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಶುಕ್ರವಾರ ನಡೆದ ವಿದ್ಯಾರ್ಥಿ ಸಂಘ ಉದ್ಘಾಟನೆ ಸಮಾರಂಭವನ್ನು ಕುವೆಂಪು ವಿ.ವಿ ಕುಲಸಚಿವ ಪ್ರೊ.ಎಸ್‌ಎಸ್ ಪಾಟೀಲ್ ಉದ್ಘಾಟಿಸಿ ಮಾತನಾಡಿದರು.

ಶಿಕಾರಿಪುರ: 'ನಿರಂತರ ಕಲಿಕೆಯನ್ನು ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಉತ್ತಮ ಶಿಕ್ಷಕನಾಗಲು ಸಾಧ್ಯ' ಎಂದು ಕುವೆಂಪು ವಿಶ್ವವಿದ್ಯಾಲಯ ಕುಲಸಚಿವ ಪ್ರೊ.ಎಸ್.ಎಸ್. ಪಾಟೀಲ್ ಅಭಿಪ್ರಾಯಪಟ್ಟರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಸಭಾಂಗಣದಲ್ಲಿ ಶುಕ್ರವಾರ ನಡೆದ ವಿದ್ಯಾರ್ಥಿ ಸಂಘ ಉದ್ಘಾಟನೆ ಹಾಗೂ 2017-18 ಸಾಲಿನ ಪ್ರಶಿಕ್ಷಣಾರ್ಥಿಗಳ ಸಮಾರೋಪ ಸಮಾರಂಭವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಸಮಾಜದ ಪರಿವರ್ತನೆಯಲ್ಲಿ ಶಿಕ್ಷಕರ ಪಾತ್ರ ಮಹತ್ವದ್ದು. ಮಕ್ಕಳ ಭವಿಷ್ಯ ನಿರ್ಮಾಣ ಮಾಡುವಂತಹ ಶಕ್ತಿ ಹೊಂದಿರುವ ಶಿಕ್ಷಕ ವೃತ್ತಿ ನೀಡುವಂತಹ ಆತ್ಮತೃಪ್ತಿಯನ್ನು ಯಾವ ವೃತ್ತಿಯೂ ನೀಡಲು ಸಾಧ್ಯವಿಲ್ಲ. ಶಿಕ್ಷಕನಿಂದ ಹಲವು ಅಪೇಕ್ಷೆಯನ್ನು ಸಮಾಜ ಬಯಸುತ್ತದೆ. ನಾನು ಎಲ್ಲ ಕಲಿತಿದ್ದೇನೆ ಎಂಬ ಮನೋಭಾವವನ್ನು ಶಿಕ್ಷಕರು ತೊರೆಯಬೇಕು. ಕಲಿಕೆ ನಿರಂತರವಾಗಿರಬೇಕು' ಎಂದು ಸಲಹೆ ನೀಡಿದರು.

ವಿದ್ಯಾರ್ಥಿಗಳನ್ನು ಆಕರ್ಷಿಸಲು ಸಾಂಪ್ರದಾಯಿಕ ಬೋಧನಾ ಶೈಲಿಯ ಜೊತೆಗೆ ಆಧುನಿಕ ಪದ್ಧತಿಗಳನ್ನೂ ಶಿಕ್ಷಕರು ಅಳವಡಿಸಿಕೊಳ್ಳಬೇಕು. ವಿಷಯ ಬೋಧನೆಗೆ ಮಾತ್ರ ಸೀಮಿತವಾಗದೇ ವಿವಿಧ ಕ್ಷೇತ್ರಗಳ ಬಗ್ಗೆ ಜ್ಞಾನ ಹೊಂದಿರಬೇಕು ಎಂದು ಸಲಹೆ ನೀಡಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯ ಶೈಕ್ಷಣಿಕ ಮಾರ್ಗದರ್ಶನ ಪ್ರೊ.ಎಸ್.ಎಸ್. ಗದಗ್ ಅಧ್ಯಕ್ಷತೆ ವಹಿಸಿದ್ದರು.

ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ.ಜಯಶ್ರೀ ವಿ.ರಕ್ಕಸಗಿ, ಸ್ವಾಮಿವಿವೇಕಾನಂದ ವಿದ್ಯಾಸಂಸ್ಥೆಯ ಸಮನ್ವಯ ಆಡಳಿತಾಧಿಕಾರಿ ಕುಬೇರಪ್ಪ, ಅಂಗಸಂಸ್ಥೆ ಪ್ರಾಂಶುಪಾಲರಾದ ಡಾ.ವೀರೇಂದ್ರ ಪಾಟೀಲ್, ವಿದ್ಯಾಶಂಕರ್, ಡಾ.ಪರಶುರಾಮ್ ಇದ್ದರು.

ಉದಯವಾಣಿ ದಿನಾಂಕ : 28-12-2019 ಶನಿವಾರ ಪುಟ-03

# ಉತ್ತಮ ಶಿಕ್ಷಕರಾಗಲು ಕಲಿಕಾ ಮನೋಭಾವ ಅಗತ್ಯ: ಪಾಟೀಲ್



ಶಿಕಾರಿಪುರ: ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭದಲ್ಲಿ ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ| ಎಸ್. ಎಸ್. ಪಾಟೀಲ್ ಮಾತನಾಡಿದರು.

ಶಿಕಾರಿಪುರ: ಉತ್ತಮ ಶಿಕ್ಷಕನಾಗ ಬೇಕಾದರೆ ಕಲಿಕಾ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕು ಎಂದು ಕುವೆಂಪು ವಿಶ್ವವಿದ್ಯಾಲಯದ ಕುಲಸಚಿವ ಪ್ರೊ| ಎಸ್. ಎಸ್. ಪಾಟೀಲ್ ಅಭಿಪ್ರಾಯಪಟ್ಟರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ನಡೆದ ವಿದ್ಯಾರ್ಥಿ ಸಂಘದ ಉದ್ಘಾಟನೆ ಹಾಗೂ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು. ಶಿಕ್ಷಕ ವೃತ್ತಿಯನ್ನು ಪ್ರೀತಿಯಿಂದ ಸ್ವೀಕರಿಸಬೇಕು, ಜೊತೆಗೆ ಗೌರವಿಸಬೇಕು. ಆಗ ಅವರನ್ನು ಸಮಾಜ ಗೌರವಿಸುತ್ತದೆ. ಸಮಾಜದ ಕೊಳೆಯನ್ನು ತೆಗೆಯುವಲ್ಲಿ ಶಿಕ್ಷಕರ ಪಾತ್ರ ಮಹತ್ವರವಾದುದು ಎಂದರು.

ಕಾರ್ಯಕ್ರಮದಲ್ಲಿ ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ| ಎಸ್. ಎಸ್. ಗದಗ್, ಪ್ರಾಚಾರ್ಯರಾದ ಡಾ| ಜಯಶ್ರೀ ವಿ. ಆರ್. ಇದ್ದರು. ನೂತನ ಸಂಪನ್ಮೂಲ ಕೇಂದ್ರ ಉದ್ಘಾಟನೆ, ಕಾಲೇಜ ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಿ ಪ್ರತಿಭಾನ್ವಿತರಿಗೆ ಸನ್ಮಾನಿಸಲಾಯಿತು.

ಕನ್ನಡ ಪ್ರಭ ದಿನಾಂಕ : 01-07-2019 ಸೋಮವಾರ ಪುಟ-02

# ಶಿಕ್ಷಕರು ವೃತ್ತಿ ದಕ್ಷತೆ ಕಾಪಾಡಿಕೊಳ್ಳುವುದು ಅಗತ್ಯ

## ಕಾಲೇಜು ಶಿಕ್ಷಣ ಇಲಾಖೆ ಶಿವಮೊಗ್ಗ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಕೆ ಪ್ರಸಾದ್ ಅಭಿಮತ | 21ನೇ ಶತಮಾನದ ಶಿಕ್ಷಕರ ಬೋಧನಾ-ಕಲಿಕೆಗೆ ಹೊಸ ವಿಧಾನಗಳು ವಿಷಯ ಕುರಿತು ರಾಷ್ಟ್ರೀಯ ಕಾರ್ಯಾಗಾರ | ಮಕ್ಕಳಿಗೆ ಅನಗತ್ಯ ಶಿಕ್ಷೆ ಸಲ್ಲದು

• **ಕನ್ನಡಪ್ರಭವಾರ್ತೆ** ಶಿಕಾರಿಪುರ

ಶಿಕ್ಷಕರು ತಂತ್ರಜ್ಞಾನ ಬದಲಾದಂತೆ ತಮ್ಮ ಬೋಧನಾ ಶೈಲಿಯಲ್ಲಿಯೂ ಬದಲಾವಣೆ ಮಾಡಿಕೊಂಡು ವೃತ್ತಿ ದಕ್ಷತೆ ಕಾಪಾಡಿಕೊಳ್ಳಬೇಕು ಎಂದು ಕಾಲೇಜು ಶಿಕ್ಷಣ ಇಲಾಖೆ ಶಿವಮೊಗ್ಗದ ಪ್ರಾದೇಶಿಕ ಜಂಟಿ ನಿರ್ದೇಶಕರಾದ ಪ್ರೊ. ಕೆ ಪ್ರಸಾದ್ ಶಿಕ್ಷಕರಿಗೆ ಕರೆ ನೀಡಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಆಯೋಜಿಸಲಾಗಿದ್ದ 21ನೇ ಶತಮಾನದ ಶಿಕ್ಷಕರ ಬೋಧನಾ ಮತ್ತು ಕಲಿಕೆಗೆ ಹೊಸ ವಿಧಾನಗಳು ಎಂಬ ವಿಷಯ ಕುರಿತ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯಲ್ಲಿ ಸಾಂಪ್ರದಾಯಿಕ ಬೋಧನಾ ವಿಧಾನಗಳು ಅಪ್ರಸ್ತುತವಾಗುತ್ತಿವೆ. ತಂತ್ರಜ್ಞಾನ ಅಭಿವೃದ್ಧಿಯಾದಂತೆ ಸಂಶೋಧನೆಯಲ್ಲಿ ಹೊಸ ಹೊಸ ವೈವಿಧ್ಯಮಯ ಬೋಧನಾ ವಿಧಾನಗಳು ಪರಿಚಯಿಸಲ್ಪಡುತ್ತಿವೆ. ಶಿಕ್ಷಕರು ಸೂಕ್ತ ತರಬೇತಿ ಪಡೆದರೆ ಮಾತ್ರ ವಿದ್ಯಾರ್ಥಿಗಳಲ್ಲಿ ಜ್ಞಾನ ವೃದ್ಧಿಸಲು ಸಾಧ್ಯ. ಇದರೊಂದಿಗೆ ವಿದ್ಯಾರ್ಥಿಗಳ ಪೂರ್ಣಪ್ರಮಾಣದ ಹಾಜರಾತಿ ಸಹ ಅಗತ್ಯ. ಕೆಲವು ಸಂದರ್ಭಗಳಲ್ಲಿ ವಿದ್ಯಾರ್ಥಿಗಳಿಗೆ ಅನಗತ್ಯ ಶಿಕ್ಷೆ ನೀಡುವುದು, ಕೆಲವರ ಬಗ್ಗೆ ಮಾತ್ರ ಕಾಳಜಿ ವಹಿಸುವ ಶಿಕ್ಷಕರ ನಡವಳಿಕೆಯಿಂದಲೂ ದಾಖಲಾತಿ ಕಡಿಮೆಯಾಗುತ್ತಿದೆ. ಶಿಕ್ಷಕರ ಈ ರೀತಿಯ ಮನೋಧೋರಣೆ ಸರಿಯಲ್ಲ ಎಂದರು.

ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಖಜಾಂಚಿ ಬಿ.ವೈ. ವಿಜಯೇಂದ್ರ ಮಾತನಾಡಿ, ಪ್ರಸ್ತುತ ತಂತ್ರಜ್ಞಾನದ ಕೊಡುಗೆಯಲ್ಲಿ ಶಿಕ್ಷಕ ವೃತ್ತಿಯು ಅನೇಕ ಸವಾಲುಗಳನ್ನು ಎದುರಿಸುತ್ತಿದೆ. ಅಲ್ಲದೇ ಶೈಕ್ಷಣಿಕ ವ್ಯವಸ್ಥೆಯ ಬದಲಾಗುತ್ತಿರುವ ಯೋಜನೆಗಳಿಗೆ ಹೊಂದಾಣಿಕೆ ಮಾಡಿಕೊಳ್ಳಬೇಕಾದ ಅನಿವಾರ್ಯತೆ ಇದೆ. ಶಿಕ್ಷಕರ ಬದಲಿಗೆ ಗೂಗಲ್ ಎನ್ನುವಂತಾಗಿದೆ. ಶಿಕ್ಷಕರಿಗಿಂತ ಮುಂಚೆಯೇ ವಿದ್ಯಾರ್ಥಿಗಳು ಅನೇಕ ವಿಷಯಗಳನ್ನು ತಿಳಿದಿರುವ ಸಂಭವಗಳೂ ಇರುತ್ತವೆ. ಕೃತಕ ಬುದ್ಧಿಮತ್ತೆ ಫಲವಾಗಿ ಭವಿಷ್ಯದಲ್ಲಿ ಸಂಭವಿಸಬಹುದಾದ ಘಟನೆಗಳನ್ನು ಕ್ಷಣಾರ್ಧದಲ್ಲಿಯೇ ತಿಳಿಯುವಂತಾಗಿದೆ. ಹಾಗಾಗಿ ಶಿಕ್ಷಕರು ನಾವಿನ್ಯಾಧಾರಿತ ಉಪಕ್ರಮಗಳ ಅರಿವನ್ನು ಬೆಳೆಸಿಕೊಳ್ಳಬೇಕಾದ ಅನಿವಾರ್ಯತೆ ಇದೆ ಎಂದು ಹೇಳಿದರು.

ಪ್ರಾಚಾರ್ಯರಾದ ಡಾ. ಜಯಶ್ರೀ ಆರ್., ಶೈಕ್ಷಣಿಕ ಸಲಹೆಗಾರರಾದ ಪ್ರೊ. ಎಸ್.ಎಸ್. ಗದಗ್, ಕುವೆಂಪು ವಿಶ್ವವಿದ್ಯಾಲಯದ ಸಹಪ್ರಾಧ್ಯಾಪಕ ಡಾ. ಜಗನ್ನಾಥ ಕೆ. ಡಾಂಗೆ ಉಪಸ್ಥಿತರಿದ್ದರು. ಸಿಂಧು ಮತ್ತು ಸಂಗಡಿಗರು ಪ್ರಾರ್ಥಿಸಿದರು. ಲಲಿತಾಂಬಾ ಸ್ವಾಗತಿಸಿದರು. ವಿಜಯಲಕ್ಷ್ಮೀ ಮತ್ತು ಆಯಿಷಾ ಫರ್ಹೀನ್ ಶೇಕ್ ನಿರೂಪಿಸಿದರು. ಡಾ. ಕಿರಣ್ ಕುಮಾರ್ ವಂದಿಸಿದರು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ 21ನೇ ಶತಮಾನದ ಶಿಕ್ಷಕರ ಬೋಧನಾ ಮತ್ತು ಕಲಿಕೆಗೆ ಹೊಸ ವಿಧಾನಗಳು ಎಂಬ ವಿಷಯಕ್ಕೆ ಸಂಬಂಧಿಸಿದ ಎರಡು ದಿನಗಳ ರಾಷ್ಟ್ರೀಯ ಕಾರ್ಯಾಗಾರವನ್ನು ಕಾಲೇಜು ಶಿಕ್ಷಣ ಇಲಾಖೆ ಪ್ರಾದೇಶಿಕ ಜಂಟಿ ನಿರ್ದೇಶಕ ಪ್ರೊ. ಕೆ ಪ್ರಸಾದ್ ಉದ್ಘಾಟಿಸಿದರು.

# 2017-2018
## Paper Reports

ಉದಯವಾಣಿ ದಿನಾಂಕ : 27-01-2018 ಶನಿವಾರ ಪುಟ-02

### ಸರ್ಕಾರ ನಿರ್ವಹಣೆಗೆ ಸಂವಿಧಾನ ಅಗತ್ಯ: ರಾಘವೇಂದ್ರ



ಶಿಕಾರಿಪುರ: ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಶಾಸಕ ಬಿ.ವೈ. ರಾಘವೇಂದ್ರ ಮಾತನಾಡಿದರು.

ಶಿಕಾರಿಪುರ: ದೇಶದ ಕಾನೂನಿನ ಸುವ್ಯವಸ್ಥೆ ಹಾಗೂ ಉತ್ತಮ ಸರ್ಕಾರ ನಿರ್ವಹಣೆಗೆ ಸಂವಿಧಾನ ಅಗತ್ಯವಾಗಿದೆ ಎಂದು ಶಾಸಕ ಬಿ.ವೈ. ರಾಘವೇಂದ್ರ ಹೇಳಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ 69ನೇ ಗಣರಾಜ್ಯೋತ್ಸವದಲ್ಲಿ ಧ್ವಜವಂದನೆ ಸ್ವೀಕರಿಸಿ ಅವರು ಮಾತನಾಡಿದರು. ಅನ್ಯಾಯ, ಅಸಮಾನತೆ, ಶೋಷಣೆಗೆ ವಿರುದ್ಧ ಪ್ರತಿಭಟಿಸುವಲ್ಲಿ ಡಾ। ಅಂಬೇಡ್ಕರ್‌ರವರ ಚಿಂತನೆಗಳು ಇಂದಿಗೂ ಸ್ಫೂರ್ತಿಯಾಗಿವೆ. ರಾಷ್ಟ್ರೀಯ ಐಕ್ಯತೆ ಹಾಗೂ ಸಂಸ್ಕೃತಿಯಲ್ಲಿ ಭಾರತ ದೇಶ ವಿಶ್ವಕ್ಕೆ ಮಾದರಿಯಾಗಿದೆ ಎಂದರು. ಸಂಸ್ಥೆಯ ಅಧ್ಯಕ್ಷ ಎಂ.ಬಿ. ಶಿವಕುಮಾರ್ ಧ್ವಜಾರೋಹಣ ನೇರವೇರಿಸಿದರು. ಸಂಸ್ಥೆಯ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಸಮನ್ವಯಾಧಿಕಾರಿ ಕುಬೇರಪ್ಪ ಮೈತ್ರಿ ಶಾಲೆಯ ಆಡಳಿತಾಧಿಕಾರಿ ದಯಾನಂದ, ಪ್ರಾಂಶುಪಾಲ ವೀರೇಂದ್ರ, ವಿದ್ಯಾಶಂಕರ್ ಇತರರು ಇದ್ದರು.

ಹೊಸದಿಗಂತ ದಿನಾಂಕ : 27-01-2018 ಶನಿವಾರ ಪುಟ-02

### ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ಗಣರಾಜ್ಯೋತ್ಸವ

ಶಿಕಾರಿಪುರ : ದೇಶದಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡಿ, ಸರ್ಕಾರ ಜನಹಿತ ಕಾಪಾಡಲು ಸಂವಿಧಾನ ಅತ್ಯಗತ್ಯವಾಗಿದೆ ಎಂದು ಶಾಸಕ ಬಿ.ವೈ. ರಾಘವೇಂದ್ರ, ಅಭಿಪ್ರಾಯಪಟ್ಟರು.

ಶುಕ್ರವಾರ ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ನಡೆದ 69ನೇ ಗಣರಾಜ್ಯೋತ್ಸವದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರ ಭಾರತಕ್ಕೆ ಸಂವಿಧಾನವನ್ನು ರಚಿಸಿದ ಡಾ.ಬಿ ಆರ್ ಅಂಬೇಡ್ಕರ್ ಸರ್ವ ಸಮುದಾಯಕ್ಕೆ ಸಂವಿಧಾನದ ಮೂಲಕ ಹಕ್ಕು ರಕ್ಷಣೆಯನ್ನು ಕಲ್ಪಿಸಿಕೊಟ್ಟಿದ್ದಾರೆ. ಅನ್ಯಾಯ,ಅಸಮಾನತೆ,ಶೋಷಣೆಯ ವಿರುದ್ಧ ಪ್ರತಿಭಟಿಸುವಲ್ಲಿ ಡಾ. ಅಂಬೇಡ್ಕರ್ ಚಿಂತನೆಗಳು ಅತ್ಯಂತ ಸ್ಫೂರ್ತಿದಾಯಕವಾಗಿದೆ ಎಂದು ತಿಳಿಸಿದರು.

ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷ ಎಂ.ಬಿ. ಶಿವಕುಮಾರ ನೆರವೇರಿಸಿ ಪಥ ಸಂಚಲನವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಸಲಹೆಗಾರ ಪ್ರೊ.ಎಸ್.ಎಸ್. ಗದಗ್, ಸಮನ್ವಯಾಧಿಕಾರಿ ಕುಬೇರಪ್ಪ, ಮೈತ್ರಿ ಶಾಲೆಯ ಆಡಳಿತಾಧಿಕಾರಿ ಕೆ.ಆರ್. ದಯಾನಂದ್, ಪ್ರಾಚಾರ್ಯ ಲಿಂಗರಾಜ್, ವಿನಾಯಕ, ಡಾ. ಜಯಶ್ರೀ, ವಿದ್ಯಾಶಂಕರ್ ಮತ್ತಿತರರಿದ್ದರು. ವೀಣಾ ಸ್ವಾಗತಿಸಿ, ಕೋಟೋಜಿರಾವ್ ನಿರೂಪಿಸಿ, ಚೇತನ್‌ಕುಮಾರ್ ವಂದಿಸಿದರು.



ವಿಜಯ ಕರ್ನಾಟಕ ದಿನಾಂಕ : 24-03-2018 ಶನಿವಾರ ಪುಟ-02

## ಚಿತ್ರ ಸುದ್ದಿ

ವಿಕ ಚಿತ್ರಲೋಕ



ಶಿಕಾರಿಪುರದಲ್ಲಿ ಗುರುವಾರ ನೀರು ಸಂರಕ್ಷಣೆ ಅರಿವು, ಮತದಾನ ಜಾಗೃತಿಗಾಗಿ ಕುಮುದ್ವತಿ ಬಿಎಡ್ ಕಾಲೇಜು ವಿದ್ಯಾರ್ಥಿಗಳು ಜಾಥಾ ನಡೆಸಿದರು.

ಶಿವಮೊಗ್ಗೆ ದಿನಾಂಕ :16-04-2018 ಸೋಮವಾರ ಪುಟ-02

## ಶಿಕ್ಷಕರ ಕಲಿಕೆಗೆ ವ್ಯಾಪ್ತಿ ಇಲ್ಲ



ಶಿಕಾರಿಪುರ, ಎ.16: ಶಿಕ್ಷಕರ ಕಲಿಕೆಯ ವ್ಯಾಪ್ತಿಗೆ ಯಾವುದೇ ಸೀಮಿತವಿಲ್ಲ, ಅದೊಂದು ನಿರಂತರವಾದ ಕಲಿಕಾ ಪ್ರಕ್ರಿಯೆ ಎಂದು ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್. ಗದಗ್ ಅಭಿಪ್ರಾಯ ಪಟ್ಟರು.

ಕುಮುದ್ವತಿ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿ ಸಂಘ, ಶೈಕ್ಷಣಿಕ ಸಂಘ ಹಾಗೂ ಪ್ರಥಮ ವರ್ಷದ ಪ್ರಶಿಕ್ಷಣಾರ್ಥಿಗಳಿಗೆ ಸ್ವಾಗತ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಎಷ್ಟೇ ತಂತ್ರಜ್ಞಾನ ಮುಂದುವರೆದರೂ ಶಿಕ್ಷಣ ಕ್ಷೇತ್ರ ವೈವಿಧ್ಯಮಯವಾಗಿದೆ. ಈ ವೈವಿಧ್ಯತೆಯನ್ನು ಸಾಕಾರಗೊಳಿಸಲು ಶಿಕ್ಷಕರ ಅನಿವಾರ್ಯತೆ ಇದೆ, ಶಿಕ್ಷಕರಾಗುವವರು ಉತ್ತಮ ತರಬೇತಿ ಮತ್ತು ಕೌಶಲ್ಯಗಳನ್ನು ಹೊಂದುವುದರ ಕಡೆಗೆ ಗಮನಹರಿಸಬೇಕು. ಜೊತೆಗೆ ನಿರಂತರ ಅಧ್ಯಯನ ದೊಂದಿಗೆ ತಮ್ಮನ್ನು ತೊಡಗಿಸಿಕೊಂಡು ಬದಲಾದ ಸನ್ನಿವೇಶಗಳ ಅರಿವನ್ನು ಮೂಡಿಸಿಕೊಂಡು ಸೃಜನಶೀಲ ವ್ಯಕ್ತಿತ್ವ ಹೊಂದಿರಬೇಕು ಎಂದರು.

ಶ್ರೇಷ್ಠ ಮಾರ್ಗದರ್ಶನ ಪಡೆದು ಕ್ರಿಯಾಶೀಲ ಮನಸ್ಥಿತಿಯೊಂದಿಗೆ ತಾಳ್ಮೆ, ಸಂಯಮ, ಹಸನ್ಮುಖ ಮನೋಭಾವ, ಆಳವಾದ ಜ್ಞಾನ, ಸಕಾರಾತ್ಮಕ ಮನಸ್ಥಿತಿ, ಗೌರವದೊಂದಿಗೆ ವೃತ್ತಿ ಬದ್ಧತೆ ಕಾಯ್ದುಕೊಳ್ಳಲು ಪ್ರಯತ್ನಿಸಬೇಕು. ಕಲಿಕೆಯ ವ್ಯಾಪ್ತಿಯು ಸೀಮಿತವಾಗಿಲ್ಲ, ಕಲಿಕೆ ಪ್ರಕ್ರಿಯೆಯಾಗಿದೆ ಎಂಬುದರ ಜಾಗೃತಿಯನ್ನು ಮೂಡಿಸಿಕೊಂಡಿರಬೇಕು ಎಂದು ಹೇಳಿದರು.

ಹೊಸದಿಗಂತ ದಿನಾಂಕ : 16-08-2018 ಗುರುವಾರ ಪುಟ-12

# ಹೋರಾಟಗಾರರ ಸ್ಮರಣೆಗೆ ಸಿಕ್ಕ ಅವಕಾಶ ನಮ್ಮ ಸೌಭಾಗ್ಯ: ಬಿವೈಆರ್




ಶಿಕಾರಿಪುರ: ಚಿಕ್ಕ ವಯಸ್ಸಿನಲ್ಲಿ ಕಂಡ ಅವಮಾನಗಳನ್ನು ಎದುರಿಸಿ ಹೋರಾಡಿದ ಮಹನೀಯರನ್ನು ಸ್ಮರಿಸುವ ದಿನ ಸ್ವಾತಂತ್ರ್ಯ ದಿನಾಚರಣೆ ಎಂದು ಮಾಜಿ ಶಾಸಕ ಬಿ. ವೈ ರಾಘವೇಂದ್ರ ಹೇಳಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ನಡೆದ 72ನೇ ಸ್ವಾತಂತ್ರ್ಯ ದಿನಾಚರಣೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ದೇಶದ ಹೆಮ್ಮೆಯ ಪ್ರಧಾನಿ ನರೇಂದ್ರ ಮೋದಿ 2014 ರಲ್ಲಿ 2018ನೇ ವರ್ಷದಲ್ಲಿ ನಡೆಯುವ ಮಹಾತ್ಮ ಗಾಂಧೀಜಿಯವರ 150ನೇ ಜನ್ಮದಿನಾಚರಣೆಗೆ ಶೌಚ ಮುಕ್ತ ಭಾರತದ ಕೊಡುಗೆ ನೀಡುವುದಾಗಿ ಹೇಳಿದ್ದರು. ಅದರಂತೆ ಇಂದು ಕೇಂದ್ರದ ಅನೇಕ ಯೋಜನೆಗಳ ಮೂಲಕ ಪೂರ್ಣಗೊಳಿಸಲು ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ. ದೇಶದ ರೈತ ಹಾಗೂ ಸೈನಿಕ ನಿಜವಾದ ಕಾಯಕ ಯೋಗಿಗಳು. ಸ್ವಾತಂತ್ರ್ಯ ಪೂರ್ವದಲ್ಲಿ ಅನೇಕ ಹೋರಾಟಗಾರರ ಶ್ರಮದಿಂದ ಸ್ವಾತಂತ್ರ್ಯ ದೊರಕಿದೆ. ಇಂದು ಅವರ ಸ್ಮರಣೆ ಮಾಡುವ ಅವಕಾಶ ನಮಗೆ ದೊರಕಿರುವುದು ನಮ್ಮೆಲ್ಲರ ಸೌಭಾಗ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಕುಮದ್ವತಿ ವಸತಿ ಶಾಲೆಯ ಪ್ರಾಚಾರ್ಯ ಡಾ. ಕೆ. ಎಸ್.ದತ್ತಾತ್ರಿ ಮಾತನಾಡಿ, ಇತಿಹಾಸ ನಮ್ಮ ಕನ್ನಡಿ, ಸ್ವಾತಂತ್ರ್ಯ ಹೋರಾಟಗಾರರು ನಮಗೆ ಮಾದರಿಯಾಗಬೇಕು. ಬ್ರಿಟೀಷರು ಒಡೆದು ಆಳುವ ನೀತಿಯನ್ನು ಅನುಸರಿಸಿದರೆ ನಾವು ಒಂದುಗೂಡಿಸುವ ನೀತಿಯನ್ನು ಅನುಸರಿಸುತ್ತೇವೆ. ಇದು ಭಾರತ ಹಾಗೂ ಬ್ರಿಟೀಷರಿಗೂ ಇರುವ ವ್ಯತ್ಯಾಸ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಧ್ವಜಾರೋಹಣವನ್ನು ಸಂಸ್ಥೆಯ ಅಧ್ಯಕ್ಷ ಎಂ. ಬಿ ಶಿವಕುಮಾರ್ ನೆರವೇರಿಸಿದರು. ಸಂಸ್ಥೆಯ ವಿದ್ಯಾರ್ಥಿಗಳಿಂದ ಪಥಸಂಚಲನ ಹಾಗೂ ದೇಶಭಕ್ತಿಗೀತೆ, ಭಾಷಣವನ್ನು ನಡೆಸಲಾಯಿತು. ಇತ್ತೀಚೆಗೆ ರ್‍ಯಾಂಕ್ ಪಡೆದ ಬಿಇಡಿ ಪ್ರಶಿಕ್ಷಣಾರ್ಥಿಗಳು, ಅಂತರಾಷ್ಟ್ರೀಯ ಮಟ್ಟದಲ್ಲಿ ಪ್ರತಿನಿಧಿಸಿದ ವಾಲಿಬಾಲ್ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಂಸ್ಥೆಯ ನಿರ್ದೇಶಕ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಸಲಹೆಗಾರ ಎಸ್.ಎಸ್. ಗದಗ್, ಆಡಳಿತ ಸಮನ್ವಯಾಧಿಕಾರಿ ಕುಬೇರಪ್ಪ ಕೆ, ಪ್ರಾಚಾರ್ಯರಾದ ಡಾ. ಜಯಶ್ರೀ, ಡಾ. ವಿನಾಯಕ, ಡಾ. ವೀರೇಂದ್ರ, ಕೆ. ಆರ್. ದಯಾನಂದ ಉಪಸ್ಥಿತರಿದ್ದರು.

ಕನ್ನಡ ಪ್ರಭ ದಿನಾಂಕ : 20-08-2018 ಸೋಮವಾರ ಪುಟ-02




ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಮಾಜಿ ಶಾಸಕ ರಾಘವೇಂದ್ರ ಮಾತನಾಡಿದರು. ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಶೈಕ್ಷಣಿಕ ಸಲಹೆಗಾರ ಎಸ್.ಎಸ್. ಗದಗ್, ಆಡಳಿತ ಸಮನ್ವಯಾಧಿಕಾರಿ ಕುಬೇರಪ್ಪ ಮತ್ತಿತರರಿದ್ದರು.

ವಿಜಯವಾಣಿ ದಿನಾಂಕ : 18-08-2018 ಶನಿವಾರ ಪುಟ-02

# ದೈತ್ಯ ಶಕ್ತಿಯಾಗಿ ಬೆಳೆದಿದೆ ಭಾರತ

## ಬೇರುಮಟ್ಟದಿಂದ ಭಯೋತ್ಪಾದನೆ ಕಿತ್ತೊಗೆಯಬೇಕು | ಮಾಜಿ ಶಾಸಕ ಬಿ.ವೈ.ರಾಘವೇಂದ್ರ ಹೇಳಿಕೆ

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ಇಂದು ವಿಶ್ವ ಭಾರತವನ್ನು ನೋಡುತ್ತಿದೆ. ಇದಕ್ಕೆ ಕಾರಣ ಭಾರತ ಎಲ್ಲ ದೇಶಗಳಿಗಿಂತ ಭಿನ್ನವಾಗಿ, ವಿಶಿಷ್ಟವಾಗಿ ಬೆಳೆದು ನಿಂತಿರುವುದು ಎಂದು ಮಾಜಿ ಶಾಸಕ ಬಿ.ವೈ. ರಾಘವೇಂದ್ರ ಹೇಳಿದರು.

ಪಟ್ಟಣದ ಕುಮದ್ವತಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನ ಸಮಾರಂಭದಲ್ಲಿ ಮಾತನಾಡಿ, ಭಾರತ ದೇಶಕ್ಕೆ ತನ್ನದೇ ಆದ ಸ್ಥಾನವಿದೆ. ಸ್ವಾತಂತ್ರ್ಯ ನಂತರ ಭಾರತ ಎತ್ತರಕ್ಕೆ ಬೆಳೆದು ನಿಂತಿದೆ. ವಿಶ್ವದ ದೊಡ್ಡ ದೊಡ್ಡ ರಾಷ್ಟ್ರಗಳಿಗೆ ಇಂದು ಭಾರತದ ಸಾಂಗತ್ಯ ಬೇಕು ಎನ್ನುವಷ್ಟರ ಮಟ್ಟಿಗೆ ನಾವು ಬೆಳೆದು ನಿಂತಿದ್ದೇವೆ. ನಮಗೆ ಇಂತಹ ಭೀಮಬಲ ತಂದುಕೊಟ್ಟಿದ್ದು ನಮ್ಮ ಮಣ್ಣಿನ ಅಧ್ಯಾತ್ಮ ಬಲ ಎಂದು ಹೇಳಿದರು.

ವಿಶ್ವದಲ್ಲಿ ಭಯೋತ್ಪಾದನೆ ತಾಂಡವವಾಡುತ್ತಿದೆ. ಅದು ಭಾರತವನ್ನು ಬಿಡದೆ ಕಾಡುತ್ತಿದೆ. ಅಸಹನೀಯ ಮನಸುಗಳು ದಿನನಿತ್ಯ ದೇಶದಲ್ಲಿ ಅರಾಜಕತೆ ಸೃಷ್ಟಿ ಮಾಡುತ್ತಲೇ ಇವೆ. ಭಾರತಕ್ಕೆ ಮತ್ತು ಭಾರತೀಯರಿಗೆ ಇಂತಹ ದುಷ್ಟ ಶಕ್ತಿಯನ್ನು ಸದೆಬಡಿಯುವ ಶಕ್ತಿ ಇದೆ. ನರೇಂದ್ರ ಮೋದಿ ಪ್ರಧಾನಿಯಾದ ಮೇಲೆ ಅಂತಾರಾಷ್ಟ್ರೀಯ ಮಟ್ಟದಲ್ಲಿ ಭಾರತ ಪ್ರಕಾಶಿಸುತ್ತಿದೆ. ಭಾರತ ವಿಶ್ವಮಟ್ಟದಲ್ಲಿ ಅತ್ಯಂತ ಗೌರವ ಸ್ಥಾನದಲ್ಲಿರುವುದು ನಮಗೆಲ್ಲ ಹೆಮ್ಮೆಯ ಸಂಗತಿ ಎಂದರು.

ನಮ್ಮ ತಾಲೂಕಿನ ಈಸೂರು ಗ್ರಾಮ ಮತ್ತು ಅಲ್ಲಿನ ಸ್ವಾತಂತ್ರ್ಯ ಹೋರಾಟದ ಕಲಿಗಳು ದೇಶದ ಗಮನ ಸೆಳೆದಿದ್ದಲ್ಲದೆ ಬ್ರಿಟಿಷ್ ಅಧಿಕಾರಿಗಳ ನಿದ್ದೆಗೆಡಿಸಿದ್ದರು. ನಮಗೆ ಸ್ವಾತಂತ್ರ್ಯ ತಂದುಕೊಟ್ಟು ಅವರು ಹುತಾತ್ಮರಾದರು. ಅವರು ಗಳಿಸಿಕೊಟ್ಟ ಸ್ವಾತಂತ್ರ್ಯವನ್ನು ನಾವು ಉಳಿಸಿಕೊಂಡು ಹೋಗುವ ಅಗತ್ಯವಿದೆ ಎಂದು ಹೇಳಿದರು.

ಶಿಕ್ಷಣ ಸಮನ್ವಯಕಾರ ಪ್ರೊ. ಎಸ್.ಎಸ್. ಗದಗ್, ವಿದ್ಯಾಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಆಡಳಿತಾಧಿಕಾರಿ ಕೆ.ಆರ್.ದಯಾನಂದ್, ಪ್ರಾಚಾರ್ಯ ವಿನಾಯಕ, ವೀರೇಂದ್ರಕುಮಾರ್ ಇದ್ದರು.



ಶಿಕಾರಿಪುರ ಕುಮದ್ವತಿ ಕಾಲೇಜಿನಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನ ಸಮಾರಂಭದಲ್ಲಿ ಬಿ.ವೈ.ರಾಘವೇಂದ್ರ ಮಾತನಾಡಿದರು.

### ಜಾಗೃತವಾಗಲಿ ದೇಶಭಕ್ತಿ

ಶಿಕಾರಿಪುರ: ಇಂದು ಪರಕೀಯರ ದಾಸ್ಯದಿಂದ ನಾವು ಹೊರಬಂದ ಶುಭದಿನ. ಈ ಸ್ವಾತಂತ್ರ್ಯದ ಹಿಂದೆ ಲಕ್ಷಾಂತರ ದೇಶಭಕ್ತರ ಹೋರಾಟ ಹಾಗೂ ಬಲಿದಾನವಿದೆ ಎಂದು ತಾಪಂ ಅಧ್ಯಕ್ಷೆ ಕವಲಿ ಸುಬ್ರತ್ನಮ್ಮ ಹೇಳಿದರು. ಪಟ್ಟಣದ ಸರ್ಕಾರಿ ಪಪೂ ಕಾಲೇಜು ಆವರಣದಲ್ಲಿ ಹಮ್ಮಿಕೊಂಡಿದ್ದ ಸ್ವಾತಂತ್ರ್ಯ ದಿನ ಸಮಾರಂಭದಲ್ಲಿ ಮಾತನಾಡಿ, ನಾವು ನಮ್ಮ ಹಿತದ ಜತೆಗೆ ದೇಶದ ಹಿತದ ಕಡೆಗೂ ಗಮನ ಕೊಡಬೇಕು. ನಮ್ಮಲ್ಲಿ ದೇಶಭಕ್ತಿ ಜಾಗೃತವಾಗಬೇಕು ಎಂದು ತಿಳಿಸಿದರು. ತಹಸೀಲ್ದಾರ್ ಬಿ.ಶಿವಕುಮಾರ್ ಮಾತನಾಡಿ, ನಮ್ಮ ದೇಶ ಎಲ್ಲ ಜಾತಿ ಮತ ಪಂಥ ಧರ್ಮಗಳನ್ನು ಮೀರಿ ನಿಂತಿದೆ. ನಾವೆಲ್ಲ ಭಾರತೀಯರು ಎಂಬುದು ನಮ್ಮ ಐಕ್ಯಮಂತ್ರ ಎಂದು ತಿಳಿಸಿದರು. ಪುರಸಭೆ ಮುಖ್ಯಾಧಿಕಾರಿ ರಾಜ್‌ಕುಮಾರ್, ತಾಪಂ ಉಪಾಧ್ಯಕ್ಷೆ ಮಮತಾ ರಾಜಪ್ಪ, ಅಧ್ಯಕ್ಷರತ್ನಮ್ಮ, ಸೂರ್ಯಕಾಂತಪ್ಪ, ಎಪಿಎಂಸಿ ಅಧ್ಯಕ್ಷ ತಾಳಗುಂದ ಸತೀಶ್ ಮತ್ತಿತರರಿದ್ದರು.

# ರೈತರ ಸಂಕಷ್ಟ ಪರಿಹಾರ

■ ವಿಜಯವಾಣಿ ಸುದ್ದಿಜಾಲ ಹೊಸನಗರ

ಸತತ 3 ವರ್ಷ ಬರಗಾಲದಿಂದ ಜನತೆ ತತ್ತರಿಸಿದ್ದರು. ಈ ಬಾರಿ ಉತ್ತಮ ಮಳೆಯಾಗಿದ್ದು ರೈತರ ಸಂಕಷ್ಟಗಳು ಪರಿಹಾರ ಆಗಲಿವೆ ಎಂದು ತಹಸೀಲ್ದಾರ್ ಚಂದ್ರಶೇಖರ ನಾಯ್ಕ್ ಹೇಳಿದರು.

ಪಟ್ಟಣದ ನೆಹರು ಮೈದಾನದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಸ್ವಾತಂತ್ರ್ಯಕ್ಕಾಗಿ ತ್ಯಾಗ, ಬಲಿದಾನ ಮಾಡಿದ ಮಹಾತ್ಮರ ಕುರಿತು ಯುವಪೀಳಿಗೆಯಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು. ಯುವ ಪೀಳಿಗೆ, ಮಹಿಳೆಯರಿಗೆ ಆತ್ಮವಿಶ್ವಾಸ ಮೂಡಿಸುವ ಕಾರ್ಯ ನಡೆಯಬೇಕು. ದೇಶ ಎದುರಿಸುತ್ತಿರುವ ಸಂಕಷ್ಟ ಪರಿಹರಿಸುವ ನಿಟ್ಟಿನಲ್ಲಿ ಯುವಪೀಳಿಗೆ ಕೈ ಜೋಡಿಸಬೇಕು ಎಂದರು.

ತಾಪಂ ಅಧ್ಯಕ್ಷ ವಾಸಪ್ಪ ಗೌಡ ಅಧ್ಯಕ್ಷತೆ ವಹಿಸಿದ್ದರು. ಜಿಪಂ ಸದಸ್ಯರಾದ ಎಸ್. ಸುರೇಶ ಸ್ವಾಮಿರಾವ್, ಶ್ವೇತಾ ಬಂಡಿ, ಪಟ್ಟಣ ಪಂಚಾಯಿತಿ ಅಧ್ಯಕ್ಷ ಹಾಲಗದ್ದೆ ಉಮೇಶ್, ಉಪಾಧ್ಯಕ್ಷೆ ಸುಜಾತ ಉಡುಪ, ಎಪಿಎಂಸಿ ಅಧ್ಯಕ್ಷ ಬಿ.ಪಿ.ರಾಮಚಂದ್ರ, ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಕೇಶವಮೂರ್ತಿ, ಕಾರ್ಯನಿರ್ವಾಹಕ ಅಧಿಕಾರಿ ಡಾ. ರಾಮಚಂದ್ರ ಭಟ್, ವೃತ್ತ ನಿರೀಕ್ಷಕ ಮಂಜುನಾಥ ಗೌಡ, ಪ್ರಮುಖರಾದ ಶ್ರೀನಿವಾಸ್ ಕಾಮತ್, ಶ್ರೀಧರ್ ಉಡುಪ ಇದ್ದರು. ಎಸ್ಸೆಸ್ಸೆಲ್ಸಿ, ಪಿಯುಸಿ ಹಾಗೂ ಪದವಿ ಕಾಲೇಜುಗಳಲ್ಲಿ ಉತ್ತಮ ಅಂಕ ಪಡೆದ ವಿದ್ಯಾರ್ಥಿಗಳನ್ನು ಹಾಗೂ ವಿಶೇಷ ಸಾಧನೆ ಮಾಡಿದವರನ್ನು ಪುರಸ್ಕರಿಸಲಾಯಿತು.

### ಹಸಿರು ಕರ್ನಾಟಕ

ಅರಣ್ಯ ಇಲಾಖೆ ಹಸಿರು ಕರ್ನಾಟಕ ಯೋಜನೆಯಡಿ ವಿದ್ಯಾರ್ಥಿಗಳಿಗೆ ಸಸಿಗಳನ್ನು ಗಣ್ಯರು ವಿತರಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿತು.



ಹೊಸನಗರದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ತಹಸೀಲ್ದಾರ್ ಚಂದ್ರಶೇಖರ ನಾಯ್ಕ ಧ್ವಜಾರೋಹಣ ನೆರವೇರಿಸಿ ಮಾತನಾಡಿದರು.

ವಿಜಯಕರ್ನಾಟಕ ದಿನಾಂಕ : 25–12–2018 ಮಂಗಳವಾರ ಪುಟ–03

# 'ಗುಣಮಟ್ಟದ ಶಿಕ್ಷಣಕ್ಕೆ ಎಚ್ಚರ ವಹಿಸಿ'

**ಶಿಕಾರಿಪುರ:** ಪ್ರಾಥಮಿಕ, ಮಾಧ್ಯಮಿಕ ಶಿಕ್ಷಣದಲ್ಲಿ ಗುಣಾತ್ಮಕ ಶಿಕ್ಷಣ ಅಡಗಿದ್ದು ಆ ಹಂತದಲ್ಲಿ ಎಲ್ಲರಿಗೂ ಗುಣಮಟ್ಟದ ಶಿಕ್ಷಣ ಸಿಗುವಂತೆ ಎಚ್ಚರಿಕೆ ವಹಿಸಬೇಕೆಂದು ಸಂಸದ ಬಿ.ವೈ. ರಾಘವೇಂದ್ರ ಹೇಳಿದರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾ ವಿದ್ಯಾಲಯದಲ್ಲಿ ಶನಿವಾರ ನಡೆದ ವಿದ್ಯಾರ್ಥಿ ಸಂಘ ಉದ್ಘಾಟನೆ ಕಾರ್ಯಕ್ರಮ ದಲ್ಲಿ ಅವರು ಮಾತನಾಡಿ ದರು. ವಿದ್ಯಾರ್ಥಿಗಳಲ್ಲಿ ಹೆಚ್ಚು ಕೌಶಲ ರೂಢಿ ಸಲು ಉತ್ತಮ ತರಬೇತಿ ಹೊಂದಿದ ಶಿಕ್ಷಕರ ಅವಶ್ಯವಿದೆ. ಶಿಕ್ಷಕರ ತರಬೇತಿ ಸಂಸ್ಥೆಗಳು ಈ ನಿಟ್ಟಿನಲ್ಲಿ ಗಮನ ನೀಡ ಬೇಕು. ಇತ್ತೀಚೆಗೆ ಪ್ರಮಾಣ ಪತ್ರ ನೀಡು ವುದಕ್ಕಾಗಿ ಮಾತ್ರ ಶಿಕ್ಷಣ ಸಂಸ್ಥೆ ಹುಟ್ಟಿ ಕೊಂಡಿರುವುದು ಶೋಚನೀಯ ಎಂದರು.

ದೇಶದ ಪ್ರಗತಿಯಲ್ಲಿ ಶಿಕ್ಷಣ ಮಹತ್ತರ ಪಾತ್ರ ಹೆಚ್ಚಿದೆ. ಕಲಿಯುವ, ಕಲಿಸುವ ಪ್ರಕ್ರಿಯೆಯಲ್ಲಿ ಸುಧಾರಣೆ ಆಗಬೇಕಿದೆ. ಶಿಕ್ಷಣದ ಪ್ರಾರಂಭಿಕ ಹಂತದಲ್ಲಿ ಪರಿಣಾಮಕಾರಿ ಶಿಕ್ಷಣ ಪೂರೈಸಲು ಶಿಕ್ಷಕರು ಉತ್ತಮ ಕೌಶಲಭರಿತ ತರಬೇತಿ ಹೊಂದುವುದು ತೀರಾ ಅನಿವಾರ್ಯವಿದೆ. ಶಿಕ್ಷಕರೂ ತರಬೇತಿ ಅವಧಿಯಲ್ಲಿ ನುಡಿ ದಂತೆ ನಡೆಯುವ ಮನೋಭಾವ ರೂಢಿಸಿಕೊಳ್ಳಬೇಕೆಂದರು. ವಾರ್ಷಿಕ ಸಂಚಿಕೆ ಸುಜ್ಞಾನ ಬಿಡುಗಡೆ ಮಾಡಲಾಯಿತು. ಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ಸಂಸ್ಥೆಯ ಶೈಕ್ಷಣಿಕ ಸಲಹೆಗಾರ ಪ್ರೊ. ಎಸ್.ಎಸ್.ಗದಗ್, ನಿರ್ದೇಶಕಿ ತೇಜಸ್ವಿನಿ, ಪ್ರಾಚಾರ್ಯೆ ಡಾ. ವಿ.ಆರ್.ಜಯಶ್ರೀ, ಉಪನ್ಯಾಸಕರಾದ ದೇವರಾಜ್, ರವಿಕುಮಾರ್, ಎಸ್.ಎಂ. ಅಶ್ವಿನಿ ಮತ್ತಿತರರು ಇದ್ದರು.



ಶಿಕಾರಿಪುರದಲ್ಲಿ ಶನಿವಾರ ಕುಮದ್ವತಿ ಶಿಕ್ಷಕರ ತರಬೇತಿ ಸಂಸ್ಥೆ ವಿದ್ಯಾರ್ಥಿ ಸಂಘದ ಉದ್ಘಾಟನೆ ಕಾರ್ಯಕ್ರಮಕ್ಕೆ ಸಂಸದ ಬಿ.ವೈ.ರಾಘವೇಂದ್ರ ಚಾಲನೆ ನೀಡಿದರು.

# 2016-2017

# Paper Reports

ಕನ್ನಡಪ್ರಭ

ಶುಕ್ರವಾರ 13.1.2017

ಶಿವಮೊಗ್ಗ

ವಿವೇಕಾನಂದ ಜಯಂತಿ ಆಚರಣೆಯಲ್ಲಿ ದು.ಗು.ಲಕ್ಷ್ಮಣ್

## ಅಂತರಂಗ ವಿಕಾಸದಿಂದ ವ್ಯಕ್ತಿತ್ವ ಗುರುತಿಸಲು ಸಾಧ್ಯ

• **ಕನ್ನಡಪ್ರಭ ವಾರ್ತೆ** ಶಿಕಾರಿಪುರ

ಹಿಂದೂ ಧರ್ಮ ಸರ್ವ ಧರ್ಮದ ಅಡಿಪಾಯವಾಗಿದ್ದು, ಹಿಂದೂ ಧರ್ಮದ ತತ್ವ ಸಿದ್ಧಾಂತ ಪ್ರತಿಯೊಬ್ಬರೂ ಜೀವನದಲ್ಲಿ ಅಳವಡಿಸಿಕೊಂಡಲ್ಲಿ ಮಾತ್ರ ನವಭಾರತ ನಿರ್ಮಾಣ ಸುಲಭವಾಗಲಿದೆ ಎಂದು ಖ್ಯಾತ ಅಂಕಣಕಾರ ದು.ಗು. ಲಕ್ಷ್ಮಣ್ ತಿಳಿಸಿದರು. ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ಗುರುವಾರ ನಡೆದ ಸ್ವಾಮಿ ವಿವೇಕಾನಂದ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಮನುಷ್ಯನ ಬಹಿರಂಗ ಬದಲಾವಣೆಯಿಂದ ಆತನ ವ್ಯಕ್ತಿತ್ವ ಗುರುತಿಸುವುದು ಸಾಧ್ಯವಿಲ್ಲ. ಆತನ ಅಂತರಂಗ ವಿಕಾಸದಿಂದ ವ್ಯಕ್ತಿತ್ವ ಗುರುತಿಸ ಬಹುದಾಗಿಧೆ. ಹಿಂದೂ ಧರ್ಮದ ಬಗ್ಗೆ ವಿವೇಕಾನಂದರ ಪ್ರತಿಯೊಂದು ವಾಣಿ ಸಿಡಿಲ ರೂಪದಲ್ಲಿ ಹೆಚ್ಚು ಪ್ರಖರವಾಗಿದ್ದು ಅವುಗಳನ್ನು ಇಂದಿನ ದಿನದಲ್ಲಿ ಪುನಃ ಯುವಪೀಳಿಗೆಗೆ

ಮನದಟ್ಟು ಮಾಡುವ ಕಾರ್ಯ ಅತ್ಯಂತ ತುರ್ತಾಗಿ ಆಗಬೇಕಿದೆ ಎಂದು ನುಡಿದರು.

ಇಂದಿನ ವಿದ್ಯಾರ್ಥಿಗಳು ಭವಿಷ್ಯದ ಭವ್ಯ ಪ್ರಜೆಯಾಗಿದ್ದು, ಶಿಕ್ಷಣದ ಜತೆಗೆ ದೇಶದ ವೈಚಾರಿಕತೆ, ಪರಂಪರೆ, ಸಂಸ್ಕೃತಿ ಬಿಂಬಿಸುವ ಜೀವನಮೌಲ್ಯ ಕಲಿಸಬೇಕಾಗಿದೆ. ತರ್ಕಬದ್ಧ ಆಲೋಚನೆ, ಪ್ರಶ್ನಿಸುವ ಮನೋಭಾವ, ನಿರ್ದಿಷ್ಟ ಗುರಿ ಆಧಾರಿತ ಪರಿಶ್ರಮ, ಪ್ರಯತ್ನವನ್ನು ರೂಢಿಸಿ ಕೊಳ್ಳುವ ನಿಟ್ಟನಲ್ಲಿ ವಿದ್ಯಾರ್ಥಿಗಳನ್ನು ಸಿದ್ದಗೊಳಿಸಬೇಕಾಗಿದೆ ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿದ್ದ ಸಂಸ್ಥೆ ಕಾರ್ಯದರ್ಶಿ, ಶಾಸಕ ರಾಘವೇಂದ್ರ, ಮಾತನಾಡಿ, ವಿವೇಕಾನಂದರ ಜೀವನ ಮೌಲ್ಯ ಅಳವಡಿಸಿ ಕೊಂಡಲ್ಲಿ ಮಾನಸಿಕ, ಬೌದ್ಧಿಕ ಬೆಳವಣಿಗೆ ಹೊಂದಲು ಸಾಧ್ಯ ಎಂದರು. ಇದೇ ವೇಳೆ ವಿವೇಕಾಂಜಲಿ ಇ-ಸಂಚಿಕೆ ಬಿಡುಗಡೆ ಗೊಳಿಸಲಾಯಿತು.

ವೇದಿಕೆಯಲ್ಲಿ ಸಂಸ್ಥೆಯ ಖಜಾಂಚಿ ಬಿ.ವೈ. ವಿಜಯೇಂದ್ರ, ಪ್ರಾಚಾರ್ಯೆ ಜಯಶ್ರೀ, ಕೆ.ಆರ್ ದಯಾನಂದ್, ವಿನಾಯಕ್, ಲಿಂಗರಾಜ್, ವೀರೇಂದ್ರಕುಮಾರ್ ಇದ್ದರು. ಡಾ.ವಿನಾಯಕ್ ಸ್ವಾಗತಿಸಿದರು. ಇಂದ್ರ ಮಲ್ಲೂರು ಹಾಗೂ ಸುಶ್ಮಿತಾ ನಿರೂಪಿಸಿದರು. ಕೋಟೋಜಿರಾವ್ ವಂದಿಸಿದರು.



ಶಿಕಾರಿಪುರ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ವಿವೇಕಾಂಜಲಿ ಇ-ಸಂಚಿಕೆಯನ್ನು ದು.ಗು. ಲಕ್ಷ್ಮಣ್ ಬಿಡುಗಡೆ ಮಾಡಿದರು.

ಹೊಸದಿಗಂತ ದಿನಾಂಕ : 27-01-2017 ಶುಕ್ರವಾರ ಪುಟ-11

# ಅಲಿಖಿತ ಸಂವಿಧಾನದಿಂದ ಭಾರತದ ಕುಟುಂಬಗಳು ಭದ್ರ : ಸು. ರಾಮಣ್ಣ

ಶಿಕಾರಿಪುರ : ಭಾರತ ದೇಶಕ್ಕೆ ಲಿಖಿತ ಸಂವಿಧಾನದ ಜತೆಗೆ ಅಲಿಖಿತವಾದ ಭವ್ಯ ಪರಂಪರೆಯಿದ್ದು ಇದರಿಂದಾಗಿ ಪಾಶ್ಚಾತ್ಯ ದೇಶಗಳಿಗೆ ಮಾದರಿಯಾಗಿದ್ದೇವೆ ಎಂದು ಅಖಿಲ ಭಾರತ ಪರಿವಾರ ಪ್ರಬೋಧಿನಿ ಸಹ ಸಂಚಾಲಕ ಸು. ರಾಮಣ್ಣ ತಿಳಿಸಿದರು.

ಗುರುವಾರ ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ನಡೆದ 68ನೇ ಗಣರಾಜ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ದೇಶದ ರಾಜನೀತಿ ಉತ್ತಮ ರೀತಿಯಲ್ಲಿರಲು ಮುಖ್ಯವಾಗಿ ಪ್ರತಿಯೊಬ್ಬರೂ ಕರ್ತವ್ಯವನ್ನು ಸೂಕ್ತವಾಗಿ ಪಾಲಿಸಬೇಕಾಗಿದೆ. ಕರ್ತವ್ಯದ ಜಾಗೃತಿಯಾದಲ್ಲಿ ಮಾತ್ರ ದೇಶ ಅಭಿವೃದ್ಧಿ ಹೊಂದಲಿದೆ. ಭಾರತ ಬಲಿಷ್ಠವಾದಲ್ಲಿ ಜಗತ್ತಿನ ಕಲ್ಯಾಣವಾಗಲಿದೆ ಎಂದರು.

ಕರ್ತವ್ಯಗಳ ಪಾಲನೆಯಿಂದ ಮಾತ್ರ ಹಕ್ಕುಗಳ ರಕ್ಷಣೆ ಸಾಧ್ಯವಿದ್ದು ದೇಶದ ಸಂವಿಧಾನ ರಚನೆಯಲ್ಲಿ ಡಾ. ಅಂಬೇಡ್ಕರ್ ಅವರ ಜವಾಬ್ದಾರಿಯನ್ನು ಸ್ಮರಿಸಿದ ಅವರು, ಇಂದು ಅನುಶಾಸನಗಳ ಪಾಲನೆಯಾಗಬೇಕಾಗಿದೆ. ಬ್ರಿಟಿಷರು ಹಾಕಿಕೊಂಡ ನಿಯಮಗಳನ್ನು ಒತ್ತಾಯಪೂರ್ವಕವಾಗಿ ಹೇರಲಾಗಿದ್ದು ಇಂತಹ ನಿಯಮಗಳಿಂದ ಹೊರಬರಲು ಸಂವಿಧಾನವನ್ನು ರಚಿಸಲಾಗಿದೆ ಎಂದರು.




**ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ನಡೆದ 68ನೇ ಗಣರಾಜ್ಯೋತ್ಸವದಲ್ಲಿ ಅಖಿಲ ಭಾರತ ಪರಿವಾರ ಪ್ರಬೋಧಿನಿ ಸಹ ಸಂಚಾಲಕ ಸು. ರಾಮಣ್ಣ ಮಾತನಾಡಿದರು.**

ಲಿಖಿತ ಸಂವಿಧಾನದ ಜತೆಗೆ ಭಾರತದಲ್ಲಿ ಅಲಿಖಿತವಾದ ಭವ್ಯ ಪರಂಪರೆಯಿದ್ದು ಇದರಿಂದಾಗಿ ನಮ್ಮ ದೇಶದ ಕುಟುಂಬಗಳಲ್ಲಿ ಕರ್ತವ್ಯಗಳು ಸೂಕ್ತ ರೀತಿಯಲ್ಲಿ ಪಾಲನೆಯಾಗುತ್ತಿದೆ. ಇದರಿಂದಾಗಿ ನೆಮ್ಮದಿ ಇದೆ, ಈ ದಿಸೆಯಲ್ಲಿ ಪಾಶ್ಚಾತ್ಯ ದೇಶಗಳಿಗೆ ಭಾರತ ಮಾದರಿಯಾಗಿದೆ ಎಂದು ಹೆಮ್ಮೆ ವ್ಯಕ್ತಪಡಿಸಿದರು.

ಪ್ರತಿಯೊಬ್ಬರಲ್ಲಿಯೂ ರಾಷ್ಟ್ರೀಯ ಹಬ್ಬಗಳನ್ನು ಆಚರಿಸುವ ಸಂಭ್ರಮದ ಜತೆಗೆ ಸಂಕಲ್ಪವಿರಬೇಕು. ದೇಶದ ಸ್ವಾತಂತ್ರ್ಯ ನಂತರದಲ್ಲಿ ಮುಂಬೈ, ಚೆನ್ನೈ, ಕಲ್ಕತ್ತಾ, ತಿರುವಂತನಪುರದ ಹೆಸರು ಬದಲಾವಣೆಯಾದರೂ ಇಂಡಿಯಾ ಎಂಬ ಪದ ಬದಲಾಗದಿರುವುದು ವಿಪರ್ಯಾಸ ಎಂದರು.

ಪ್ರೇರಣಾ ಶಿಕ್ಷಣ ಸಮೂಹದ ಜಂಟಿ ಕಾರ್ಯದರ್ಶಿ ಅರುಣಾದೇವಿ ಮಾತನಾಡಿ, ಸಾತ್ವಿಕ, ಭೌತಿಕ, ಬಂಡವಾಳದ ಬದುಕು ನಡೆಸುತ್ತಿರುವ ದೇಶದ ಜನತೆ ಸುತ್ತಮುತ್ತಲಿನ ಅನ್ಯಾಯದ ವಿರುದ್ಧ ಧ್ವನಿ ಎತ್ತುವ ಅನಿವಾರ್ಯ ಸ್ಥಿತಿ ನಿರ್ಮಾಣವಾಗಿದೆ ಎಂದರು.

ರಾಷ್ಟ್ರೀಯ ಹಬ್ಬಗಳನ್ನು ಬಲವಂತವಾಗಿ ಆಚರಿಸುವಂತಾಗಿದ್ದು ದೇಶಾಭಿಮಾನವನ್ನು ಹೆಚ್ಚಿಸುವಂತಹ ಮೌಲ್ಯಗಳನ್ನು ಜಾಗೃತಗೊಳಿಸುವುದು ಅತ್ಯಗತ್ಯವಾಗಿದೆ. ದೂರದೃಷ್ಟಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡಲ್ಲಿ ದೇಶದ ಸರ್ವಾಂಗೀಣ ಅಭಿವೃದ್ಧಿ ಸಾಧ್ಯ ಎಂದು ತಿಳಿಸಿದರು.

**ಲಿಖಿತ ಸಂವಿಧಾನದ ಜತೆಗೆ ಭಾರತದಲ್ಲಿ ಅಲಿಖಿತವಾದ ಭವ್ಯ ಪರಂಪರೆಯಿದ್ದು ಇದರಿಂದಾಗಿ ನಮ್ಮ ದೇಶದ ಕುಟುಂಬಗಳಲ್ಲಿ ಕರ್ತವ್ಯಗಳು ಸೂಕ್ತ ರೀತಿಯಲ್ಲಿ ಪಾಲನೆಯಾಗುತ್ತಿದೆ. ಇದರಿಂದಾಗಿ ನೆಮ್ಮದಿ ಇದೆ, ಈ ದಿಸೆಯಲ್ಲಿ ಪಾಶ್ಚಾತ್ಯ ದೇಶಗಳಿಗೆ ಭಾರತ ಮಾದರಿಯಾಗಿದೆ.**

ಸಂಸ್ಥೆಯ ಅಧ್ಯಕ್ಷ ಎಂ.ಬಿ. ಶಿವಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಶಾಸಕ ರಾಘವೇಂದ್ರ, ನಿರ್ದೇಶಕಿ ತೇಜಸ್ವಿನಿ, ಜಿಲ್ಲಾ ಜಾಗೃತ ಸಮಿತಿ ಸದಸ್ಯ ಗುರುಮೂರ್ತಿ, ಸಂಸ್ಥೆಯ ಆಡಳಿತ . ಸಮನ್ವಯಾಧಿಕಾರಿ ಕುಬೇರಪ್ಪ ಸಹಿತ ವಿವಿಧ ವಿಭಾಗದ ಪ್ರಾಚಾರ್ಯರು, ಉಪನ್ಯಾಸಕರು, ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

ಸೌಮ್ಯ ಸ್ವಾಗತಿಸಿ, ಪ್ರಭು ನಿರೂಪಿಸಿ, ಶಾಂತಲಾ ವಂದಿಸಿದರು.

ವಿಜಯ ಕರ್ನಾಟಕ ದಿನಾಂಕ : 20-02-2017 ಸೋಮವಾರ ಪುಟ-04

## ಕುಮದ್ವತಿ ಕಾಲೇಜಲ್ಲಿ ರಾಜ್ಯಮಟ್ಟದ ವಿಚಾರ ಸಂಕಿರಣ

# 'ಸೃಜನಶೀಲತೆ ಶಿಕ್ಷಣಕ್ಕೆ ಮುಂದಾಗಿ'

■ **ವಿಕ ಸುದ್ದಿಲೋಕ** ಶಿಕಾರಿಪುರ

ವೇದ ಪುರಾಣ ಕಾಲದಿಂದಲೂ ಗುಣಾತ್ಮಕ, ನೈತಿಕ, ಆಧ್ಯಾತ್ಮಿಕ ಮೌಲ್ಯಗಳಿಂದ ಕೂಡಿದ ಶಿಕ್ಷಣ ಭಾರತೀಯರದ್ದಾಗಿದೆ ಎಂಬುದು ಹೆಮ್ಮೆಯ ಸಂಗತಿ ಎಂದು ಶಾಸಕ ಬಿ.ವೈ. ರಾಘವೇಂದ್ರ ಹೇಳಿದರು.

ಪಟ್ಟಣದಲ್ಲಿ ಶನಿವಾರ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಆಯೋಜಿಸಿದ್ದ 'ಶಿಕ್ಷಣದಲ್ಲಿ ಸಂಯೋಜನೆ, ಗುಣಾತ್ಮಕ ವಿಸ್ತರಣೆ' ಕುರಿತ ಎರಡು ದಿನಗಳ ವಿಚಾರ ಸಂಕಿರಣಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

**ಕ್ಯಾಂಪಸ್**

ದೇಶದ ಶಿಕ್ಷಣ ಪದ್ಧತಿಗೆ ಭವ್ಯ ಇತಿಹಾಸವಿದೆ. ಇದನ್ನು ಬಳಸಿಕೊಂಡು ಇಂದಿನ ವಿದ್ಯಾರ್ಥಿಗಳಿಗೆ ಕೌಶಲ್ಯ, ಸೃಜನಶೀಲತೆ ಶಿಕ್ಷಣ ನೀಡುವುದಕ್ಕೆ ಶಿಕ್ಷಕರು ಮುಂದಾಗಬೇಕೆಂದರು.

ಬೆಂಗಳೂರು ವಿ.ವಿ. ಪ್ರಾಧ್ಯಾಪಕಿ ಹಸೀನ್ ತಾಜ್ ಮಾತನಾಡಿ, ಇಂದು ನಾವು ನೀಡುತ್ತಿರುವ ಶಿಕ್ಷಣಕ್ಕೆ ಅನೇಕ ಸೈದ್ಧಾಂತಿಕ ಹಿನ್ನೆಲೆ ಇದೆ. ತಂತ್ರಜ್ಞಾನ ಬಳಕೆ ಇಂದಿನ ಅನಿವಾರ್ಯ.




**ಶಿಕಾರಿಪುರದ ಕುಮದ್ವತಿ ಬಿಎಡ್ ಕಾಲೇಜಿನಲ್ಲಿ ಆಯೋಜಿಸಿದ್ದ ಎರಡು ದಿನಗಳ ರಾಜ್ಯ ಮಟ್ಟದ ವಿಚಾರ ಸಂಕಿರಣವನ್ನು ಶಾಸಕ ಬಿ.ವೈ.ರಾಘವೇಂದ್ರ ಶನಿವಾರ ಉದ್ಘಾಟಿಸಿದರು.**

ಈ ನೆಲೆಗಟ್ಟಿನಲ್ಲಿ ನವೀನ ಯೋಜನೆ ರೂಪಿಸಿ ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಶಿಕ್ಷಣ ನೀಡಬೇಕೆಂದರು.

ಸರಕಾರದಿಂದ ಜಾರಿಯಾಗಿರುವ ಶೈಕ್ಷಣಿಕ ಯೋಜನೆಗಳು ಪೂರ್ಣ ಪ್ರಮಾಣದಲ್ಲಿ ಅನುಷ್ಠಾನ ಗೊಳ್ಳಬೇಕು. ಎನ್‌ಸಿಟಿಇ, ಯುಜಿಸಿ, ಎನ್‌ಸಿಇಆರ್‌ಟಿ, ಡಿಎಸ್‌ಇಆರ್‌ಟಿಯಂತಹ ಶೈಕ್ಷಣಿಕ ಸಂಸ್ಥೆಗಳು ಇದಕ್ಕೆ ಪೂರಕವಾಗಿವೆ. ವಿದ್ಯಾರ್ಥಿಗಳಲ್ಲಿ ಜ್ಞಾನಾತ್ಮಕ ಹಾಗೂ ಭಾವನಾತ್ಮಕ ವಿಕಾಸ ಉಂಟುಮಾಡಬೇಕು. ಬದಲಾದ ಸನ್ನಿವೇಶಕ್ಕೆ ತೊಡಗಿಸಿ ಕೊಳ್ಳಬೇಕೆಂದರು.

ಕಾರ್ಯಕ್ರಮದಲ್ಲಿ ವಿಚಾರ ಸಂಕಿರಣ ಪುಸ್ತಕ ಬಿಡುಗಡೆಗೊಳಿಸಲಾಯಿತು. ರಾಜ್ಯ ಹಾಗೂ ಹೊರ ರಾಜ್ಯ, ವಿವಿಧ ಶಿಕ್ಷಣ ಸಂಸ್ಥೆಗಳಿಂದ 120ಕ್ಕಿಂತ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಮೈಸೂರು ವಿ.ವಿ. ಪ್ರಾಧ್ಯಾಪಕ ಡಾ.ನಿಂಗಮ್ಮ ಸಿ. ಬೆಟಸೂರು, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ಪ್ರಾಚಾರ್ಯೆ ಡಾ.ಜಯಶ್ರೀ, ದೇವರಾಜ್, ಕಿರಣ್ ಕುಮಾರ್, ನಾಗೇಂದ್ರಪ್ಪ, ಅರ್ಚನಾ, ಪ್ರಿಯಾಂಕ ಮತ್ತಿತರರು ಹಾಜರಿದ್ದರು.

ವಿಜಯವಾಣಿ ದಿನಾಂಕ : 20-02-2017 ಸೋಮವಾರ ಪುಟ-05

# ಸನ್ನಿವೇಶಕ್ಕೆ ಪೂರಕವಾಗಿರಲಿ ತಂತ್ರಜ್ಞಾನ ಬಳಕೆ

## ವಿದ್ಯಾರ್ಥಿಗಳಿಗೆ ಬೆಂಗಳೂರು ವಿಶ್ವವಿದ್ಯಾಲಯ ಪ್ರಾಧ್ಯಾಪಕ ಪ್ರೊ. ಹಸೀನ್‌ತಾಜ್ ಸಲಹೆ

■ **ವಿಜಯವಾಣಿ ಸುದ್ದಿಜಾಲ** ಶಿಕಾರಿಪುರ

ವಿದ್ಯಾರ್ಥಿಗಳಲ್ಲಿ ಜ್ಞಾನಾತ್ಮಕ ಹಾಗೂ ಭಾವನಾತ್ಮಕ ವಿಕಾಸಕ್ಕೆ ತಂತ್ರಜ್ಞಾನದ ಬಳಕೆ ಅನಿವಾರ್ಯವಾಗಿದ್ದು ಸನ್ನಿವೇಶಕ್ಕೆ ಪೂರಕವಾಗಿ ಬಳಸಿಕೊಳ್ಳುವಂತೆ ಬೆಂಗಳೂರು ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಪ್ರೊ. ಹಸೀನ್‌ತಾಜ್ ಸಲಹೆ ನೀಡಿದರು.

ಶಿಕ್ಷಣದಲ್ಲಿ ಸಂಯೋಜನೆ ಮತ್ತು ಗುಣಾತ್ಮಕ ವಿಸ್ತರಣೆ ವಿಷಯಕ್ಕೆ ಸಂಬಂಧಿಸಿದಂತೆ ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣ ಉದ್ಘಾಟಿಸಿ ಮಾತನಾಡಿ, ಶಿಕ್ಷಣ ಹಲವು ರೀತಿಯ ಸೈದ್ಧಾಂತಿಕ ಹಿನ್ನೆಲೆ ಹೊಂದಿದೆ ಎಂದರು.

ಶೈಕ್ಷಣಿಕ ನೆಲೆಗಟ್ಟನ್ನು ಆಧರಿಸಿ ನೂತನ ಯೋಜನೆ, ನಿಯಮ ರೂಪಿಸಿಕೊಂಡು ಪ್ರಾಥಮಿಕ ಹಂತದಿಂದ ಉನ್ನತ ಶಿಕ್ಷಣದವರೆಗೆ ಸಮನ್ವಯತೆ ಸಾಧಿಸುವತ್ತ ಶಿಕ್ಷಕರು, ಶಾಲಾ ಆಡಳಿತ ಮಂಡಳಿ ಗಮನಹರಿಸಬೇಕಿದೆ ಎಂದು ತಿಳಿಸಿದರು.




**ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಹಮ್ಮಿಕೊಂಡಿದ್ದ ವಿಚಾರ ಸಂಕಿರಣದಲ್ಲಿ ಪುಸ್ತಕ ಬಿಡುಗಡೆಗೊಳಿಸಲಾಯಿತು.**

ಶಾಸಕ ಬಿ.ವೈ.ರಾಘವೇಂದ್ರ ಮಾತನಾಡಿ, ಸ್ವಾತಂತ್ರ್ಯ ನಂತರದಲ್ಲಿ ಡಾ.ರಾಧಾಕೃಷ್ಣನ್, ಕೊಠಾರಿ ಮತ್ತಿತರ ಹಲವು ವಿದ್ವಾಂಸರು, ರಾಜಕೀಯ ಮುತ್ಸದ್ದಿಗಳು, ಸಮಾಜಸುಧಾರಕರು, ಶಿಕ್ಷಣ ತಜ್ಞರು ಜಾರಿಗೊಳಿಸಿದ ಹೊಸ ಯೋಜನೆಗಳೇ ದೇಶದ ಶೈಕ್ಷಣಿಕ ವ್ಯವಸ್ಥೆಯ ಕ್ರಾಂತಿಕಾರಕ ಬದಲಾವಣೆಗೆ ಕಾರಣ ಎಂದರು.

ಮೈಸೂರು ವಿವಿ ಪ್ರಾಧ್ಯಾಪಕಿ ಡಾ. ನಿಂಗಮ್ಮ ಸಿ.ಬೆಟಸೂರು, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಅಧ್ಯಕ್ಷ ಎಂ.ಬಿ.ಶಿವಕುಮಾರ್,ಪ್ರಾಚಾರ್ಯೆ ಡಾ. ಜಯಶ್ರೀ ಉಪಸ್ಥಿತರಿದ್ದರು.

ನಾಗೇಂದ್ರಪ್ಪ ಸ್ವಾಗತಿಸಿದರು. ಅರ್ಚನಾ ಹಾಗೂ ಪ್ರಿಯಾಂಕ ನಿರೂಪಿಸಿದರು. ಡಾ. ಕಿರಣಕುಮಾರ್ ವಂದಿಸಿದರು.

ಪ್ರಜಾವಾಣಿ ದಿನಾಂಕ : 20-02-2017, ಸೋಮವಾರ ಪುಟ-03

# ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣ ಪೂರಕವಾಗಲಿ: ಪ್ರೊ. ತಳವಾರ್

ಪ್ರಜಾವಾಣಿ ವಾರ್ತೆ

**ಶಿಕಾರಿಪುರ:** ಮಕ್ಕಳ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾಗುವ ಗುಣಾತ್ಮಕ ಶಿಕ್ಷಣ ನೀಡುವ ಅಗತ್ಯತೆ ಇದೆ ಎಂದು ಬೆಂಗಳೂರು ವಿಶ್ವವಿದ್ಯಾಲಯ ಶಿಕ್ಷಣ ವಿಭಾಗದ ನಿವೃತ್ತ ಪ್ರಾಧ್ಯಾಪಕ ಪ್ರೊ.ಎಂ.ಎಸ್.ತಳವಾರ್ ಹೇಳಿದರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಭಾನುವಾರ ಸಮನ್ವಯ ಶಿಕ್ಷಣ ಹಾಗೂ ಗುಣಾತ್ಮಕ ಶಿಕ್ಷಣದ ಬೆಳವಣಿಗೆ ಕುರಿತು ನಡೆದ ರಾಷ್ಟ್ರಮಟ್ಟದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

'ಮುಂದಿನ ದಿನಗಳಲ್ಲಿ ಎದುರಾಗುವ ಸವಾಲುಗಳನ್ನು ಎದುರಿಸಲು ಗುಣಾತ್ಮಕ ಶಿಕ್ಷಣದ ಅಗತ್ಯತೆ ಇದೆ. ಅದನ್ನು ಮಕ್ಕಳಿಗೆ ನೀಡುವ ಜವಾಬ್ದಾರಿ ಕೂಡ ಶಿಕ್ಷಕರ ಮೇಲಿದೆ ಎಂದರು.

ಕುವೆಂಪು ವಿಶ್ವವಿದ್ಯಾಲಯ ದೈಹಿಕ ಶಿಕ್ಷಣ ವಿಭಾಗದ ನಿರ್ದೇಶಕ ಡಾ.ಎಸ್.ಎಂ.ಪ್ರಕಾಶ್ ಮಾತನಾಡಿ, 'ಶಿಕ್ಷಕರು ನಿರಂತರ ಓದುವ ಅಭ್ಯಾಸವಿಟ್ಟುಕೊಳ್ಳಬೇಕು. ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಲು ಶ್ರಮಿಸಬೇಕು. ಗುಣಾತ್ಮಕ ಶಿಕ್ಷಣ ನೀಡುವುದರಿಂದ ಶಿಕ್ಷಣ ಕ್ಷೇತ್ರದ ನೀತಿ, ನಿಯಮಗಳು ಹಾಗೂ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನಗೊಳ್ಳುತ್ತವೆ' ಎಂದು ತಿಳಿಸಿದರು.



ಶಿಕಾರಿಪುರದಲ್ಲಿ ಭಾನುವಾರ ಸಮನ್ವಯ ಶಿಕ್ಷಣ ಹಾಗೂ ಗುಣಾತ್ಮಕ ಶಿಕ್ಷಣದ ಬೆಳವಣಿಗೆ ವಿಷಯ ಕುರಿತು ನಡೆದ ರಾಷ್ಟ ಮಟ್ಟದ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ನಿವೃತ್ತ ಪ್ರಾಧ್ಯಾಪಕ ಪ್ರೊ. ಎಂ.ಎಸ್.ತಳವಾರ್ ಮಾತನಾಡಿದರು.

**ಮುಖ್ಯಾಂಶಗಳು**

- **ಸವಾಲು ಎದುರಿಸಲು ಗುಣಾತ್ಮಕ ಶಿಕ್ಷಣ ಅಗತ್ಯ**
- **ಶಿಕ್ಷಕರು ನಿರಂತರ ಓದುವ ಅಭ್ಯಾಸ ರೂಢಿಸಿಕೊಳ್ಳಿ**
- **ಕಾಡುತ್ತಿರುವ ಗುಣಾತ್ಮಕ ಶಿಕ್ಷಣದ ಕೊರತೆ**

ಅಧ್ಯಕ್ಷತೆ ವಹಿಸಿದ್ದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ ಮಾತನಾಡಿ, 'ಪ್ರಸ್ತುತ ದಿನಗಳಲ್ಲಿ ಗುಣಾತ್ಮಕ ಶಿಕ್ಷಣದ ಕೊರತೆ ಎದ್ದು ಕಾಣುತ್ತಿದೆ. ಪ್ರತಿ ಮಗುವಿನಲ್ಲಿ ವಿಶಿಷ್ಟ ಪ್ರತಿಭೆಯಿರುತ್ತದೆ. ಶಿಕ್ಷಕರು ಅದಕ್ಕೆ ನೀರೆರೆಯುವ ಕೆಲಸ ಮಾಡಬೇಕು ಎಂದು ಕರೆ ನೀಡಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಸಮನ್ವಯ ಆಡಳಿತಾಧಿಕಾರಿ ಕುಬೇರಪ್ಪ, ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲರಾದ ಡಾ.ಜಯಶ್ರೀ, ಉಪನ್ಯಾಸಕರು ಉಪಸ್ಥಿತರಿದ್ದರು.

ಹೊಸದಿಗಂತ ದಿನಾಂಕ : 28-02-2017 ಮಂಗಳವಾರ ಪುಟ-03



# ಬಿಎಸ್‌ವೈ ಸಾರ್ವಜನಿಕ ಜೀವನ ಇತರರಿಗೆ ಮಾದರಿ : ಗುರುಮೂರ್ತಿ

ಶಿಕಾರಿಪುರ : ಸಮಾಜಮುಖಿ ಚಿಂತನೆ, ಬಡವರ ಪರವಾದ ಮನಸ್ಸು, ಮಾನಸಿಕವಾಗಿ ನ್ಯಾಯಕ್ಕಾಗಿ ಹೋರಾಡುವ ಪ್ರಾಮಾಣಿಕ ಛಲವಿದ್ದಲ್ಲಿ ವ್ಯಕ್ತಿ ಶಕ್ತಿಯಾಗಲು ಸಾಧ್ಯವಿದೆ. ಈ ದಿಸೆಯಲ್ಲಿ ಯಡಿಯೂರಪ್ಪ ಅವರ ಸಾರ್ವಜನಿಕ ಜೀವನ ಸಾಮಾಜಿಕ ಕಳಕಳಿಯ ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದು ಜಿಲ್ಲಾ ಜಾಗೃತ ಸಮಿತಿ ಸದಸ ಕೆ.ಎಸ್. ಗುರುಮೂರ್ತಿ ತಿಳಿಸಿದರು.

ಸೋಮವಾರ ಪಟ್ಟಣದ ಮಂಗಳಭವನದಲ್ಲಿ ಸಂಸದ ಯಡಿಯೂರಪ್ಪ ಅವರ ಹುಟ್ಟುಹಬ್ಬದ ಅಂಗವಾಗಿ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಹಾಗೂ ಸಹ್ಯಾದ್ರಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ನಡೆದ ಉಚಿತ ಬೃಹತ್ ಆರೋಗ್ಯ ತಪಾಸಣಾ ಶಿಬಿರದ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಭೂಮಿಯಲ್ಲಿ ಜನಿಸಿದ ಪ್ರತಿಯೊಬ್ಬರೂ ವ್ಯಕ್ತಿಯಾಗಿ ಸಮಾಜಕ್ಕಾಗಿ ಬದುಕುವ ರೀತಿಗೆ ಯಡಿಯೂರಪ್ಪ ಅವರು ಸಾಕ್ಷಿಯಾಗಿದ್ದಾರೆ ಎಂದ ಅವರು ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಾಮಾನ್ಯ ಕಾರ್ಯಕರ್ತರಾಗಿ ಶಿಕಾರಿಪುರಕ್ಕೆ ಆಗಮಿಸಿ ಬಿಜೆಪಿ ಮೂಲಕ ಸಮಾಜದ ಸೇವೆಗಾಗಿ ತೊಡಗಿಸಿಕೊಂಡ ಯಡಿಯೂರಪ್ಪ ಅವರ ಹುಟ್ಟುಹಬ್ಬ ನಾಡಿನ ಹಲವೆಡೆ ಆಚರಿಸುವ ರೀತಿಯಲ್ಲಿ ಅವರು ಜನಾನುರಾಗಿಯಾಗಿದ್ದಾರೆ ಎಂದರು.

> ಬಿ.ಎಸ್. ಯಡಿಯೂರಪ್ಪ ಅವರ ಹುಟ್ಟುಹಬ್ಬದ ಅಂಗವಾಗಿ ಶಾಸಕ ಬಿ.ವೈ. ರಾಘವೇಂದ್ರ ದಂಪತಿ ಶಿಕಾರಿಪುರದ ಗ್ರಾಮದೇವತೆ ಶ್ರೀ ಹುಚ್ಚೂರಾಯ ಸ್ವಾಮಿ ಹಾಗೂ ಶ್ರೀ ರಾಘವೇಂದ್ರ ಸನ್ನಿಧಿಯಲ್ಲಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥನೆ ಸಲ್ಲಿಸಿದರು. ಬಿಎಸ್‌ವೈ ಅಭಿಮಾನಿಗಳಿಂದ ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಮಂಗಳಭವನದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಕಾರ್ಯಕ್ರಮವನ್ನು ಉದ್ಘಾಟಿಸಿದ ಶಾಸಕ ಬಿ.ವೈ. ರಾಘವೇಂದ್ರ ಮಾತನಾಡಿ, ಬಡವರ ಪರ ಕಾಳಜಿ, ಹೋರಾಟ, ಛಲದಿಂದ ವ್ಯಕ್ತಿ ಜನಮನ್ನಣೆ ಗಳಿಸಲು ಸಾಧ್ಯ ಎಂಬುದಕ್ಕೆ ಯಡಿಯೂರಪ್ಪನವರು ಸ್ಪಷ್ಟ ನಿದರ್ಶನವಾಗಿದ್ದಾರೆ ಎಂದರು.

ಪ್ರಧಾನ ಮಂತ್ರಿ ಜೀವನಜ್ಯೋತಿ ಭೀಮಾ ಯೋಜನೆಯ ಫಲಾನುಭವಿಗಳಿಗೆ 2 ಲಕ್ಷದ ಚೆಕ್ ವಿತರಿಸಲಾಯಿತು. ಸಾಗರ, ಶಿಕಾರಿಪುರ, ತೀರ್ಥಹಳ್ಳಿಗೆ ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ವತಿಯಿಂದ 3 ಪ್ರತ್ಯೇಕ ಆಂಬ್ಯುಲೆನ್ಸ್ ಕೊಡುಗೆಯಾಗಿ ನೀಡಲಾಯಿತು.

ಪುರಸಭಾಧ್ಯಕ್ಷೆ ರೂಪಕಲಾ, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ತೇಜಸ್ವಿನಿ, ಲೀಡ್ ಬ್ಯಾಂಕ್ ಡಿವಿಜನಲ್ ಮ್ಯಾನೇಜರ್ ಕಶ್ಯಪ್, ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ. ಪ್ರಶಾಂತ ದೇಸಾಯಿ ಮತ್ತಿತರರಿದ್ದರು.

ಕನ್ನಡ ಪ್ರಭ ದಿನಾಂಕ : 28-02-2017 ಮಂಗಳವಾರ ಪುಟ-03

# ಯಡಿಯೂರಪ್ಪ ಸಾಮಾಜಿಕ ಕಳಕಳಿ ಎಲ್ಲರಿಗೂ ಮಾದರಿ

• **ಕನ್ನಡಪ್ರಭ ವಾರ್ತೆ** ಶಿಕಾರಿಪುರ

ಸಮಾಜಮುಖಿ ಚಿಂತನೆ, ಬಡವರ ಪರವಾದ ಮನಸ್ಸು, ನ್ಯಾಯಕ್ಕಾಗಿ ಹೋರಾಡುವ ಪ್ರಾಮಾಣಿಕ ಛಲವಿದ್ದಲ್ಲಿ ವ್ಯಕ್ತಿ ಶಕ್ತಿಯಾಗಲು ಸಾಧ್ಯವಿದ್ದು ಈ ದಿಸೆಯಲ್ಲಿ ಯಡಿಯೂರಪ್ಪನವರ ಸಾರ್ವಜನಿಕ ಜೀವನ ಸಾಮಾಜಿಕ ಕಳಕಳಿ ಪ್ರತಿಯೊಬ್ಬರಿಗೂ ಮಾದರಿಯಾಗಿದೆ ಎಂದು ಜಿಲ್ಲಾ ಜಾಗೃತ ಸಮಿತಿ ಸದಸ್ಯ ಕೆ.ಎಸ್ ಗುರುಮೂರ್ತಿ ತಿಳಿಸಿದರು.

ಸೋಮವಾರ ಮಂಗಳಭವನದಲ್ಲಿ ಸಂಸದ ಯಡಿಯೂರಪ್ಪನವರ ಹುಟ್ಟುಹಬ್ಬದ ಅಂಗವಾಗಿ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಹಾಗೂ ಸಹ್ಯಾದ್ರಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಅವರು ಮಾತನಾಡಿದರು.

ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಾಮಾನ್ಯ ಕಾರ್ಯಕರ್ತರಾಗಿ ಶಿಕಾರಿಪುರಕ್ಕೆ ಆಗಮಿಸಿ ಬಿಜೆಪಿ ಮೂಲಕ ಸಮಾಜದ ಸೇವೆಗಾಗಿ ತೊಡಗಿಸಿಕೊಂಡ ಯಡಿಯೂರಪ್ಪನವರ ಹುಟ್ಟುಹಬ್ಬ ನಾಡಿನ ಹಲವೆಡೆ ಆಚರಿಸುವ ರೀತಿಯಲ್ಲಿ ಅವರು ಜನಾನುರಾಗಿಯಾಗಿದ್ದಾರೆ ಎಂದರು.

ಶಾಸಕ ರಾಘವೇಂದ್ರ ಮಾತನಾಡಿ, ಬಡವರ ಪರ ಕಾಳಜಿ, ಹೋರಾಟ, ಛಲದಿಂದ ವ್ಯಕ್ತಿ ಜನಮನ್ನಣೆ ಗಳಿಸಲು ಸಾಧ್ಯ ಎಂಬುದಕ್ಕೆ ಯಡಿಯೂರಪ್ಪನವರು ಸ್ಪಷ್ಟ ನಿದರ್ಶನವಾಗಿದ್ದಾರೆ. ಪ್ರಧಾನ ಮಂತ್ರಿ ಜೀವನಜ್ಯೋತಿ ಭೀಮಾ ಯೋಜನೆಯ ಫಲಾನುಭವಿಗಳಿಗೆ 2 ಲಕ್ಷದ ರು. ಚೆಕ್ ವಿತರಿಸಲಾಯಿತು. ಸಾಗರ, ಶಿಕಾರಿಪುರ, ತೀರ್ಥಹಳ್ಳಿಗೆ ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ವತಿಯಿಂದ 3 ಪ್ರತ್ಯೇಕ ಆಂಬ್ಯುಲೆನ್ಸ್ ಕೊಡುಗೆಯಾಗಿ ನೀಡಲಾಯಿತು.

ಪುರಸಭಾಧ್ಯಕ್ಷೆ ರೂಪಕಲಾ, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಅಧ್ಯಕ್ಷ ಎಂ.ಬಿ ಶಿವಕುಮಾರ್, ತೇಜಸ್ವಿನಿ, ಲೀಡ್ ಬ್ಯಾಂಕ್ ಡಿವಿಜನಲ್ ಮ್ಯಾನೇಜರ್ ಕಶ್ಯಪ್, ಸಹ್ಯಾದ್ರಿ ನಾರಾಯಣ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಶಾಂತ ದೇಸಾಯಿ, ತಾಪಂ ಅಧ್ಯಕ್ಷ ಪರಮೇಶ್ವರಪ್ಪ, ಎಪಿಎಂಸಿ ಅಧ್ಯಕ್ಷ ಸತೀಶ್, ತಾ. ವೈದ್ಯಾಧಿಕಾರಿ ಡಾ.ಮಂಜುನಾಥ, ಡಾ. ಶ್ರೀನಿವಾಸ್, ಡಾ.ಮೋಹನ್, ತಾ. ಬಿಜೆಪಿ ಅಧ್ಯಕ್ಷ ರೇವಣಪ್ಪ, ಮುಖಂಡ ಶಾಂತವೀರಪ್ಪಗೌಡ, ಕೆ. ಶೇಖರಪ್ಪ, ರಾಮಾನಾಯ್ಕ, ನಿವೇದಿತಾ, ಕಬಾಡಿ ರಾಜು ಮತ್ತಿತರರು ಉಪಸ್ಥಿತರಿದ್ದರು.

ವಿವಿಧ ಕಾರ್ಯಕ್ರಮ:

ಹುಟ್ಟುಹಬ್ಬದ ಅಂಗವಾಗಿ ಬೆಳಗ್ಗೆ ಗ್ರಾಮದೇವತೆ ಹುಚ್ಚುರಾಯಸ್ವಾಮಿ ಸನ್ನಿಧಿಯಲ್ಲಿ ಶಾಸಕ ರಾಘವೇಂದ್ರ ದಂಪತಿ ವಿಶೇಷ ಪೂಜೆ ಸಲ್ಲಿಸಿದರು. ನಂತರದಲ್ಲಿ ಸಮೀಪದ ರಾಘವೇಂದ್ರ ಸ್ವಾಮಿ ಮಠಕ್ಕೆ ತೆರಳಿ ಪ್ರಾರ್ಥಿಸಿದರು. ಸರ್ಕಾರಿ ಆಸ್ಪತ್ರೆಯ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ಮಂಗಳಭವನದಲ್ಲಿ ನಡೆದ ರಕ್ತದಾನ ಶಿಬಿರದಲ್ಲಿ ನೂರಾರು ಕಾರ್ಯಕರ್ತರು ಪಾಲ್ಗೊಂಡಿದ್ದರು.

ಶಿಕಾರಿಪುರ



ಸಂಸದ ಯಡಿಯೂರಪ್ಪನವರ ಹುಟ್ಟುಹಬ್ಬದ ಅಂಗವಾಗಿ ಶಿಕಾರಿಪುರದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣಾ ಶಿಬಿರವನ್ನು ಶಾಸಕ ರಾಘವೇಂದ್ರ ಉದ್ಘಾಟಿಸಿದರು.

ವಿಜಯವಾಣಿ ದಿನಾಂಕ : 28-02-2017 ಮಂಗಳವಾರ ಪುಟ-12

# ಬಡವರ ಪರ ಕಾಳಜಿ, ಹೋರಾಟದಿಂದ ಜನಮನ್ನಣೆ

■ ವಿಜಯವಾಣಿ ಸುದ್ದಿಜಾಲ ಶಿಕಾರಿಪುರ

ಬಡವರ ಪರ ಕಾಳಜಿ, ಹೋರಾಟ, ಛಲದಿಂದ ವ್ಯಕ್ತಿ ಜನಮನ್ನಣೆ ಗಳಿಸಲು ಸಾಧ್ಯ ಎಂಬುದಕ್ಕೆ ಯಡಿಯೂರಪ್ಪ ಸ್ಪಷ್ಟ ನಿದರ್ಶನ ಎಂದು ಶಾಸಕ ಬಿ.ವೈ.ರಾಘವೇಂದ್ರ ಹೇಳಿದರು.

ಬಿಎಸ್‌ವೈ ಜನ್ಮದಿನದ ಅಂಗವಾಗಿ ಪಟ್ಟಣದ ಮಂಗಳಭವನದಲ್ಲಿ ಸೋಮವಾರ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಹಾಗೂ ಸಹ್ಯಾದ್ರಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ವತಿಯಿಂದ ಹಮ್ಮಿಕೊಂಡಿದ್ದ ಉಚಿತ ಆರೋಗ್ಯ ತಪಾಸಣಾ ಶಿಬಿರ ಉದ್ಘಾಟಿಸಿ ಮಾತನಾಡಿದರು.

ಸಮಾಜದ ಕಟ್ಟಕಡೆಯ ವ್ಯಕ್ತಿ ಸರ್ಕಾರದ ಸೌಲಭ್ಯದಿಂದ ವಂಚಿತವಾಗದಂತೆ ಅಧಿಕಾರ ದೊರೆತ ಅವಧಿಯಲ್ಲಿ ಹಲವು ಯೋಜನೆ ರೂಪಿಸಿದ್ದಾರೆ. ರಾಜ್ಯಾದ್ಯಂತ ಬಿಜೆಪಿ ಚುನಾಯಿತ ಪ್ರತಿನಿಧಿಗಳ ಆಯ್ಕೆಯಲ್ಲಿ ಯಡಿಯೂರಪ್ಪನವರ ಶ್ರಮವಿದೆ ಎಂದು ತಿಳಿಸಿದರು.

ಯಡಿಯೂರಪ್ಪ ಅವರ ಅಗಾಧ ಶಕ್ತಿಯ ಬಗ್ಗೆ ವಿಶ್ವಾಸವಿರಿಸಿದ ಪ್ರಧಾನಿ ಮೋದಿ ರಾಜ್ಯದ ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಘೋಷಿಸಿದ್ದಾರೆ ಎಂದರು.

ಜಿಲ್ಲಾ ಜಾಗೃತ ಸಮಿತಿ ಸದಸ್ಯ ಕೆ.ಎಸ್.ಗುರುಮೂರ್ತಿ ಮಾತನಾಡಿ, ಸಮಾಜಮುಖಿ ಚಿಂತನೆ, ಬಡವರ ಪರವಾದ ಮನಸ್ಸು, ಮಾನಸಿಕವಾಗಿ ನ್ಯಾಯಕ್ಕಾಗಿ ಹೋರಾಡುವ ಪ್ರಾಮಾಣಿಕ ಛಲವಿದ್ದಲ್ಲಿ ವ್ಯಕ್ತಿ ಶಕ್ತಿಯಾಗಲು ಸಾಧ್ಯವಿದೆ. ಈ ದಿಸೆಯಲ್ಲಿ ಯಡಿಯೂರಪ್ಪನವರ ಸಾಮಾಜಿಕ ಕಳಕಳಿ ಪ್ರತಿಯೊಬ್ಬರಿಗೂ ಮಾದರಿ ಎಂದರು.

ಸಾರ್ವಜನಿಕ ಬದುಕಿನಲ್ಲಿ ಹಲವು ಹೋರಾಟಗಳ ಮೂಲಕ ಮುಖ್ಯಮಂತ್ರಿ ಹುದ್ದೆವರೆಗೂ ವಿವಿಧ ಸ್ಥಾನಗಳನ್ನು ಅಲಂಕರಿಸಿದ್ದಾರೆ. ಇವುಗಳ ನಡುವೆ ಹಲವು ಆರೋಪ, ಪ್ರತ್ಯಾರೋಪಗಳು ಎದುರಾದರೂ ಜನತೆಯ ಆಶೀರ್ವಾದವನ್ನು ಮಾತ್ರ ನಂಬಿಕೊಂಡು ಲೋಕಸಭೆ ಚುನಾವಣೆಯಲ್ಲಿ ಅತಿ ಹೆಚ್ಚು ಅಂತರದಿಂದ ಆಯ್ಕೆಯಾಗಿದ್ದಾರೆ ಎಂದು ತಿಳಿಸಿದರು.

## ವಿವಿಧ ಕಾರ್ಯಕ್ರಮ

**ಬಿಎಸ್‌ವೈ ಜನ್ಮದಿನದ ಅಂಗವಾಗಿ ಗ್ರಾಮದೇವತೆ ಶ್ರೀ ಹುಚ್ಚುರಾಯಸ್ವಾಮಿ ಸನ್ನಿಧಿಯಲ್ಲಿ ಶಾಸಕ ಬಿ.ವೈ. ರಾಘವೇಂದ್ರ ದಂಪತಿ ವಿಶೇಷ ಪೂಜೆ ಸಲ್ಲಿಸಿ ಪ್ರಾರ್ಥಿಸಿದರು. ಬಳಿಕ ರಾಘವೇಂದ್ರ ಸ್ವಾಮಿ ಮಠಕ್ಕೆ ತೆರಳಿ ಪೂಜೆ ಸಲ್ಲಿಸಿದರು. ರೋಗಿಗಳಿಗೆ ಹಣ್ಣು ವಿತರಿಸಲಾಯಿತು.**

ಪ್ರಧಾನ ಮಂತ್ರಿ ಜೀವನಜ್ಯೋತಿ ಬಿಮಾ ಯೋಜನೆಯ ಫಲಾನುಭವಿಗಳಿಗೆ 2 ಲಕ್ಷ ರೂ. ಮೊತ್ತದ ಚೆಕ್ ವಿತರಿಸಲಾಯಿತು. ಸಾಗರ, ಶಿಕಾರಿಪುರ, ತೀರ್ಥಹಳ್ಳಿಗೆ ಸಹ್ಯಾದ್ರಿ ನಾರಾಯಣ ಆಸ್ಪತ್ರೆ ವತಿಯಿಂದ 3 ಪ್ರತ್ಯೇಕ ಆಂಬುಲೆನ್ಸ್ ಕೊಡುಗೆಯಾಗಿ ನೀಡಲಾಯಿತು.

ಪುರಸಭಾಧ್ಯಕ್ಷೆ ರೂಪಕಲಾ, ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆ ಅಧ್ಯಕ್ಷ ಎಂ.ಬಿ.ಶಿವಕುಮಾರ್, ತೇಜಸ್ವಿನಿ, ಲೀಡ್ ಬ್ಯಾಂಕ್ ಡಿವಿಜಿನಲ್ ಮ್ಯಾನೇಜರ್ ಕಶ್ಯಪ್, ಸಹ್ಯಾದ್ರಿ ನಾರಾಯಣ ಆಸ್ಪತ್ರೆ ವ್ಯವಸ್ಥಾಪಕ ನಿರ್ದೇಶಕ ಡಾ.ಪ್ರಶಾಂತ ದೇಸಾಯಿ, ತಾಪಂ ಅಧ್ಯಕ್ಷ ಪರಮೇಶ್ವರಪ್ಪ, ಎಪಿಎಂಸಿ ಅಧ್ಯಕ್ಷ ಸತೀಶ್, ತಾಲೂಕು ವೈದ್ಯಾಧಿಕಾರಿ ಡಾ.ಮಂಜುನಾಥ, ಡಾ.ಶ್ರೀನಿವಾಸ್, ಡಾ.ಮೋಹನ್, ರೇವಣಪ್ಪ, ಶಾಂತವೀರಪ್ಪಗೌಡ, ಕೆ.ಶೇಖರಪ್ಪ, ರಾಮಾನಾಯ್ಕ, ನಿವೇದಿತಾ, ಕಬಾಡಿ ರಾಜು ಉಪಸ್ಥಿತರಿದ್ದರು.



ಸಂಸದ ಬಿ.ಎಸ್.ಯಡಿಯೂರಪ್ಪ ಜನ್ಮದಿನದ ಅಂಗವಾಗಿ ಶಿಕಾರಿಪುರದಲ್ಲಿ ಆಯೋಜಿಸಿದ್ದ ಆರೋಗ್ಯ ತಪಾಸಣಾ ಶಿಬಿರವನ್ನು ಶಾಸಕ ಬಿ.ವೈ.ರಾಘವೇಂದ್ರ ಉದ್ಘಾಟಿಸಿದರು. ಶಾಂತವೀರಪ್ಪ ಗೌಡ, ರೇವಣಪ್ಪ ಮತ್ತಿತರರು ಇದ್ದಾರೆ.

ಪ್ರಜಾವಾಣಿ ದಿನಾಂಕ : 28-02-2017 ಮಂಗಳವಾರ ಪುಟ-03

# 'ಎಲ್ಲಾ ವರ್ಗಗಳ ಅಭಿವೃದ್ಧಿಗೆ ಯಡಿಯೂರಪ್ಪ ಒತ್ತು'

ಶಿಕಾರಿಪುರ: 'ಮುಖ್ಯಮಂತ್ರಿಯಾಗಿದ್ದಾಗ ಯಡಿಯೂರಪ್ಪ ಎಲ್ಲಾ ವರ್ಗಗಳ ಅಭಿವೃದ್ಧಿಗೆ ಪೂರಕವಾದ ಯೋಜನೆಗಳನ್ನು ಜಾರಿಗೊಳಿಸಿದ್ದರು' ಎಂದು ಶಾಸಕ ಬಿ.ವೈ. ರಾಘವೇಂದ್ರ ಸ್ಮರಿಸಿದರು.

ಯಡಿಯೂರಪ್ಪ ಜನ್ಮದಿನಾಚರಣೆ ಪ್ರಯುಕ್ತ ಪಟ್ಟಣದ ಮಂಗಳಭವನದಲ್ಲಿ ಸೋಮವಾರ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಹಾಗೂ ಸಹ್ಯಾದ್ರಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಆಶ್ರಯದಲ್ಲಿ ನಡೆದ 'ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರ'ವನ್ನು ಉದ್ಘಾಟಿಸಿ ಅವರು ಮಾತನಾಡಿದರು.

'ಅಧಿಕಾರ ಶಾಶ್ವತ ಅಲ್ಲ. ಅಧಿಕಾರಾವಧಿಯಲ್ಲಿ ನಡೆದ ಉತ್ತಮ ಕಾರ್ಯಗಳೇ ಶಾಶ್ವತ. ಯಡಿಯೂರಪ್ಪ ರಾಷ್ಟ್ರ ಮಟ್ಟದ ನಾಯಕರಾಗಿ ಬೆಳೆಯಲು ತಾಲ್ಲೂಕಿನ ಜನತೆಯ ಆಶೀರ್ವಾದವೇ ಕಾರಣ' ಎಂದರು.

'ಉತ್ತರ ಪ್ರದೇಶದಲ್ಲಿ ವಿಧಾನಸಭೆ ಚುನಾವಣೆ ನಡೆದರೂ ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ ಹೆಸರು ಘೋಷಣೆಯಾಗಿಲ್ಲ. ಆದರೆ, ಯಡಿಯೂಪ್ಪ ಅವರ ದಕ್ಷತೆ ಕಂಡು ಪ್ರಧಾನಿ ನರೇಂದ್ರ ಮೋದಿ ಚುನಾವಣೆಗೆ ಮುನ್ನವೇ ಯಡಿಯೂರಪ್ಪ ರಾಜ್ಯದ ಬಿಜೆಪಿ ಮುಖ್ಯಮಂತ್ರಿ ಅಭ್ಯರ್ಥಿ ಎಂದು ಘೋಷಣೆ ಮಾಡಿದ್ದಾರೆ' ಎಂದು ತಿಳಿಸಿದರು.

ಜಿಲ್ಲಾ ಬಿಜೆಪಿ ಘಟಕ ಪ್ರಧಾನ ಕಾರ್ಯದರ್ಶಿ ಕೆ.ಎಸ್. ಗುರುಮೂರ್ತಿ ಮಾತನಾಡಿ, 'ಜೀತದಾಳು ಪದ್ಧತಿ ಹಾಗೂ ಬಗರ್‌ಹುಕುಂ ಸಾಗುವಳಿದಾರರನ್ನು ಒಕ್ಕಲೆಬ್ಬಿಸುವುದರ ವಿರುದ್ಧ ಯಡಿಯೂರಪ್ಪ ಹೋರಾಟ ನಡೆಸಿದ್ದರು' ಎಂದು ನೆನಪಿಸಿಕೊಂಡರು.

'ಕಾಡಾ' ಮಾಜಿ ಅಧ್ಯಕ್ಷ ಕೆ. ಶೇಖರಪ್ಪ, ಜಿಲ್ಲಾ ಪಂಚಾಯ್ತಿ ಸದಸ್ಯರಾದ ರೇಣುಕಾ ಹನುಮಂತಪ್ಪ, ಮಮತಾಸಾಲಿ, ಅರುಂಧತಿ ರಾಜೇಶ್, ತಾಲ್ಲೂಕು ಪಂಚಾಯ್ತಿ ಅಧ್ಯಕ್ಷ ಪರಮೇಶ್ವರಪ್ಪ, ಉಪಾಧ್ಯಕ್ಷೆ ರೂಪಾ ದಯಾನಂದ್, ಸಹ್ಯಾದ್ರಿ ನಾರಾಯಣ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಪ್ರಶಾಂತ್ ದೇಸಾಯಿ, ಲೀಡ್ ಬ್ಯಾಂಕ್ ಮ್ಯಾನೇಜರ್ ಕಶ್ಯಪ್, ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಸಮನ್ವಯಾಧಿಕಾರಿ ಕುಬೇರಪ್ಪ, ತಾಲ್ಲೂಕು ವೈದ್ಯಾಧಿಕಾರಿ ಮಂಜುನಾಥ ನಾಗಲೀಕರ್, ಸಾರ್ವಜನಿಕ ಆಸ್ಪತ್ರೆ ಆಡಳಿತಾಧಿಕಾರಿ ಡಾ.ಶ್ರೀನಿವಾಸ್ ಇದ್ದರು. ಇದೇ ಸಂದರ್ಭದಲ್ಲಿ ಸಾಗರ, ತೀರ್ಥಹಳ್ಳಿ ಹಾಗೂ ಶಿಕಾರಿಪುರ ತಾಲ್ಲೂಕಿನ ಜನರ ಅನುಕೂಲಕ್ಕಾಗಿ ಉಚಿತ ಮೂರು ಆಂಬುಲೆನ್ಸ್ ವಾಹನ ಸೇವೆಗೆ ಶಾಸಕ ಬಿ.ವೈ. ರಾಘವೇಂದ್ರ ಚಾಲನೆ ನೀಡಿದರು.



ಸಂಸದ ಬಿ.ಎಸ್. ಯಡಿಯೂರಪ್ಪ ಜನ್ಮ ದಿನಾಚರಣೆ ಪ್ರಯುಕ್ತ ಶಿಕಾರಿಪುರದ ಮಂಗಳ ಭವನದಲ್ಲಿ ಸೋಮವಾರ ನಡೆದ ರಕ್ತದಾನ ಶಿಬಿರ ಹಾಗೂ ಉಚಿತ ಆರೋಗ್ಯ ತಪಾಸಣಾ ಶಿಬಿರದಲ್ಲಿ ಉಚಿತ ಆಂಬುಲೆನ್ಸ್ ಸೇವೆಗೆ ಶಾಸಕ ಬಿ.ವೈ. ರಾಘವೇಂದ್ರ ಚಾಲನೆ ನೀಡಿದರು.

ಪ್ರಜಾವಾಣಿ ದಿನಾಂಕ : 05-05-2017, ಶುಕ್ರವಾರ ಪುಟ-03

# ತಂತ್ರಜ್ಞಾನ ಬಳಸಿ ಉತ್ತಮ ಶಿಕ್ಷಣ ನೀಡಿ

## ಪೌರತ್ವ ತರಬೇತಿ ಶಿಬಿರ ಉದ್ಘಾಟನಾ ಸಮಾರಂಭದಲ್ಲಿ ಶಾಸಕ ರಾಘವೇಂದ್ರ

ಪ್ರಜಾವಾಣಿ ವಾರ್ತೆ

**ಶಿಕಾರಿಪುರ:** ಸ್ವಾರ್ಥ ಜೀವನ ನಡೆಸದೇ, ದೇಶದ ಅಭಿವೃದ್ಧಿಗೆ ಕೊಡುಗೆ ನೀಡಬೇಕು ಎಂದು ಶಾಸಕ ಬಿ.ವೈ. ರಾಘವೇಂದ್ರ ಪ್ರಶಿಕ್ಷಣಾರ್ಥಿಗಳಿಗೆ ಕಿವಿಮಾತು ಹೇಳಿದರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ ಪೌರತ್ವ ತರಬೇತಿ ಶಿಬಿರದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಜವಾಬ್ದಾರಿಯುತ ನಾಗರಿಕರಾಗಲು ಇಂಥ ಶಿಬಿರಗಳು ಸಹಕಾರಿ. ನೀವು ಸಾಮಾಜಿಕ ಕಳಕಳಿ ಹೊಂದಬೇಕು. ಭವಿಷ್ಯದ ಶಿಕ್ಷಕರಾಗುವ ನೀವು ಆಧುನಿಕ ತಂತ್ರಜ್ಞಾನಗಳನ್ನು ಬಳಸಿಕೊಂಡು ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಬೇಕು' ಎಂದು ಸಲಹೆ ನೀಡಿದರು.



ಶಿಕಾರಿಪುರದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ ಪೌರತ್ವ ತರಬೇತಿ ಶಿಬಿರದಲ್ಲಿ ಶಾಸಕ ಬಿ.ವೈ.ರಾಘವೇಂದ್ರ ಮಾತನಾಡಿದರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಡಾ.ಜಿ.ಆರ್. ಹೆಗಡೆ, 'ದೇಶದ ಶಕ್ತಿ ಹಳ್ಳಿಗಳಲ್ಲಿದೆ. ಹಳ್ಳಿಗಳು ಅಭಿವೃದ್ಧಿಯಾದರೆ ದೇಶ ಅಭಿವೃದ್ಧಿ ಆಗುತ್ತದೆ. ಗಾಂಧೀಜಿ ಕೂಡ ಗ್ರಾಮ ಸ್ವರಾಜ್ ಕಲ್ಪನೆ ಹೊಂದಿದ್ದರು. ಗ್ರಾಮೀಣ ಜನರ ಬದುಕನ್ನು ಪೌರತ್ವ ಶಿಬಿರ ನಿಮಗೆ ಪರಿಚಯಿಸುತ್ತದೆ' ಎಂದು ತಿಳಿಸಿದರು.

'ದೇಶದ ಪ್ರಜೆಗಳಾದ ನಾವು ಸಂವಿಧಾನ ನೀಡಿದ ಮೂಲಭೂತ ಹಕ್ಕುಗಳನ್ನು ಅನುಭವಿಸುವುದರ ಜತೆಗೆ ಕರ್ತವ್ಯಗಳನ್ನೂ ನಿರ್ವಹಿಸಬೇಕು' ಎಂದು ಸಲಹೆ ನೀಡಿದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಿಬಿರದ ಸಂಚಾಲಕ ಡಾ.ವೀರೇಂದ್ರ ಕುಮಾರ್ ವಾಲಿ, ಗ್ರಾಮೀಣ ಜನರ ಜೀವನ ಆಚಾರ, ವಿಚಾರ, ನಂಬಿಕೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವ ಉದ್ದೇಶವನ್ನು ಈ ಶಿಬಿರ ಹೊಂದಿದೆ. ಪಠ್ಯಕ್ರಮದ ಆಚೆಯ ಬದುಕನ್ನು ಇದು ಕಲಿಸುತ್ತದೆ ಎಂದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಬಿ.ಶಿವಕುಮಾರ್ ಉದ್ಘಾಟಿಸಿದರು. ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯ ಪ್ರಾಂಶುಪಾಲ ಡಾ.ವಿ.ಆರ್. ಜಯಶ್ರೀ, ಪದವಿಪೂರ್ವ ಕಾಲೇಜು ಪ್ರಾಂಶುಪಾಲ ಡಾ.ವೀರೇಂದ್ರಗೌಡ, ಶಿಬಿರದ ಸಂಚಾಲಕಿ ವಾಣಿನಾಯಕಿ, ಉಪನ್ಯಾಸಕರಾದ ದೇವರಾಜ್, ಶಿವಕುಮಾರ್, ಯದ್‌ಕುಮಾರ್, ರವಿಕುಮಾರ್, ಕಿರಣ್‌ಕುಮಾರ್, ರವಿ, ನಾಗೇಂದ್ರಪ್ಪ ಉಪಸ್ಥಿತರಿದ್ದರು.

ಉದಯವಾಣಿ ದಿನಾಂಕ : 05-05-2017 ಶುಕ್ರವಾರ ಪುಟ-02

# ಪೌರತ್ವ ತರಬೇತಿ ಶಿಬಿರ



ಶಿಕಾರಿಪುರ: ಪೌರತ್ವ ತರಬೇತಿ ಶಿಬಿರದಲ್ಲಿ ಶಾಸಕ ಬಿ. ವೈ. ರಾಘವೇಂದ್ರ ಮಾತನಾಡಿದರು.

**ಶಿಕಾರಿಪುರ:** ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಹಾಗೂ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದ ವತಿಯಿಂದ ಪೌರತ್ವ ತರಬೇತಿ ಶಿಬಿರ ನಡೆಯಿತು.

ಶಿಬಿರ ಉದ್ಘಾಟಿಸಿ ಮಾತನಾಡಿದ ತಾಲೂಕಿನ ಶಾಸಕ ಮತ್ತು ಸಂಸ್ಥೆಯ ಕಾರ್ಯದರ್ಶಿ ಬಿ.ವೈ. ರಾಘವೇಂದ್ರ, ಜಗತ್ತಿನ ಮಹಾಯುದ್ಧಗಳಲ್ಲಿ ಜರ್ಜರಿತವಾದ ಜಪಾನ್ ದೇಶವು ಕೆಲವೇ ವರ್ಷಗಳಲ್ಲಿ ಪ್ರಪಂಚದ ಮುಂದುವರಿದ ದೇಶಗಳ ಪಟ್ಟಿಯಲ್ಲಿದ್ದು ಜಾಗತಿಕ ಪ್ರಸಿದ್ಧಿ ಪಡೆದಿದೆ. ಇದಕ್ಕೆ ಕಾರಣ ಆ ದೇಶದ ಜನ. ನಾನು ನನ್ನ ದೇಶಕ್ಕೆ ನೀಡಬೇಕಾದ ಕೊಡುಗೆಯ ಬಗ್ಗೆ ಚಿಂತಿಸುವುದಲ್ಲದೆ ನಿರಂತರ ಪರಿಶ್ರಮದಿಂದ ದುಡಿಯುತ್ತಿರುವುದರಿಂದಲೇ ಸಾಧ್ಯವಾಗಿದೆ. ಆದರೆ ಭಾರತದಂತ ಮುಂದುವರಿಯುತ್ತಿರುವ ರಾಷ್ಟ್ರಗಳಲ್ಲಿ ಕೇವಲ ದೇಶ ನನಗೇನು ಕೊಟ್ಟಿದೆ ನಮ್ಮ ಹಕ್ಕುಗಳೇನು ಎಂಬುದರ ಕಡೆಗೆ ಮಾತ್ರ ನಮ್ಮ ಆಲೋಚನೆಗಳಿರುತ್ತವೆ. ಆದರೆ ನಾನು ನನ್ನ ದೇಶಕ್ಕಾಗಿ ಏನು ಕೊಡುಗೆ ನೀಡಬೇಕು, ನನ್ನ ಜವಬ್ದಾರಿಗಳು ಮತ್ತು ಕರ್ತವ್ಯಗಳೇನು ಎಂಬುದನ್ನು ಮರೆತು ನಡೆಯುತ್ತಿದ್ದೇವೆ. ಸಾಮಾನ್ಯ ಶಿಕ್ಷಕರಾಗಿ ದೇಶದ ಅತ್ಯುನ್ನತ ಹುದ್ದೆಯನ್ನೇರಿದ ಡಾ| ಸರ್ವೇಪಲ್ಲಿ ರಾಧಾಕೃಷ್ಣನ್ ಅವರ ಜೀವನ ನಮಗೆ ಮಾರ್ಗದರ್ಶನವಾಗಬೇಕು ಎಂದರು.

ಮುಖ್ಯ ಅತಿಥಿಗಳಾಗಿದ್ದ ಶಿಕಾರಿಪುರ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಚಾರ್ಯ ಪ್ರೊ| ಜಿ.ಆರ್. ಹೆಗಡೆ ಮಾತನಾಡಿ, ಭಾರತ ಹಳ್ಳಿಪ್ರಧಾನವಾದ ದೇಶವಾಗಿದ್ದು ನಮ್ಮ ದೇಶದ ಅಭಿವೃದ್ಧಿಗೆ ಗ್ರಾಮಗಳು ಅವಶ್ಯವಾಗಿವೆ. ಅಭಿವೃದ್ಧಿ ಹೊಂದಲು ಶಿಕ್ಷಣ ಕ್ಷೇತ್ರದಲ್ಲಿ ತನ್ನ ಜವಾಬ್ದಾರಿಯನ್ನು ಸಾರ್ವಜನಿಕರು ನಿರ್ವಹಿಸಬೇಕು ಎಂದರು. ಸಂಸ್ಥೆಯ ಅಧ್ಯಕ್ಷ ಎಂ.ಬಿ. ಶಿವಕುಮಾರ್, ಪ್ರಾಚಾರ್ಯೆ ಡಾ| ಜಯಶ್ರೀ ಮತ್ತಿತರರು ಇದ್ದರು.

ಕನ್ನಡ ಪ್ರಭ ದಿನಾಂಕ : 16–05–2017 ಮಂಗಳವಾರ ಪುಟ–04

# ಜ್ಞಾನಾಭಿವೃದ್ಧಿಗೆ ಓದು ಅತ್ಯಗತ್ಯ: ಮಂಜುನಾಥ್

## ಕುಮದ್ವತಿ ವಿದ್ಯಾಲಯದಲ್ಲಿ ಸಾಹಿತ್ಯ ಕೃತಿಗಳ ಓದು– ಲೇಖಕರೊಂದಿಗೆ ಸಾಹಿತ್ಯ ರಸಗ್ರಹಣ ಸಂವಾದ

• **ಕನ್ನಡಪ್ರಭ ವಾರ್ತೆ** ಶಿಕಾರಿಪುರ

ಜ್ಞಾನಾಭಿವೃದ್ಧಿಗೆ ಪ್ರತಿಯೊಬ್ಬರಿಗೂ ಕಥೆ, ಸಾಹಿತ್ಯ, ಪುಸ್ತಕದ ಅಧ್ಯಯನ ಅತ್ಯಗತ್ಯ ಎಂದು ಜಿಲ್ಲಾ ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಡಿ.ಮಂಜುನಾಥ ತಿಳಿಸಿದರು.

ಪಟ್ಟಣದ ಕುಮದ್ವತಿ ಶಿಕ್ಷಣ ಮಹಾವಿದ್ಯಾಲಯದಲ್ಲಿ ಜಿಲ್ಲಾ ಕನ್ನಡಸಾಹಿತ್ಯ ಸಾಂಸ್ಕೃತಿಕವೇದಿಕೆ, ಕರ್ನಾಟಕಜಾನಪದಪರಿಷತ್, ಸ್ವಾಮಿ ವಿವೇಕಾನಂದ ಶಿಕ್ಷಣ ಸಂಸ್ಥೆಯ ವತಿಯಿಂದ ನಡೆದ ಸಾಹಿತ್ಯ ಕೃತಿಗಳ ಓದು ಹಾಗೂ ಲೇಖಕರೊಂದಿಗೆ ಸಾಹಿತ್ಯ ರಸಗ್ರಹಣ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಕನ್ನಡ ಸಾಹಿತ್ಯ ಅತ್ಯಂತ ಶ್ರೀಮಂತವಾಗಿದ್ದು ಸಾಹಿತ್ಯ ಕಥೆ ಪುಸ್ತಕಗಳ ಅಧ್ಯಯನದಿಂದ ಪ್ರತಿಯೊಬ್ಬರಲ್ಲಿಯೂ ಜ್ಞಾನ ವೃದ್ಧಿಯಾಗಲಿದೆ.

ಕನ್ನಡ ಸಾಹಿತ್ಯದ ಪುಸ್ತಕಗಳ ಅಧ್ಯಯನ ಹವ್ಯಾಸವನ್ನು ಪ್ರತಿಯೊಬ್ಬರೂ ರೂಢಿಸಿಕೊಳ್ಳಬೇಕು ಎಂದು ತಿಳಿಸಿದರು.

ಪುಸ್ತಕಗಳ ಅಧ್ಯಯನದಿಂದ ನೆಮ್ಮದಿ ಆನಂದ ದೊರೆಯಲಿದ್ದು ಪ್ರಶಿಕ್ಷಣಾರ್ಥಿಗಳು ಕೇವಲ ಅಂಕಗಳಿಕೆಯ ಉದ್ದೇಶದಿಂದ ಮಾತ್ರ ಪಠ್ಯದಲ್ಲಿನ ನಿರ್ದಿಷ್ಟ ವಿಷಯದ ಬಗ್ಗೆ ಅಧ್ಯಯನವನ್ನು ಸೀಮಿತಗೊಳಿಸಿಕೊಂಡಿದ್ದಾರೆ. ಈ ಮನೋಭಾವ ವಿದ್ಯಾರ್ಥಿಗಳ ಓದಿನ ಹವ್ಯಾಸವನ್ನು ಮೊಟಕುಗೊಳಿಸಿದೆ.

ಪರಿಸ್ಥಿತಿಯನ್ನು ಬದಲಾಯಿಸಿ ಪ್ರತಿಯೊಬ್ಬರಲ್ಲಿಯೂ ಓದುವ ಹವ್ಯಾಸವನ್ನು ಬೆಳೆಸಲು ರಸಗ್ರಹಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದರು.


ಭದ್ರಾವತಿಯ ಜಿ.ವಿ ಸಂಗಮೇಶರವರ ಐತಿಹಾಸಿಕ ಕಾದಂಬರಿ ಮಹಾವೀರ ಮಡಿವಾಳ ಮಾಚಿದೇವ ಕೃತಿ ಬಗ್ಗೆ ಸಾಹಿತಿ ಪ್ರೊ.ಕೆ ಓಂಕಾರಪ್ಪ ಮಾತನಾಡಿ, ವಚನಕಾರರ ಬಗೆಗಿನ ಸತ್ಯಾಸತ್ಯತೆಯನ್ನು ಅರಿಯಲು ವಚನಗಳ ಅಧ್ಯಯನ ಅಗತ್ಯವಾಗಿದೆ.

12ನೇ ಶತಮಾನ ದಲ್ಲಿ ಶರಣರ ನೇರ ನುಡಿಗೆ ಮಡಿವಾಳ ಮಾಚಿದೇವ ಹಾಗೂ ಅಂಬಿಗರ ಚೌಡಯ್ಯ ಪ್ರಸಿದ್ಧರಾಗಿದ್ದರು ಎಂದು ತಿಳಿಸಿದರು.

ಪ್ರಾಚಾರ್ಯೆ ಡಾ.ಜಯಶ್ರೀ ಮಾತನಾಡಿ, ತಂತ್ರಜ್ಞಾನದ ವೇಗದ ಅಭಿವೃದ್ಧಿಯ ಪರಿಣಾಮವಾಗಿ ಹಲವು ಮಾಹಿತಿಗಳನ್ನು ಕ್ಷಣದಲ್ಲಿಯೇ ಪಡೆದುಕೊಳ್ಳುವ ಅವಕಾಶವಿದ್ದು ಅದನ್ನು ಬಳಸಿಕೊಂಡು ಸಾಹಿತ್ಯದ ರಚನೆ, ಅಧ್ಯಯನ, ವಸ್ತು ವಿಷಯ ಅವಲೋಕನೆ ಬಗ್ಗೆ ಗಮನಹರಿಸಬೇಕಾಗಿದೆ ಎಂದು ಹೇಳಿದರು.

ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯ ಸಮನ್ವಯಾಧಿಕಾರಿ ಕೆ. ಕುಬೇರಪ್ಪ, ಕರ್ನಾಟಕ ಜಾನಪದ ಪರಿಷತ್ ಅಧ್ಯಕ್ಷ ಬಿ.ಪಾಪಯ್ಯ, ತಾಲೂಕು ಕನ್ನಡ ಸಾಹಿತ್ಯ ಸಾಂಸ್ಕೃತಿಕ ವೇದಿಕೆ ಅಧ್ಯಕ್ಷ ಡಿ.ಕೆ ಚಂದ್ರಪ್ಪ, ಗೌರವಾಧ್ಯಕ್ಷ ಕೆ.ಎಸ್ ಹುಚ್ರಾಯಪ್ಪ ಇತರರು ಇದ್ದರು.

ಪ್ರಜಾವಾಣಿ ದಿನಾಂಕ : 18–06–2017 ಭಾನುವಾರ ಪುಟ–03



ಶಿಕಾರಿಪುರದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಶನಿವಾರ ನಡೆದ ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಶಾಸಕ ಬಿ.ವೈ. ರಾಘವೇಂದ್ರ ಮಾತನಾಡಿದರು.

# ಕಠಿಣ ಪರಿಶ್ರಮದಿಂದ ಸಾಧನೆ ಸಾಧ್ಯ: ರಾಘವೇಂದ್ರ

ಪ್ರಜಾವಾಣಿ ವಾರ್ತೆ

ಶಿಕಾರಿಪುರ: 'ಕಠಿಣ ಪರಿಶ್ರಮದಿಂದ ಮಾತ್ರ ಯಾವುದೇ ಕ್ಷೇತ್ರದಲ್ಲಿ ಸಾಧನೆ ಮಾಡಲು ಸಾಧ್ಯ' ಎಂದು ಶಾಸಕ ಬಿ.ವೈ. ರಾಘವೇಂದ್ರ ಸಲಹೆ ನೀಡಿದರು.

ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ಶನಿವಾರ ನಡೆದ ಪ್ರತಿಭಾ ಪುರಸ್ಕಾರ ಹಾಗೂ ನೂತನ ವಿದ್ಯಾರ್ಥಿಗಳಿಗೆ ಸ್ವಾಗತ ಸಮಾರಂಭದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

'ಸಾಧನೆ ಮಾಡಲು ಯಾವುದೇ ಅಡ್ಡ ದಾರಿ ಇಲ್ಲ. ಯಾವುದೇ ವಿದ್ಯಾಸಂಸ್ಥೆ ಉನ್ನತ ಮಟ್ಟಕ್ಕೆ ಬೆಳೆಯಲು ಶಿಕ್ಷಕರು ಹಾಗೂ ವಿದ್ಯಾರ್ಥಿಗಳ ಶ್ರಮ ಪ್ರಮುಖ ಪಾತ್ರ ವಹಿಸುತ್ತದೆ. ಪ್ರತಿ ವಿದ್ಯಾರ್ಥಿಯಲ್ಲೂ ಪ್ರತಿಭೆ ಅಡಗಿದೆ. ಅದನ್ನು ಗುರುತಿಸುವ ಕಾರ್ಯ ಆಗಬೇಕು' ಎಂದು ತಿಳಿಸಿದರು. 'ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ಪ್ರತಿಭಾ ಪುರಸ್ಕಾರ ಸ್ವೀಕರಿಸಿದ ವಿದ್ಯಾರ್ಥಿಗಳು ವಿದ್ಯಾಸಂಸ್ಥೆ ಬೆಳವಣಿಗೆಗೆ ಕಾರಣರಾಗುತ್ತಾರೆ' ಎಂದು ಶ್ಲಾಘಿಸಿದರು.

ಸಮಾರಂಭ ಉದ್ಘಾಟಿಸಿದ ಶಿವಮೊಗ್ಗ ಪೇಸ್ ಕಾಲೇಜಿನ ಪ್ರಾಂಶುಪಾಲ ಪ್ರೊ.ವಿಶ್ವನಾಥಯ್ಯ ಮಾತನಾಡಿ, 'ಪ್ರಸ್ತುತ ವಿದ್ಯಾರ್ಥಿಗಳು ಮೊಬೈಲ್ ಬಳಕೆಯಲ್ಲಿ ಹೆಚ್ಚು ಕಾಲಹರಣ ಮಾಡುತ್ತಿರುವ ಹಿನ್ನೆಲೆ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಸಾಧನೆ ಮಾಡಲು ಸಾಧ್ಯವಾಗುತ್ತಿಲ್ಲ' ಎಂದು ವಿಷಾದ ವ್ಯಕ್ತಪಡಿಸಿದರು.

ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಶಿಕ್ಷಣ ನೀಡುವ ನಿಟ್ಟಿನಲ್ಲಿ ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಶ್ರಮಿಸುತ್ತಿದೆ' ಎಂದು ಶ್ಲಾಘಿಸಿದರು.

ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆ ಅಧ್ಯಕ್ಷ ಎಂ.ಬಿ. ಶಿವಕುಮಾರ್, ನಿರ್ದೇಶಕಿ ತೇಜಸ್ವಿನಿ ರಾಘವೇಂದ್ರ, ಸಮನ್ವಯಾಧಿಕಾರಿ ಕುಬೇರಪ್ಪ, ಪ್ರಾಂಶುಪಾಲರು ಉಪಸ್ಥಿತರಿದ್ದರು.

ಇದೇ ಸಂದರ್ಭದಲ್ಲಿ ಅತಿ ಹೆಚ್ಚು ಅಂಕಗಳಿಸಿದ ವಿದ್ಯಾಸಂಸ್ಥೆಯ ಎಸ್ಸೆಸ್ಸೆಲ್ಸಿ, ಪಿಯು ಹಾಗೂ ಪದವಿ ಕಾಲೇಜು ವಿದ್ಯಾರ್ಥಿ ಗಳನ್ನು ಸನ್ಮಾನಿಸಲಾಯಿತು.

ಕನ್ನಡ ಪ್ರಭ ದಿನಾಂಕ : 16–08–2017 ಬುಧವಾರ ಪುಟ–04

# ದೇಶಕ್ಕೆ ಹೋರಾಡಿದವರ ಆದರ್ಶ ಪಾಲಿಸಿ

## ವಿವೇಕಾನಂದ ಶಾಲೆ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಬಿ.ವೈ. ರಾಘವೇಂದ್ರ

**ಕನ್ನಡಪ್ರಭ ವಾರ್ತೆ ಶಿಕಾರಿಪುರ**

ದೇಶದ ಸ್ವಾತಂತ್ರ್ಯಕ್ಕಾಗಿ ಹಲವು ಮಹಾನ್ ವ್ಯಕ್ತಿಗಳು ತಮ್ಮ ಅಮೂಲ್ಯ ಜೀವನವನ್ನು ತ್ಯಾಗ ಬಲಿದಾನಗೈದಿದ್ದು, ಇಂದಿನ ಪೀಳಿಗೆಯು ಅವರ ಆದರ್ಶಗಳನ್ನು ಮೈಗೂಡಿಸಿಕೊಳ್ಳಬೇಕಾಗಿದೆ ಎಂದು ಶಾಸಕ ಬಿ.ವೈ. ರಾಘವೇಂದ್ರ ಹೇಳಿದರು. 71ನೇ ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ಮಂಗಳವಾರ ಪಟ್ಟಣದ ಸ್ವಾಮಿ ವಿವೇಕಾನಂದ ವಿದ್ಯಾ ಸಂಸ್ಥೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ಬ್ರಿಟಿಷರ ದಾಸ್ಯದಿಂದ ಹೊರಬಂದು ದೇಶ ಸ್ವಾತಂತ್ರ್ಯಗಳಿಸಲು ಹಲವು ಮಹಾನ್ ವ್ಯಕ್ತಿಗಳು ತ್ಯಾಗ ಬಲಿದಾನಗೈದಿದ್ದಾರೆ. ಸುಭಾಷಚಂದ್ರ ಬೋಸ್, ಬಾಲ ಗಂಗಾಧರತಿಲಕ್, ಮಹಾತ್ಮ ಗಾಂಧೀಜಿ ಮತ್ತಿತರರ ಹೋರಾಟದ ಬದುಕು ಪ್ರತಿ ಭಾರತೀಯರ ರೋಮವನ್ನು ನೆಟ್ಟಗಾಗಿಸುವಂಥ ರೋಚಕತೆಯಿಂದ ಕೂಡಿದೆ. ತಾಲೂಕಿನ ಈಸೂರು ಗ್ರಾಮ ಸ್ವಾತಂತ್ರ್ಯವನ್ನು ಘೋಷಿಸಿಕೊಂಡ ಪ್ರಥಮ ಗ್ರಾಮ ಎಂಬ ಹೆಗ್ಗಳಿಕೆಯನ್ನು ಹೊಂದಿದ್ದು, ತಾಲೂಕಿನ ಹೋರಾಟದ ಚರಿತ್ರೆಗೆ ಸಾಕ್ಷಿಯಾಗಿದೆ. ಬ್ರಿಟಿಷರ ತೆರಿಗೆ ನೀತಿಯನ್ನು ಅತ್ಯುಗ್ರವಾಗಿ ವಿರೋಧಿಸಿದ ಯುವಕ ದೇವಪ್ಪನ ಹೋರಾಟ ಧೈರ್ಯವನ್ನು ಪ್ರಶಂಸಿಸಿದರು.

ಹಲವು ಮಹಾನ್ ವ್ಯಕ್ತಿಗಳಿಗೆ ಜನ್ಮ ನೀಡಿದ ದೇಶಕ್ಕಾಗಿ ಕನಿಷ್ಠ ಸಮಯವನ್ನು ಪ್ರತಿಯೊಬ್ಬರೂ ನಿತ್ಯ ಮೀಸಲಿರಿಸಬೇಕಾಗಿದೆ. ಜಾಗತಿಕ ಭಯೋತ್ಪಾದನೆಯಿಂದಾಗಿ ಇಂದು ಆತಂಕದ ವಾತಾವರಣ ನಿರ್ಮಾಣವಾಗಿದೆ. ಆರ್ಥಿಕ ಕಾರಿಡಾರ್ ನಿರ್ಮಾಣದ ಮೂಲಕ ಚೀನಾ ಪರೋಕ್ಷವಾಗಿ ದೇಶದ ಮೇಲೆ ಹಿಡಿತಕ್ಕೆ ಸಂಚು ರೂಪಿಸುತ್ತಿದೆ. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಯುವಶಕ್ತಿಯ ಕೊಡುಗೆ ದೇಶಕ್ಕೆ ಅತ್ಯಮೂಲ್ಯವಾಗಿದೆ. ಮಾಹಿತಿ ತಂತ್ರಜ್ಞಾನದಲ್ಲಿ ದೇಶದ ಯುವಪೀಳಿಗೆಯ ಬುದ್ಧಿವಂತಿಕೆಯನ್ನು ಭವಿಷ್ಯದ ಭಾರತದ ಅಭಿವೃದ್ಧಿಯಿಂದ ಕಾಣಬಹುದಾಗಿದೆ ಎಂದು ತಿಳಿಸಿದರು.



ಸ್ವಾಮಿ ವಿವೇಕಾನಂದ ವಿದ್ಯಾಸಂಸ್ಥೆಯಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಶಾಸಕ ರಾಘವೇಂದ್ರ ಮಕ್ಕಳಿಂದ ಗೌರವ ರಕ್ಷೆ ಸ್ವೀಕರಿಸಿದರು.

ಸಂಸ್ಥೆ ವಿದ್ಯಾರ್ಥಿಗಳಿಂದ ಆಕರ್ಷಕ ಪಥಸಂಚಲನ ನಡೆಯಿತು. ನಿರ್ದೇಶಕಿ ತೇಜಸ್ವಿನಿ, ಶೈಕ್ಷಣಿಕ ಮಾರ್ಗದರ್ಶಕ ಎಸ್.ಎಸ್. ಗದಗ್, ಸಂಯೋಜನಾಧಿಕಾರಿ ಕುಬೇರಪ್ಪ, ದಯಾನಂದ್, ಪ್ರಾಂಶುಪಾಲ ಲಿಂಗರಾಜ್, ಜಯಶ್ರೀ ವಿ.ಆರ್., ವೀರೇಂದ್ರಗೌಡ, ವಿನಾಯಕ ಮತ್ತಿತರರು ಉಪಸ್ಥಿತರಿದ್ದರು.